ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ
ಬೆಂಗಳೂರು

ಮಾನ್ಯರೆ,

ವಿಷಯ: ಶ್ರೀ ಉಮಾನಾಥ ಎ ಕೋಟ್ಯಾನ್ (ಮೂಡಬಿದ್ರೆ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1027 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.1027/2020, ದಿನಾಂಕ:04.12.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಉಮಾನಾಥ ಎ ಕೋಟ್ಯಾನ್ (ಮೂಡಬಿದ್ರೆ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1027 ಗೆ ಸಂಬಂಧಿಸಿದ ಉತ್ತರವನ್ನು ಸಿದ್ಧಪಡಿಸಿ 30 ಉತ್ತರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ

Chetna.M 11/12

(ಚೇತನ ಎಂ.)
ಶಾಖಾಧಿಕಾರಿ, ಜಿ-ಶಾಖೆ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಉಮಾನಾಥ ಎ ಕೋಟ್ಯಾನ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1027
ಉತ್ತರಿಸಬೇಕಾದ ದಿನಾಂಕ	:	11.12.2020
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಕಾನೂನು ನಿಯಮಗಳಡಿಯಲ್ಲಿ ಕರ್ತವ್ಯ ನಿರ್ವಹಿಸುವ ಹಾಗೂ ನಿಗದಿತ ಕಾಲದಲ್ಲಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಕುರಿತು ಪ್ರಸ್ತುತ ಇರುವ ನಿಯಮಗಳು ಯಾವುವು;	ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಾವಳಿಗಳು 1960 ರ ಅವಕಾಶಗಳಂತೆ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಸದರಿ ಸಂಘಗಳು ಸದಸ್ಯರಿಗೆ ನಿವೇಶನ ಹಂಚುವ ಸಂಬಂಧ ಕಾಯ್ದೆ ಕಲಂ 30 ಬಿ ರಲ್ಲಿನ ಅವಕಾಶಗಳಂತೆ ಸರ್ಕಾರದ ಆದೇಶ ಸಂಖ್ಯೆ: ಸಿಒ/105/ಸಿಎಲ್ಎಂ/2010 ದಿನಾಂಕ:20.11.2010 ರಂತೆ ಮಾರ್ಗಸೂಚಿಗಳನ್ನು/ ನಿರ್ದೇಶನಗಳನ್ನು ನೀಡಲಾಗುತ್ತದೆ.
ಆ	ನಿವೇಶನ ಹಂಚಿಕೆಗೆ ಕನಿಷ್ಟ ಹಾಗೂ ಗರಿಷ್ಟ ಕಾಲಾವಧಿಯನ್ನು ನಿಗಧಿಪಡಿಸಲಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು;	ನಿವೇಶನ ಹಂಚಿಕೆಗೆ ಕನಿಷ್ಟ ಹಾಗೂ ಗರಿಷ್ಟ ಕಾಲಾವಧಿಯನ್ನು ನಿಗಧಿಪಡಿಸಲಾಗಿರುವುದಿಲ್ಲ. ದೀರ್ಘಕಾಲದವರೆಗೆ ನಿವೇಶನಗಳ ಹಂಚಿಕೆಯಲ್ಲಿ ವಿಳಂಬವಾಗುತ್ತಿರುವುದು ಇಲಾಖೆಯ ಗಮನದಲ್ಲಿದೆ. ಗೃಹ ನಿರ್ಮಾಣ ಸಹಕಾರ ಸಂಘಗಳು ಭೂಮಿ ಖರೀದಿಯಿಂದ ಪ್ರಾರಂಭಿಸಿ ನಿವೇಶನ ಹಂಚಿಕೆಯವರೆಗೆ ಹಲವಾರು ಇಲಾಖೆಗಳ ಅನುಮತಿ, ಅನುಮೋದನೆಯೊಡನೆ ಕೆಲಸ ನಿರ್ವಹಿಸಬೇಕಿದೆ. ಅವುಗಳಲ್ಲಿ ಮುಖ್ಯವಾಗಿ ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ವಿದ್ಯುತ್ ಸರಬರಾಜು ಮಂಡಳಿ, ನೀರು ಸರಬರಾಜು ಮಂಡಳಿ, ನೈರ್ಮಲ್ಯ ನಿಯಂತ್ರಣ ಮಂಡಳಿ, ಸ್ಥಳೀಯ ಪ್ರಾಧಿಕಾರಗಳು ಹೀಗೆ ಇತ್ಯಾದಿ ಇಲಾಖೆಗಳು ಮತ್ತು ಪ್ರಾಧಿಕಾರಗಳಿಂದ ಹಂತಹಂತವಾಗಿ ಅನುಮತಿ/ ಅನುಮೋದನೆಗಳನ್ನು ಪಡೆದು ಬಡಾವಣೆ ನಿರ್ಮಾಣ ಕೆಲಸಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಭೂ ವ್ಯಾಜ್ಯಗಳು ದಾಖಲಾದಲ್ಲಿ, ವ್ಯಾಜ್ಯಗಳು ಇತ್ಯರ್ಥವಾಗುವವರೆಗೆ ಬಡಾವಣೆ ನಿರ್ಮಾಣದ ಕೆಲಸಗಳ ಮೇಲೆ ಪರಿಣಾಮ ಉಂಟಾಗಿ ಸಹಜವಾಗಿ ವಿಳಂಬ ಉಂಟಾಗುತ್ತಿದೆ. ಈ ಕಾರಣಗಳಿಂದಾಗಿ ಗೃಹ ನಿರ್ಮಾಣ ಸಹಕಾರ ಸಂಘಗಳು ನಿವೇಶನ ಹಂಚಿಕೆಯಲ್ಲಿ ವಿಳಂಬವಾಗುತ್ತಿರುವುದು ಇಲಾಖೆಯ ಗಮನದಲ್ಲಿದೆ.
ಇ)	ಗರಿಷ್ಟ ಕಾಲಾವಧಿ ಮೀರಿದ್ದರೂ ನಿವೇಶನ ಹಂಚಿಕೆ ಮಾಡದಿದ್ದಲ್ಲಿ ಹಾಗೂ ಚಟುವಟಿಕೆಗಳು ಸ್ತಬ್ಧಗೊಂಡಿದ್ದಲ್ಲಿ ಅಂತಹ ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಇಲಾಖೆ ಕೈಗೊಂಡಿರುವ ಕ್ರಮಗಳೇನು;	ನಿವೇಶನಗಳ ಹಂಚಿಕೆಯಾಗದಿರುವ ಬಗ್ಗೆ ಸದಸ್ಯರು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿಯಲ್ಲಿ ವಿವಿಧ ಪ್ರಾಧಿಕಾರದಲ್ಲಿ ವ್ಯಾಜ್ಯಗಳನ್ನು ದಾಖಲಿಸಿ ಪರಿಹಾರ ಕಂಡುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ ಬಡಾವಣೆ ರಚಿಸಲು ಕ್ರಮವಿಟ್ಟು, ಪ್ರಕ್ರಿಯೆ ಸ್ಥಗಿತಗೊಂಡು ನಿವೇಶನ ಠೇವಣಿದಾರರಿಗೆ ತೊಂದರೆಗಳು ಉಂಟಾಗುವ ಸಂದರ್ಭಗಳನ್ನು

		ಉಂಟಾಗುವ ಸಂದರ್ಭಗಳನ್ನು ಅರಿತು ಸಾರ್ವಜನಿಕರಿಂದ ದೂರುಗಳನ್ನು ಆಧರಿಸಿ ಗಂಭೀರತರವಾದ ಆರೋಪ ಹೊಂದಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿ ಶಾಸನಬದ್ಧ ವಿಚಾರಣೆ ಮತ್ತು ಕಲಂ 65ರಡಿ ಶಾಸನಬದ್ಧ ಪರಿವೀಕ್ಷಣೆಗೆ ಆದೇಶಿಸಲಾಗಿರುತ್ತದೆ. ಸದರಿ ಶಾಸನಬದ್ಧ ವರದಿಯನ್ನಾಧರಿಸಿ, ಮುಂದಿನ ಅನುಸರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
ಈ)	10 ರಿಂದ 15 ವರ್ಷಗಳ ಕಾಲಾವಧಿ ಮುಗಿದಿದ್ದರೂ ನಿವೇಶನವನ್ನು ಹಂಚದೇ ಇರುವ ಹಾಗೂ ಸದಸ್ಯರ ಹಣವನ್ನು ಹಿಂತಿರುಗಿಸಲು ಅಸಾಧ್ಯವಾಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಕುರಿತು ಸರ್ಕಾರವು ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ;	10 ರಿಂದ 15 ವರ್ಷಗಳ ಕಾಲಾವಧಿ ಮುಗಿದಿದ್ದರೂ ನಿವೇಶನವನ್ನು ಹಂಚದೇ ಇರುವ ಹಾಗೂ ಸದಸ್ಯರ ಹಣವನ್ನು ಹಿಂತಿರುಗಿಸಲು ಅಸಾಧ್ಯವಾಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಕುರಿತು ತೀವ್ರತರನಾದ ದೂರುಗಳು ಪ್ರಾಪ್ತವಾದ ಸಂದರ್ಭದಲ್ಲಿ ಇಲಾಖಾಧಿಕಾರಿಗಳಿಂದ ಪರಿಶೀಲನೆಗೆ ಒಳಪಡಿಸಿ ಇತ್ಯರ್ಥಗೊಳಿಸಲಾಗುತ್ತಿದೆ. ಅಗತ್ಯ ಕಂಡು ಬಂದ ಪ್ರಕರಣಗಳಲ್ಲಿ ಶಾಸನಬದ್ಧ ಕಲಂ 64 ರ ವಿಚಾರಣೆ ಮತ್ತು 65 ರ ಪರಿವೀಕ್ಷಣೆಗೆ ಒಳಪಡಿಸುವುದರ ಮೂಲಕ ನಿವೇಶನಾಕಾಂಕ್ಷಿಗಳ ಹಿತ ಕಾಪಾಡುವ ಕ್ರಮವನ್ನು ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ. ಇದಲ್ಲದೆ, ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ಸದಸ್ಯರು ಸೂಕ್ತ ಪ್ರಾಧಿಕಾರದಲ್ಲಿ ವ್ಯಾಜ್ಯಗಳನ್ನು ದಾಖಲಿಸಿ ಪರಿಹಾರ ಕಂಡುಕೊಳ್ಳಲು ಅವಕಾಶವಿರುತ್ತದೆ.
ಉ	ಸದಸ್ಯರಿಗೆ ಗರಿಷ್ಟ ಅವಧಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡದೆ ಇರುವ ಕುರಿತು ಸದಸ್ಯರಿಂದ ದೂರುಗಳು ಬಂದಿರುವ ಗೃಹ ನಿರ್ಮಾಣ ಸಹಕಾರಿ ಸಂಘಗಳು ಎಷ್ಟು ?(ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳ ಪೂರ್ಣ ವಿವರ ಒದಗಿಸುವುದು)	ನಿವೇಶನ ಹಂಚಿಕೆ ಸಂಬಂಧ ಗರಿಷ್ಟ ಅವಧಿ ನಿಗಧಿಪಡಿಸದೆ ಇರುವುದರಿಂದ ಅಂತಹ ಸಂಘಗಳ ವಿರುದ್ಧ ಬಂದಂತಹ ಸಾಮಾನ್ಯ ದೂರು ಅರ್ಜಿಗಳನ್ನು ವಿಚಾರಣೆ ಮೂಲಕ ಪರಿಹರಿಸಿ ಸದಸ್ಯರಿಗೆ ಪರಿಹಾರದ ಮಾರ್ಗ ಸೂಚಿಸಲಾಗುತ್ತಿದೆ. ನಿವೇಶನ ಹಂಚಿಕೆ ಭಾದಿತ ಸದಸ್ಯರುಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ70 ರಡಿ ದಾವೆ ಹೂಡಿ ಪರಿಹಾರ ಕಂಡುಕೊಳ್ಳಲು ಅವಕಾಶವಿರುತ್ತದೆ.

ಸಂಖ್ಯೆ:ಸಿಒ 51 ಸಿಹೆಚ್‌ಎಸ್ 2020 (ಇ)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 52 ಸಿಹೆಚ್‌ಎಸ್ 2020 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 11.12.2020.

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-1.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ
ಬೆಂಗಳೂರು

ಮಾನ್ಯರೆ,

ವಿಷಯ: ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:978 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.978/2020, ದಿನಾಂಕ:04.12.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:978 ಗೆ ಸಂಬಂಧಿಸಿದ ಉತ್ತರವನ್ನು ಸಿದ್ಧಪಡಿಸಿ 30 ಉತ್ತರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ

Chetna M 11/12

(ಚೇತನ ಎಂ.)
ಶಾಖಾಧಿಕಾರಿ, ಜಿ-ಶಾಖೆ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	978
ಉತ್ತರಿಸಬೇಕಾದ ದಿನಾಂಕ	:	11.12.2020
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ನೊಂದಣಿಯಾಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು; (ಸಂಘಗಳ ಹೆಸರುವಾರು, ತಾಲೂಕುವಾರು ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ ದಿನಾಂಕ:30.11.2020 ಕ್ಕೆ ಇದ್ದಂತೆ ಒಟ್ಟು 36 ಗೃಹ ನಿರ್ಮಾಣ ಸಹಕಾರ ಸಂಘಗಳು ನೊಂದಣಿಯಾಗಿರುತ್ತವೆ. ಈ ಪೈಕಿ 22 ಗೃಹ ನಿರ್ಮಾಣ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಉಳಿದ 14 ಸಹಕಾರ ಸಂಘಗಳು ಸಮಾಪನೆಗೊಂಡಿರುತ್ತವೆ. ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಈ ಪೈಕಿ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳು ಸ್ಥಗಿತಗೊಂಡಿವೆ; ಸ್ಥಗಿತಗೊಳ್ಳಲು ಕಾರಣಗಳೇನು; ಸ್ಥಗಿತಗೊಳ್ಳದ ಸಹಕಾರ ಸಂಘಗಳ ಸಂಖ್ಯೆ ಎಷ್ಟು; (ಸಹಕಾರ ಕಾಯ್ದೆ ಮತ್ತು ನಿಯಮ ಉಲ್ಲೇಖವಿದ್ದರೆ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಇರುವುದಿಲ್ಲ. 22 ಗೃಹ ನಿರ್ಮಾಣ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿರುತ್ತವೆ. 14 ಸಹಕಾರ ಸಂಘಗಳು ಸಮಾಪನೆಗೊಂಡಿರುತ್ತವೆ.
ಇ)	ಈ ಜಿಲ್ಲೆಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಕಾರ್ಯವ್ಯಾಪ್ತಿ ಮೀರಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಕಾನೂನುಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನು ಹಂಚಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಅಂತಹ ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ತಾಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ನಿಯಮ ಮೀರಿ ಬಡಾವಣೆಯನ್ನು ನಿರ್ಮಿಸಿ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.
ಈ)	ಹಾಸನ ಜಿಲ್ಲೆಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ತಮ್ಮ ಸಂಘದ ಸದಸ್ಯರಲ್ಲದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದೆಯೇ; ಸಹ ಸದಸ್ಯರಿಗೆ ನಿವೇಶನ ನೀಡಲು ಸರ್ಕಾರ ನಿಗದಿಗೊಳಿಸಿರುವ ಅನುಪಾತವೇನು; (ಗೃಹ ನಿರ್ಮಾಣ ಸಹಕಾರ ಸಂಘವು ಅನುಪಾತವನ್ನು ಪಾಲಿಸಿರುವ ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)	ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮಾತ್ರ ನಿವೇಶನಗಳನ್ನು ನೀಡಲು ಅವಕಾಶಗಳಿರುತ್ತವೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 18(1) ರನ್ವಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಹೊರತುಪಡಿಸಿ ಯಾವುದೇ ಸಹಕಾರ ಸಂಘಗಳಲ್ಲಿ ಸಹಸದಸ್ಯರ ಸಂಖ್ಯೆಯು ಶೇ 15 ರಷ್ಟನ್ನು ಮೀರತಕ್ಕದ್ದಲ್ಲ ಎಂದಿರುತ್ತದೆ. ಸದರಿ ಅನುಪಾತಕ್ಕೆ ಒಳಪಟ್ಟು ಸಹ ಸದಸ್ಯರುಗಳಿಗೆ ಕಲಂ 30 ಬಿ ನಿರ್ದೇಶನದನ್ವಯ ನಿಯಮಾನುಸಾರ ನಿವೇಶನ ಹಂಚಿಕೆ ಮಾಡಲು ಸಹಕಾರ ಸಂಘದಲ್ಲಿ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ.
ಉ)	ಸಂಘದ ಸದಸ್ಯರಲ್ಲದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಲ್ಲಿ, ಅಂತಹ ಸಂಘಗಳಿಗೆ ನೀಡಿರುವ ಅನುಮತಿಯನ್ನು ರದ್ದುಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ತಾಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಸದಸ್ಯರಿಗೆ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಿರುತ್ತವೆ.

ಸಂಖ್ಯೆ:ಸಿಒ 52 ಸಿಹೆಚ್‌ಎಸ್ 2020 (ಇ)

ಎಸ್.ಟಿ. ಸೋಮಶೇಖರ್

(ಎಸ್.ಟಿ.ಸೋಮಶೇಖರ್)

ಸಹಕಾರ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 978 ಕ್ಕೆ ಅನುಬಂಧ

ಕ್ರ.ಸಂ.	ಗೃಹ ನಿರ್ಮಾಣ ಸಹಕಾರ ಸಂಘದ ಹೆಸರು	ತಾಲ್ಲೂಕು
1	ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
2	ವಿದ್ಯಾನಗರ (ಸತ್ಯಮಂಗಲ) ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
3	ಹೇಮಾವತಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
4	ಕೆ ಎಸ್ ಆರ್ ಟಿ ಸಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
5	ಕಿಂಕೊ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
6	ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
7	ಕೆ.ಜಿ. ಐ. ಡಿ. ಎಂಪ್ಲಾಯೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
8	ಎಸ್.ಬಿ.ಎಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
9	ದಿ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
10	ಹಾಸನ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
11	ಉಪಗ್ರಹ ಗೃಹ ನಿರ್ಮಾಣ ಸ.ಸಂ.ನಿ., ಎಂಸಿಎಫ್, ಹಾಸನ	ಹಾಸನ
12	ಹಾಸನ ತಾಲ್ಲೂಕು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ.	ಹಾಸನ
13	ಶ್ರೀ ಪುಷ್ಪಗಿರಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ.	ಹಾಸನ
14	ಕಂಬದ ನರಸಿಂಹಸ್ವಾಮಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
15	ಹಾಸನ ಜಿಲ್ಲಾ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
16	ಕನಕ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
17	ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ.	ಹಾಸನ
18	ಹಾಸನ ಜಿಲ್ಲಾ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
19	ಹಾಸನ ತಾಲೂಕು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
20	ಹಾಸನ ಜಿಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
21	ಹಾಸನ ಜಿಲ್ಲಾ ಇಂಜಿನಿಯರುಗಳ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ	ಹಾಸನ
22	ಗೃಹ ನಿರ್ಮಾಣ ಸಹಕಾರ ಸಂಘ ನಿ., ರಾಮನಾಥಪುರ	ಅರಕಲಗೂಡು

ಸಹಕಾರ ಸಂಘಗಳ ಸಹಾಯಕ ನಿಬಂಧಕರು
(ವಸತಿ ಮತ್ತು ಇತರೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ.
ನಂ.1. ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052.

ಸಹಕಾರ ಸಂಘಗಳ ನಿಬಂಧಕರು.
ಕರ್ನಾಟಕ ರಾಜ್ಯ, ಬೆಂಗಳೂರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 49 ಸಿಹೆಚ್‌ಎಸ್ 2020 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 11.12.2020

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-1.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ
ಬೆಂಗಳೂರು

ಮಾನ್ಯರೆ,

ವಿಷಯ: ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:979 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.979/2020, ದಿನಾಂಕ:04.12.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:979 ಗೆ ಸಂಬಂಧಿಸಿದ ಉತ್ತರವನ್ನು ಸಿದ್ಧಪಡಿಸಿ 30 ಉತ್ತರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ
Chetna M 11/12
(ಚೇತನ ಎಂ.)
ಶಾಖಾಧಿಕಾರಿ, ಜಿ-ಶಾಖೆ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	979
ಉತ್ತರಿಸಬೇಕಾದ ದಿನಾಂಕ	:	11.12.2020
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ದಿನಾಂಕ:31.01.2020ರ ಅಂತ್ಯಕ್ಕೆ ರಾಜ್ಯದಲ್ಲಿ ಸಮಾಪನ (Liquidated)) ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು; ಇದಕ್ಕೆ ನಿರ್ದಿಷ್ಟ ಕಾರಣಗಳೇನು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ದಿನಾಂಕ:31-01-2020 ರ ಅಂತ್ಯಕ್ಕೆ 350 ಗೃಹ ನಿರ್ಮಾಣ ಸಹಕಾರ ಸಂಘಗಳು ಸಮಾಪನಾ ಯಲ್ಲಿರುತ್ತವೆ. ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರಡಿ ಈ ಕೆಳಕಂಡ ಸಂದರ್ಭಗಳಲ್ಲಿ ಸಹಕಾರ ಸಂಘವನ್ನು ಸಮಾಪನೆಗೊಳಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. 1. ಸಂಘದ ಸದಸ್ಯರ ಪೈಕಿ 3/4 ಕ್ಕಿಂತ ಕಡಿಮೆ ಇಲ್ಲದಷ್ಟು ಜನ ಸದಸ್ಯರು ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಸಕ್ಷಮ ನಿಬಂಧಕರು ಸಮಾಪನೆಗೊಳಿಸಬೇಕೆಂದು ಅಭಿಪ್ರಾಯಪಟ್ಟಾಗ 2. ಸಂಘದ ಸದಸ್ಯರ ಸಂಖ್ಯೆಯು ಒಂದು ಸಹಕಾರ ಸಂಘದ ನೋಂದಣಿಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಗಿಂತ ಕಡಿಮೆಯಾಗಿರುವಲ್ಲಿ ಅಥವಾ ಸಂಘವು ನೋಂದಣಿಯಾಗಿ 06 ತಿಂಗಳೊಳಗೆ ತನ್ನ ಕಾರ್ಯ ಪ್ರಾರಂಭಿಸದೆ ಇದ್ದಲ್ಲಿ ಅಥವಾ 06 ತಿಂಗಳವರೆಗೆ ತನ್ನ ಕಾರ್ಯವನ್ನು ನಿಲ್ಲಿಸಿದ್ದಲ್ಲಿ ಅಥವಾ ಸಹಕಾರ ಸಂಘವು ಕಾಯ್ದೆ ಅಥವಾ ಅದರ ಮೇರೆಗೆ ನೋಂದಣಿ ಮತ್ತು ವ್ಯವಸ್ಥಾಪನೆಗೆ ಸಂಬಂಧ ಪಟ್ಟಂತೆ ವಿಧಿಸಿದ ಷರತ್ತುಗಳನ್ನು ಪಾಲಿಸುವುದನ್ನು ಸಹಕಾರ ಸಂಘವು ನಿಲ್ಲಿಸಿದ್ದಲ್ಲಿ 3. ಸಂಘವು ಬೈಲಾದ ಉದ್ದೇಶಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸದೇ ನಿಷ್ಕ್ರಿಯಗೊಂಡಿದ್ದಲ್ಲಿ ಸಂಘವನ್ನು ಸಮಾಪನೆಗೊಳಿಸಬಹುದಾಗಿದೆ.
ಆ)	ಕಳೆದ 03 ವರ್ಷಗಳಲ್ಲಿ ದಿನಾಂಕ: 31-12-2019ರ ಅಂತ್ಯಕ್ಕೆ ರಾಜ್ಯದಲ್ಲಿ ಸಹಕಾರಿ ಕಾಯ್ದೆ 1959 ರ ಕಲಂ 64 ರ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) ಕಲಂ 64 ರ ವಿಚಾರಣೆಯ ಕಾಲಮಿತಿ ಎಷ್ಟು; ಕಾಲಮಿತಿಯೊಳಗೆ ವರದಿ ನೀಡದ ಅಧಿಕಾರಿಗಳ ವಿರುದ್ಧ ಇದುವರೆಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಕಳೆದ 03 ವರ್ಷಗಳ ಅವಧಿಯಲ್ಲಿ 30 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ವಿಚಾರಣೆಗೆ ಆದೇಶಿಸಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 [2-ಎ) ರಡಿಯಲ್ಲಿ "ವಿಚಾರಣೆಯನ್ನು 12 ತಿಂಗಳುಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು. ಈ ಅವಧಿಯನ್ನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ನಿಬಂಧಕರು 6 ತಿಂಗಳುಗಳ ಅವಧಿಗೆ ವಿಸ್ತರಿಸಬಹುದು]" ಎಂದು ಅವಕಾಶವಿರುತ್ತದೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂದಿಸಿದಂತೆ 03 ಪ್ರಕರಣಗಳಲ್ಲಿ ಕಾಲಾವಧಿ ಮುಕ್ತಾಯವಾಗಿದ್ದು, ವಿಚಾರಣಾ ವರದಿ ಸ್ವೀಕೃತವಾಗದ ಕಾರಣ ವಿಚಾರಣಾಧಿಕಾರಿಗಳಿಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ರವರು ನೋಟೀಸ್ ಜಾರಿ ಮಾಡಿರುತ್ತಾರೆ.

ಇ)	ಜಂಟಿ ಸದನ ಸಮಿತಿಯ ವರದಿಯನ್ವಯ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕ್ರಮಕೈಗೊಳ್ಳಲಾಗಿದೆ;	ಜಂಟಿ ಸದನ ಸಮಿತಿ ವರದಿಯಲ್ಲಿ ಉಲ್ಲೇಖಿಸಿರುವ ಬೆಂಗಳೂರು ನಗರದ ಈ ಕೆಳಕಂಡ ಒಟ್ಟು 09 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕ್ರಮಕೈಗೊಳ್ಳಲಾಗಿರುತ್ತದೆ. 1. ಕರ್ನಾಟಕ ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂ. 2. ದಿ. ವೈಯ್ಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂ. 3. ಮಿನಿಸ್ಟ್ರಿ ಆಫ್ ಕಮ್ಯೂನಿಕೇಷನ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂ. 4. ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂ. 5. ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂ. 6. ದಿ. ಏರ್ಕ್ರಾಫ್ಟ್ ಎಂಪ್ಲಾಯೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂ. 7. ಎನ್.ಜಿ.ಇ.ಎಫ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂ. 8. ಎನ್.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂ. 9. ಅಮರಜ್ಯೋತಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು.
ಈ)	ರಾಜ್ಯದಲ್ಲಿ 31.12.2019 ರ ಅಂತ್ಯಕ್ಕೆ ರಾಜ್ಯದಲ್ಲಿ ಸಹಕಾರ ಕಾಯ್ದೆ 1959 ಕಲಂ 64 ರ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿರುವ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ವಿಚಾರಣಾಧಿಕಾರಿಗಳಿಂದ ವರದಿ ಸ್ವೀಕೃತವಾಗಬೇಕಾಗಿರುವ ಪ್ರಕರಣಗಳು ಎಷ್ಟು; ಆದೇಶದ ನಿರ್ದೇಶನದ ಅನ್ವಯ ವರದಿ ಪಡೆಯಲಾಗಿದೆಯೇ, ಹಾಗಿದ್ದಲ್ಲಿ, ವರದಿಯನ್ನು ಯಾವ ಕಾಲಮಿತಿಯಲ್ಲಿ ಪಡೆಯಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ 31.12.2019 ರ ಅಂತ್ಯಕ್ಕೆ ಸಹಕಾರ ಕಾಯ್ದೆ 1959 ಕಲಂ 64 ರ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ 30 ಪ್ರಕರಣಗಳ ಪೈಕಿ 23 ಪ್ರಕರಣಗಳಲ್ಲಿ ವರದಿ ಸ್ವೀಕೃತವಾಗಿರುತ್ತವೆ. 07 ಪ್ರಕರಣಗಳಲ್ಲಿ ವರದಿ ಸ್ವೀಕೃತವಾಗಲು ಬಾಕಿಯಿದ್ದು 03 ಪ್ರಕರಣಗಳಲ್ಲಿ ಕಾಲಮಿತಿ ಮೀರಿದ್ದು, ವರದಿ ಸ್ವೀಕೃತವಾಗದ ಕಾರಣ ವಿಚಾರಣಾಧಿಕಾರಿಗಳಿಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ರವರು ನೋಟೀಸ್ ಜಾರಿ ಮಾಡಿರುತ್ತಾರೆ. ಉಳಿದ 04 ಪ್ರಕರಣಗಳು ಕಾಲಮಿತಿಯಲ್ಲಿದ್ದು, ನಿಗಧಿತ ಅವದಿಯೊಳಗೆ ವಿಚಾರಣಾ ವರದಿಯನ್ನು ಪಡೆಯಲಾಗುವುದು.
ಉ	ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64 ರ ಅಡಿಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ವಿಚಾರಣೆಯನ್ನು ನಿಯಮಾನುಸಾರ ಕೈಗೊಳ್ಳದ ವಿಚಾರಣಾಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನು ನೀಡುವುದು)	ಬೆಂಗಳೂರು ನಗರ ಜಿಲ್ಲೆಗೆ ಸಂಬಂದಿಸಿದಂತೆ 03 ಪ್ರಕರಣಗಳಲ್ಲಿ ಕಾಲಾವಧಿ ಮುಕ್ತಾಯವಾಗಿದ್ದು, ವರದಿ ಸ್ವೀಕೃತವಾಗದ ಕಾರಣ ವಿಚಾರಣಾಧಿಕಾರಿಗಳಿಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ರವರು ನೋಟೀಸ್ ಜಾರಿ ಮಾಡಿರುತ್ತಾರೆ.

ಸಂಖ್ಯೆ:ಸಿಒ 49 ಸಿಹೆಚ್ಎಸ್ 2020 (ಇ)

(signature)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಅವರ ಪ್ರಶ್ನೆ ಸಂಖ್ಯೆ: 979 ರ ಉತ್ತರ ಕ್ಕೆ ಅನುಬಂಧ-1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಮಾಪನಾ ಸಹಕಾರ ಸಂಘಗಳ ಸಂಖ್ಯೆ
1	ಬೆಂಗಳೂರ ನಗರ -1	16
2	ಬೆಂಗಳೂರ ನಗರ -2	19
3	ಬೆಂಗಳೂರ ನಗರ -3	05
4	ಬೆಂಗಳೂರ ನಗರ -4	19
5	ಬೆಂಗಳೂರ ನಗರ ಗ್ರಾಮಾಂತರ	08
6	ರಾಮಗನರ	05
7	ಕೋಲಾರ	14
8	ಚಿಕ್ಕಬಳ್ಳಾಪುರ	09
9	ತುಮಕೂರು	16
10	ಚಿತ್ರದುರ್ಗ	09
11	ದಾವಣಗೆರೆ	08
12	ಶಿವಮೊಗ್ಗ	10
13	ಮೈಸೂರು	22
14	ಚಾಮರಾಜನಗರ	02
15	ಮಂಡ್ಯ	07
16	ಹಾಸನ	11
17	ಚಿಕ್ಕಮಗಳೂರು	01
18	ಕೊಡಗು	00
19	ದಕ್ಷಿಣ ಕನ್ನಡ	02
20	ಉಡುಪಿ	01
21	ಬೆಳಗಾವಿ	22
22	ವಿಜಯಪುರ	23
23	ಬಾಗಲಕೋಟೆ	07
24	ಧಾರವಾಡ	17
25	ಗದಗ	06
26	ಹಾವೇರಿ	07
27	ಉತ್ತರ ಕನ್ನಡ	04
28	ಬಳ್ಳಾರಿ	19
29	ಬೀದರ	23
30	ಕಲಬುರಗಿ	24
31	ಕೊಪ್ಪಳ	5
32	ರಾಯಚೂರು	6
33	ಯಾದಗಿರ	3
	ಒಟ್ಟು	**350**

ಸಹಕಾರ ಸಂಘಗಳ ಅಪರ ನಿಬಂಧಕರು
(ವಸತಿ ಮತ್ತು ಇತರೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ,
ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) ಅವರ ಪ್ರಶ್ನೆ ಸಂಖ್ಯೆ: 979 ರ ಉತ್ತರ ಕ್ಕೆ ಅನುಬಂಧ-2

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕಲಂ 64 ರ ವಿಚಾರಣೆಗೆ ಒಳಪಡಿಸಿರುವ ಪ್ರಕರಣಗಳ ಸಂಖ್ಯೆ
1	ಬೆಂಗಳೂರ ನಗರ -1	01
2	ಬೆಂಗಳೂರ ನಗರ -2	04
3	ಬೆಂಗಳೂರ ನಗರ -3	01
4	ಬೆಂಗಳೂರ ನಗರ -4	02
5	ಬೆಂಗಳೂರ ನಗರ ಗ್ರಾಮಾಂತರ	00
6	ರಾಮಗನರ	00
7	ಕೋಲಾರ	.01
8	ಚಿಕ್ಕಬಳ್ಳಾಪುರ	00
9	ತುಮಕೂರು	00
10	ಚಿತ್ರದುರ್ಗ	00
11	ದಾವಣಗೆರೆ	00
12	ಶಿವಮೊಗ್ಗ	02
13	ಮೈಸೂರು	03
14	ಚಾಮರಾಜನಗರ	00
15	ಮಂಡ್ಯ	03
16	ಹಾಸನ	00
17	ಚಿಕ್ಕಮಗಳೂರು	00
18	ಕೊಡಗು	00
19	ದಕ್ಷಿಣ ಕನ್ನಡ	00
20	ಉಡುಪಿ	00
21	ಬೆಳಗಾವಿ	00
22	ವಿಜಯಪುರ	01
23	ಬಾಗಲಕೋಟೆ	00
24	ಧಾರವಾಡ	07
25	ಗದಗ	01
26	ಹಾವೇರಿ	00
27	ಉತ್ತರ ಕನ್ನಡ	03
28	ಬಳ್ಳಾರಿ	00
29	ಬೀದರ	00
30	ಕಲಬುರಗಿ	01
31	ಕೊಪ್ಪಳ	00
32	ರಾಯಚೂರು	00
33	ಯಾದಗಿರ	00
	ಒಟ್ಟು	30

ಸಹಕಾರ ಸಂಘಗಳ ಅಪರ ನಿಬಂಧಕರು
(ವಸತಿ ಮತ್ತು ಇತರೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ.
ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

ಕರ್ನಾಟಕ ಸರ್ಕಾರ

ಸಂಖ್ಯೆ : ಸಿಒ 235 ರರವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:11.12.2020

ಇವರಿಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಕರ್ನಾಟಕ ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1068ಕ್ಕೆ ಉತ್ತರಿಸುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1068ಕ್ಕೆ ದಿನಾಂಕ:11.12.2020ರಂದು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ ಹಾಗೂ ಉತ್ತರವನ್ನು ಪಿ.ಡಿ.ಎಫ್ ಮಾದರಿಯಲ್ಲಿ ಇ–ಮೇಲ್ ಸಂಖ್ಯೆ: dsqb-kla-kar@nic.in ರ ಮೂಲಕ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ,

(ಬಿ.ಎಸ್.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ.

Sd/
11/12/20

ಪ್ರತಿ:

1. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1068
ಸದಸ್ಯರ ಹೆಸರು	: ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸಬೇಕಾದ ದಿನಾಂಕ	: 11.12.2020
ಉತ್ತರಿಸುವ ಸಚಿವರು	: ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹುಬ್ಬಳ್ಳಿ-ದಾರವಾಡ ಮತ ಕ್ಷೇತ್ರಕ್ಕೆ 2017-18ನೇ ಸಾಲಿನಿಂದ ಇಲ್ಲಿಯವರೆಗೆ ಸಹಕಾರ ಇಲಾಖೆಯಿಂದ ವಿವಿಧ ಯೋಜನೆಗಳ ಅಡಿ ಎಷ್ಟು ಅನುದಾನ ಒದಗಿಸಲಾಗಿದೆ? (ವರ್ಷವಾರು ಹಾಗೂ ಯೋಜನೆವಾರು ವಿವರ ನೀಡುವುದು)	ಹುಬ್ಬಳ್ಳಿ-ಧಾರವಾಡ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೊಳಪಡುವ ಸಹಕಾರ ಸಂಘಗಳ ನಿಬಂಧಕರ ಇಲಾಖೆ ಮತ್ತು ಕೃಷಿ ಮಾರಾಟ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳ ಅನುದಾನದ ವರ್ಷವಾರು ಹಾಗೂ ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಸಇ 235 ರರವಿ 2020

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಚುಕ್ಕ

ಕ್ರ.	ಯೋಜನೆ
1	*2*
1	ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ
2	ಸ್ವಸಹಾಯ ವರ್ಗಗಳಿಗೆ ಸಾಲಗಳ ಮೇಲಣ ಬಡ್ಡಿ ಧನಸಹಾಯ
3	ಲ್ಯಾಂಪ್ಸ್ ಸಂಯುಕ್ತ ಸಂಘಗಳಿಗೆ ಮಾರುಕಟ್ಟೆ ಮೂಲ ಸೌಕರ್ಯಗಳ
4	ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಬಿ.ಪಿ.ಎಲ್/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ಅಲ್ಪಸಂಖ್ಯಾತ, ಮಹಿಳಾ ಮತ್ತು ವಿಕಲಚೇತನ ವ ಜನರನ್ನು ಸದಸ್ಯರನ್ನಾಗಿ ನೊಂದಾಯಿಸುವ ಬಗ್ಗೆ
5	ಸಾಲ ಮನ್ನಾ ಯೋಜನೆ (ರೂ.50,000 ದವರೆಗೆ)
6	ಸಾಲ ಮನ್ನಾ ಯೋಜನೆ (ರೂ.1.00 ಲಕ್ಷದವರೆಗೆ)
	ಜಿಲ್ಲಾ ಪಂಚಾಯತ್ ಯೋಜನೆಗಳು
7	ವಿವಿಧ ಸಹಕಾರ ಸಂಘಗಳಿಗೆ ಶೇರು ಬಂಡವಾಳ
8	ವಿವಿಧ ಸಹಕಾರ ಸಂಘಗಳಿಗೆ ಸಾಲದ ಸಹಾಯಧನ
9	ವಿವಿಧ ಸಹಕಾರ ಸಂಘಗಳಿಗೆ ಸಹಾಯಧನ

AGRICULTURE MARKETING DEPARTMENT

Year	Scheme	APMC	Name of the Project	Amount (Rs. In Lakhs)	Remarks
2017-18	WIF 2013-14	Hubballi	Construction of 1 no. of 1000 M.T. godown at MMY of APMC, Hubballi	90.00	Work Completed
		Hubballi	Construction of Covered auction platform MMY of APMC, Hubballi	90.00	Work Completed
		Hubballi	Construction of Onion Storage godown MMY of APMC, Hubballi	450.00	Work Completed
	RIDF-23	Hubballi	Project report for Asphalting to Internal Road @ Jaggery Block of APMC Amargol, Hubballi	50.00	Work Completed
	RKVY	Hubballi	Construction of Covered auction platform MMY of APMC, Hubballi	90.00	Work Completed
			TOTAL	770.00	
2018-19	WIF 2014-15	Hubballi	Construction of 100 MT Godown each at Karadi koppa & Kolivawada villages of APMC Hubballi	40.00	Work Completed
		Hubballi	Construction of Covered Auction Platform in MMY a of APMC Hubballi	60.00	Work Completed
	RIDF-24	Hubballi	Asphalting to Internal Roads behind "T" type and "CA" Type plots at MMY of APMC Amarggol Hubballi	200.00	Work Under Progress
		Hubballi	Ashplating to interal roads Balance at 'R' block of APMC Hubballi (Amargola)	90.00	Work Completed
			TOTAL	390.00	
2019-20	WIF 2014-15	Hubballi	Providing infrastructure facilities at Amargola in MMY of APMC Hubballi	2000.00	Work Completed
	RKVY	Hubballi	Development of Rural Shandy at Sherewada	75.00	Work Completed
			TOTAL	2075.00	
			GRAND TOTAL	3235.00	

ಕರ್ನಾಟಕ ಸರ್ಕಾರ

ಸಂಖ್ಯೆ ಸಿಐ 660 ಎಂಎಂಎನ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
1ನೇ ಮಹಡಿ, ವಿಕಾಸಸೌಧ,
ಬೆಂಗಳೂರು, ದಿನಾಂಕ 11.12.2020.

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ., ಜವಳಿ ಮತ್ತು ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ

ಮಾನ್ಯರೇ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 401ಕ್ಕೆ ಉತ್ತರ ಒದಗಿಸುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.401/2020, ದಿನಾಂಕ 01.12.2020.

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 401ಕ್ಕೆ ಸರ್ಕಾರದ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಶಿವಪ್ರಕಾಶ)
ಪೀಠಾಧಿಕಾರಿ (ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪ್ರತಿ:-

1. ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	401
ಸದಸ್ಯರ ಹೆಸರು	ಶ್ರೀ ಅಶೋಕ್ ನಾಯಕ್ ಕೆ.ಬಿ.
ಉತ್ತರಿಸಬೇಕಾದ ದಿನಾಂಕ	11.12.2020
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿರುವ ವಾರ್ಷಿಕ ರಾಜಸ್ವ ಆದಾಯವೆಷ್ಟು; (ಜಿಲ್ಲಾವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಗಣಿಗಾರಿಕೆಯಿಂದ ಸಂಗ್ರಹಿಸಿದ ರಾಜಧನದ ವಿವರಗಳನ್ನು <u>ಅನುಬಂಧ -1ರಲ್ಲಿ</u> ಒದಗಿಸಲಾಗಿದೆ.
ಆ)	ಖನಿಜ ಪ್ರತಿಷ್ಠಾನ ಅನುದಾನದಲ್ಲಿ ಗಣಿಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳು ಯಾವುವು; ರಾಜ್ಯಾದ್ಯಂತ ಖನಿಜ ಪ್ರತಿಷ್ಠಾನದಲ್ಲಿ ಲಭ್ಯವಿರುವ ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅನುದಾನವನ್ನು ಗಣಿಬಾಧಿತ ಪ್ರದೇಶಗಳಲ್ಲಿ PMKKKY ಯೋಜನೆಯಡಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತದೆ. 1) ಕುಡಿಯುವ ನೀರು 2) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಅಳತೆ 3) ಆರೋಗ್ಯ 4) ಶಿಕ್ಷಣ 5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ 6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ 7) ಕೌಶಲ್ಯ ಅಭಿವೃದ್ಧಿ 8) ನೈರ್ಮಲ್ಯತೆ 9) ಭೌತಿಕ ಮೂಲ ಸೌಕರ್ಯ 10) ನೀರಾವರಿ 11) ಶಕ್ತಿ ಮತ್ತು ನೀರಿನ ಅಭಿವೃದ್ಧಿ 12) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ ಜಿಲ್ಲಾವಾರು ಸಂಗ್ರಹಿಸಿದ ಹಾಗೂ ಲಭ್ಯವಿರುವ ಅನುದಾನದ ವಿವರಗಳನ್ನು <u>ಅನುಬಂಧ-2ರಲ್ಲಿ</u> ಒದಗಿಸಲಾಗಿದ.

—2

ಇ)	ರಾಜ್ಯಾದ್ಯಂತ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ರಾಜ್ಯದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಎಂ.ಎಂ. (ಡಿ&ಆರ್) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ಮತ್ತು ತಿದ್ದುಪಡಿ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡ ಸಂಗ್ರಹಿಸಲು ಕಟ್ಟುನಿಟ್ಟಿನ ಕ್ರಮಜರುಗಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಕಲ್ಲು ಮತ್ತು ಮರಳು ಗಣಿಗಾರಿಕೆ ಸಂಬಂಧ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:

ಕಲ್ಲು ಗಣಿಗಾರಿಕೆ :-

(ರೂ.ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ
1.	2017-18	404	114	613.25
2.	2018-19	413	108	1213.37
3.	2019-20	266	117	908.70
	ಒಟ್ಟು	**1083**	**339**	**2735.32**

ಮರಳು ಗಣಿಗಾರಿಕೆ:-

(ರೂ.ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ
1.	2017-18	286	159	191.43
2.	2018-19	191	106	54.62
3.	2019-20	217	77	124.71
	ಒಟ್ಟು	**694**	**342**	**370.76**

ಈ)	ನೂತನವಾಗಿ ಗಣಿಗಾರಿಕೆ ಮತ್ತು ಕ್ರಷರ್ ಗಳನ್ನು ಪ್ರಾರಂಭಿಸಲು ಪರವಾನಗಿಯನ್ನು ನೀಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;	ಕೇಂದ್ರ ಸರ್ಕಾರವು ದಿನಾಂಕ 20.05.2015ರಂದು ಜಾರಿಗೆ ತಂದಿರುವ The Mineral (Auction) Rules, 2015 ರನ್ವಯ, ಖನಿಜಯುಕ್ತ ಗಣಿ ಗುತ್ತಿಗೆ ಪ್ರದೇಶಗಳನ್ನು ಗುರುತಿಸಿ ಖನಿಜ ನಿಕ್ಷೇಪವನ್ನು ಅಂದಾಜಿಸಿ ಸದರಿ ಪ್ರದೇಶಗಳನ್ನು ಇ-ಹರಾಜು ಮೂಲಕ ಗಣಿ ಗುತ್ತಿಗೆ ಮಂಜೂರಾತಿ ಮಾಡಲಾಗುತ್ತಿದೆ.

--3

		ರಾಜ್ಯ ಸರ್ಕಾರವು ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೆ ತಂದಿದ್ದು, ಸದರಿ ನಿಯಮಗಳಂತೆ ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಹರಾಜು ಮೂಲಕ ಮಂಜೂರು ಮಾಡಬೇಕಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಖನಿಜವನ್ನು ತೆಗೆಯಲು ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ ಮತ್ತು ಪರಿಸರ ಅನುಮತಿ ಪತ್ರ ಪಡೆದು ಕಲ್ಲು ~~ಗಣಿಗಾರಿಕೆಗೆ ಲೈಸೆನ್ಸ್~~ ನೀಡಲಾಗುತ್ತಿದೆ. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 ಮತ್ತು ನಿಯಮಗಳು, 2012 ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಗಿ ನೀಡುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಅದರಂತೆ ಸದರಿ ಅಧಿನಿಯಮದ ಕಲಂ 6(3)ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ 6 ಮತ್ತು 6-A ರಲ್ಲಿನ ಎಲ್ಲಾ ಷರತ್ತುಗಳು ಪಾಲನೆಯಾದಲ್ಲಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, ಫಾರಂ–ಬಿ1 ರಲ್ಲಿ ಸುರಕ್ಷಿತ ವಲಯ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಿಎಫ್‌ಇ (Consent for establishment) ಹಾಗೂ ಸಿಎಫ್‌ಓ (consent for operation) ಪಡೆದು ಹಾಜರುಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ (ಫಾರಂ–ಸಿ) ಕ್ರಷರ್ ಲೈಸೆನ್ಸ್ ನ್ನು ನೀಡಲಾಗುತ್ತದೆ.

ಸಂಖ್ಯೆ: ಸಿಐ 660 ಎಂಎಂಎನ್ 2020

(ಸಿ.ಸಿ. ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು

ಅನುಬಂಧ-1

ಕಳೆದ 3 ವರ್ಷಗಳಲ್ಲಿ ಜಿಲ್ಲಾವಾರು ರಾಜಧನ ಸಂಗ್ರಹಿಸಿದ ವಿವರ

ರೂ.ಲಕ್ಷಗಳಲ್ಲಿ

ಕ್ರಸಂ	ಜಿಲ್ಲೆ	2018-19	2019-20	2020-21 (ಅಕ್ಟೋಬರ್ 2020)
1	Bagalkot	6386.45	6517.26	3071.58
2	Bangalore Rural	4260.52	3599.42	1423.58
3	Bangalore Urban	9822.25	15083.57	6625.03
4	Belgaum	8682.67	9737.85	4141.05
5	Ballari	2049.28	3846.35	1694.37
6	Bidar	1119.86	1612.27	585.67
7	Vijayapura	4428.79	3100.33	876.88
8	Chamarajanagar	2259.87	2746.47	939.27
9	Chikmagalur	2752.67	2459.42	1269.67
10	Chikkaballapur	4888.18	4584.17	2259.89
11	Chitradurga	2951.42	8100.58	2923.58
12	Dakshina kannada	2670.34	2635.12	308.00
13	Davanagere	2885.42	2498.91	533.88
14	Dharwad	10163.46	11550.25	3667.79
15	Gadag	2646.36	3807.63	1178.55
16	Hassan	5733.95	8201.08	3392.08
17	Haveri	2069.82	3436.94	1352.04
18	Head Office	147962.97	188556.62	69777.15
19	Hospete	11213.95	13914.74	29238.62
20	Gulbarga	26123.38	24465.70	11349.98
21	Kodagu	580.31	800.60	327.79
22	Kolar	3312.29	2698.89	831.25
23	Koppal	5197.41	4973.05	2222.24
24	Mandya	2146.77	2602.92	1287.32
25	Mysuru	5599.58	3624.69	997.91
26	Raichur	5865.21	6586.54	4164.53
27	Ramanagara	4227.37	4171.44	2221.16
28	Shivamogga	2525.54	2064.64	1658.63
29	Tumakuru	5440.69	6088.54	1649.92
30	Udupi	1666.60	2423.49	858.66
31	Uttara Kannada	2355.74	3594.71	948.92
32	Yadgir	2653.88	2817.81	932.47
	Total	302643.00	362902.00	164709.45

ಅನುಬಂಧ -2

ಜಿಲ್ಲಾ ಖನಿಜ ಪ್ರತಿಷ್ಠಾನದಡಿ ಸಂಗ್ರಹಿಸಿದ ಹಾಗೂ ಉಳಿಕೆ ಮೊತ್ತದ ವಿವರ

Rs.in Lakhs

Sl.No.	District	DMF Collection up to 30th Nov 2020	Amount Spent up to 30th Nov 2020	Balance Amount
1	Ballari	129149.66	32527.15	96622.51
2	Kalaburagi	32097.22	5486.41	26610.81
3	Chitradurga	18678.13	4570.85	14107.28
4	Bagalkot	6712.95	2424.33	4288.62
5	Koppal	4725.21	3082.47	1642.74
6	Raichur	3846.23	1809.27	2036.96
7	Chikkaballapur	3201.91	832.24	2369.67
8	Ramanagara	3124.37	1377.20	1747.17
9	Bangalore Urban	2924.50	697.11	2227.39
10	Tumakuru	2623.96	821.02	1802.94
11	Bangalore Rural	2118.12	14.71	2103.41
12	Belgaum	2067.05	1051.96	1015.09
13	Chamarajanagar	2031.26	284.49	1746.77
14	Uttara Kannada	1125.52	623.64	501.88
15	Hassan	1028.71	519.48	509.23
16	Dakshina Kannada	819.83	118.00	701.83
17	Udupi	686.45	97.27	589.18
18	Chikkamagaluru	683.52	486.88	196.64
19	Kolar	621.96	66.19	555.77
20	Gadag	585.47	68.13	517.34
21	Dharwad	535.24	46.41	488.83
22	Haveri	523.65	77.58	446.07
23	Davanagere	420.98	275.94	145.04
24	Vijayapura	393.52	108.37	285.15
25	Mandya	367.59	0	367.59
26	Shivamogga	205.09	27.36	177.73
27	Mysuru	148.60	9.44	139.16
28	Bidar	114.80	0.00	114.80
29	Yadgir	98.66	14.58	84.08
30	Kodagu	96.28	0.00	96.28
	COVID 19 Expenditure up to 30th November 2020		10676.08	
	Grand Total	221756.43	68194.56	153561.87

CI 660 MMN 2020

Deputy Director (Min. Admn)
Dept. of Mines & Geology
Bangalore-560 001

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 79 ಎಲ್ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರ ಬಂಗಾರಪ್ಪ ಎಸ್ (ಸೊರಬ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:144ಕ್ಕೆ ಉತ್ತರಿಸುವ ಕುರಿತು

~**********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರ ಬಂಗಾರಪ್ಪ ಎಸ್ (ಸೊರಬ) ಇವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:144ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

A. Vijayakumar
11.12.2020

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**144**
ಸದಸ್ಯರ ಹೆಸರು	:	**ಶ್ರೀ. ಕುಮಾರ ಬಂಗಾರಪ್ಪ.ಎಸ್ (ಸೊರಬ)**
ಉತ್ತರಿಸುವ ದಿನಾಂಕ	:	**11/12/2020**
ಉತ್ತರಿಸುವ ಸಚಿವರು	:	**ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**

	ಪ್ರಶ್ನೆ	ಉತ್ತರ
ಅ	ನೂತನವಾಗಿ ಘೋಷಣೆಯಾಗಿರುವ ಸೊರಬ ತಾಲ್ಲೂಕಿನ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನು ಪೌರಾಡಳಿತ ಇಲಾಖೆಯ ವಶಕ್ಕೆ ತೆಗೆದುಕೊಂಡು ಹೊಸದಾಗಿ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜನೆ ಮಾಡಿ ಯಾವಾಗ ಕಾರ್ಯರೂಪಕ್ಕೆ ತರಲಾಗುವುದು;	ಸೊರಬ ತಾಲ್ಲೂಕಿನ ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿ, ಅಧಿಸೂಚನೆ ಸಂಖ್ಯೆ:ನಅಇ 15 ಎಂಎಲ್ಆರ್ 2020 ನ್ನು ದಿನಾಂಕ:23/11/2020 ರಂದು ಪ್ರಾಥಮಿಕ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಬಾಧಿತರಾಗಬಹುದಾದವರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಿ 30 ದಿನಗಳ ಕಾಲಾವಕಾಶ ನೀಡಲಾಗಿದೆ. ಪ್ರಾಥಮಿಕ ಅಧಿಸೂಚನೆಗೆ ಸ್ವೀಕೃತವಾಗುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಅಧಿಕಾರಿ/ಸಿಬ್ಬಂದಿಯ ನಿಯೋಜನೆ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು.
ಆ	ಸದರಿ ಘೋಷಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ, ಕುಡಿಯುವ ನೀರು, ಇನ್ನಿತರ ಮೂಲ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪಟ್ಟಣ ಪಂಚಾಯಿತಿಯಾಗಿ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಮೂಲಭೂತ ಸೌಕರ್ಯಗಳ ಕುರಿತು ನಿಯಮಾನುಸಾರ ಕ್ರಮವಹಿಸಲಾಗುವುದು.
ಇ	ಘೋಷಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾರ್ಡ್‌ಗಳನ್ನು ವಿಂಗಡಣೆ ಮಾಡಿ, ನೂತನ ಪಟ್ಟಣ ಪಂಚಾಯಿತಿಗೆ ಚುನಾವಣೆ ನಡೆಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿದೆಯೇ;	ಪಟ್ಟಣ ಪಂಚಾಯಿತಿಯಾಗಿ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ವಾರ್ಡ್‌ಗಳನ್ನು ವಿಂಗಡಣೆ ಮಾಡಿ ಚುನಾವಣೆ ನಡೆಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ:ನಅಇ 79 ಎಲ್ಎಕ್ಯೂ 2020.

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 81 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1066ಕ್ಕೆ ಉತ್ತರಿಸುವ ಕುರಿತು

~**********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1066ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

A. Vijayakumar
14.12.2020

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

14/12

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1066**
ಸದಸ್ಯರ ಹೆಸರು	:	**ಶ್ರೀ. ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)**
ಉತ್ತರಿಸುವ ದಿನಾಂಕ	:	**11/12/2020**
ಉತ್ತರಿಸುವ ಸಚಿವರು	:	**ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು**

	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣವು ಸುಮಾರು 50,000 ಜನಸಂಖ್ಯೆಯನ್ನು ಹೊಂದಿದ್ದು ಇದು ಉಪವಿಭಾಗಾಧಿಕಾರಿಗಳ ಕಛೇರಿ, RTO ಕಛೇರಿ, DYSP ಕಛೇರಿ ಹಾಗೂ ಇನ್ನಿತರೆ ಪ್ರಮುಖ ಕಛೇರಿಗಳನ್ನೊಳಗೊಂಡ ದೊಡ್ಡ ಪಟ್ಟಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2011 ರ ಜನಗಣತಿಯನುಸಾರ ಬೈಲಹೊಂಗಲ ಪುರಸಭೆಯ ಜನಸಂಖ್ಯೆಯು 49,182 ಇರುತ್ತದೆ. ಬೈಲಹೊಂಗಲ ಪುರಸಭಾ ವ್ಯಾಪ್ತಿಯಲ್ಲಿ ಉಪವಿಭಾಗಾಧಿಕಾರಿಗಳ ಕಛೇರಿ, RTO ಕಛೇರಿ, DYSP ಕಚೇರಿ ಹಾಗೂ ಇನ್ನಿತರೆ ಪ್ರಮುಖ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.
ಆ	ಬಂದಿದಲ್ಲಿ, ಈ ಪಟ್ಟಣದ ಜನಸಂಖ್ಯೆಗನುಗುಣವಾಗಿ ಇಲ್ಲಿನ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಬೈಲಹೊಂಗಲ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಮತ್ತು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಇ	ಹಾಗಿದ್ದಲ್ಲಿ, ಸಾರ್ವಜನಿಕ ಹಿತದೃಷ್ಟಿಯಿಂದ ಬೈಲಹೊಂಗಲ ಪುರಸಭೆಯಲ್ಲಿ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ (ಪೂರ್ಣ ವಿವರ ನೀಡುವುದು)	ಅರ್ಹ ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.

ಸಂಖ್ಯೆ:ನಅಇ 81 ಎಲ್ಎಕ್ಯೂ 2020.

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 82 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ್) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1069ಕ್ಕೆ ಉತ್ತರಿಸುವ ಕುರಿತು

~**********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ್) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1069ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

A Vijayakumar
14.12.2020

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1069**
ಸದಸ್ಯರ ಹೆಸರು : **ಶ್ರೀ. ಪಾಟೀಲ್.ಎಂ.ವೈ. (ಅಫ್ಜಲ್ ಪುರ್)**
ಉತ್ತರಿಸುವ ದಿನಾಂಕ : **11/12/2020**
ಉತ್ತರಿಸುವ ಸಚಿವರು : **ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**

	ಪ್ರಶ್ನೆ	ಉತ್ತರ
ಅ	ಅಫ್ಜಲ್‌ಪುರ್ ತಾಲ್ಲೂಕಿನಲ್ಲಿ ಮಣ್ಣೂರು, ಮುಶ್ಯಾಳ ಹಾಗೂ ದೇವಲಗಾಣಿಗಾಪೂರ ಸುಮಾರು 15 ರಿಂದ 20,000 ಜನಸಂಖ್ಯೆಯುಳ್ಳ ದೊಡ್ಡ ಗ್ರಾಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಫ್ಜಲ್‌ಪುರ್ ತಾಲ್ಲೂಕಿನ ಮಣ್ಣೂರು, ಮುಶ್ಯಾಳ ಹಾಗೂ ದೇವಲಗಾಣಿಗಾಪೂರ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಮತ್ತು ಜಿಲ್ಲಾಧಿಕಾರಿಗಳು, ಕಲಬುರರ್ಗಿ ಜಿಲ್ಲೆ ರವರಿಂದ ಯಾವುದೇ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ.
ಆ	ಸದರಿ ಗ್ರಾಮಗಳು ಈಗಾಗಲೇ ಗ್ರಾಮ ಪಂಚಾಯಿತಿಗಳಾಗಿದ್ದು, ಈ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಜಿಲ್ಲಾಧಿಕಾರಿಗಳು, ಕಲಬುರ್ಗಿ ಜಿಲ್ಲೆ ರವರಿಂದ ಸೂಕ್ತ ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.
ಇ	ಹಾಗಿದ್ದಲ್ಲಿ ಈ ಗ್ರಾಮಗಳನ್ನು ಯಾವಾಗ ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು (ವಿವರ ನೀಡುವುದು)?	ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ರವರಿಂದ ಪ್ರಸ್ತಾವನೆ ಬಂದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಂಖ್ಯೆ:ನಅಇ 82 ಎಲ್‌ಎಕ್ಯೂ 2020.

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 85 ಎಲ್ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1099ಕ್ಕೆ ಉತ್ತರಿಸುವ ಕುರಿತು

~**********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1099ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
AVijayakumar
14.12.2020
(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

1 G

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1099**
ಸದಸ್ಯರ ಹೆಸರು : **ಡಾ. ಅಜಯ್ ಧರ್ಮ ಸಿಂಗ್ (ಜೇವರ್ಗಿ)**
ಉತ್ತರಿಸುವ ದಿನಾಂಕ : **11/12/2020**
ಉತ್ತರಿಸುವ ಸಚಿವರು : **ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**

	ಪ್ರಶ್ನೆ	ಉತ್ತರ
ಅ	ಯಡ್ರಾಮಿ ಗ್ರಾಮ ಪಂಚಾಯಿತಿ ಕೇಂದ್ರವನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸಿ ಅಧಿಸೂಚನೆ ಹೊರಡಿಸಲಾಗಿದೆಯೇ (ವಿವರವನ್ನು ನೀಡುವುದು);	ಯಡ್ರಾಮಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿ ದಿನಾಂಕ:05/11/2020 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅಧಿಸೂಚನೆಯ ಪ್ರತಿ ಲಗತ್ತಿಸಿದೆ.
ಆ	ಹಾಗಿದ್ದಲ್ಲಿ ಯಡ್ರಾಮಿ ಪಟ್ಟಣ ಪಂಚಾಯಿತಿಯ ಅನುಷ್ಠಾನಕ್ಕಾಗಿ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?	ಜಿಲ್ಲಾಧಿಕಾರಿ, ಕಲಬುರಗಿ ರವರಿಗೆ ದಿನಾಂಕ:21/11/2020 ರಂದು, ಪಟ್ಟಣ ಪಂಚಾಯಿತಿಯ ಅನುಷ್ಠಾನಕ್ಕೆ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಸಂಖ್ಯೆ:ನಅಇ 85 ಎಲ್‌ಎಕ್ಯೂ 2020.

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೩ Part – III	ಬೆಂಗಳೂರು, ಶನಿವಾರ,೦೭,ನವೆಂಬರ್,೨೦೨೦(ಕಾರ್ತೀಕ,೧೬, ಶಕವರ್ಷ ೧೯೪೨) Bengaluru, SATURDAY,07,NOVEMBER,2020(Karthika,16, ShakaVarsha 1942)	ನಂ. ೫೨೯ No. 529

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 87 ಎಂಎಲ್ಆರ್ 2015

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:05.11.2020.

<u>ಅಧಿಸೂಚನೆ</u>

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 9ನೇ ಪ್ರಕರಣದೊಂದಿಗೆ ಓದಿಕೊಂಡ 349, 351 ಮತ್ತು 355(ಬಿ)ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಕಲ್ಬುರ್ಗಿ ಜಿಲ್ಲೆಯ ಯಡ್ರಾಮಿ 'ಗ್ರಾಮ ಪಂಚಾಯತಿ ಪ್ರದೇಶವನ್ನು'ಯಡ್ರಾಮಿ 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಯಡ್ರಾಮಿ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 87 ಎಂಎಲ್ಆರ್ 2015, ದಿನಾಂಕ:11.09.2020ನ್ನು ದಿನಾಂಕ:11.09.2020ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3ರ ಸಂಖ್ಯೆ: 397 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು/ಸಲಹೆಗಳು ಸ್ವೀಕೃತವಾಗಿಲ್ಲದಿರುವುದರಿಂದ,

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 9ನೇ ಪ್ರಕರಣದೊಂದಿಗೆ ಓದಿಕೊಂಡ 349, 351 ಮತ್ತು 355(ಬಿ)ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ

ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ'ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಕಲ್ಬುರ್ಗಿ ಜಿಲ್ಲೆಯ ಯಡ್ರಾಮಿ 'ಗ್ರಾಮ ಪಂಚಾಯಿತಿ ಪ್ರದೇಶವನ್ನು ಯಡ್ರಾಮಿ 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಯಡ್ರಾಮಿ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ-

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು; **10,598**
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು; **933**
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು; **56%**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಕಡತ ಸಂಖ್ಯೆ: ನಅಇ 87 ಎಂಎಲ್ಆರ್ 2015

ಶೆಡ್ಯೂಲ್ – ಎ

ಜಿಲ್ಲೆಯ ಹೆಸರು	ತಾಲ್ಲೂಕು	ಮೇಲ್ದರ್ಜೆಗೇರಿಸಲಾಗುವ ಗ್ರಾಮ ಪಂಚಾಯಿತಿ ಹೆಸರು	ಮೇಲ್ದರ್ಜೆಗೇರಿಸಿದ ನಂತರ ಒಟ್ಟಾರೆ ಪರಿಗಣಿಸಲ್ಪಡುವ ಪ್ರದೇಶ (ಏರಿಯಾ) (ಚ.ಕಿ.ಮೀ.)
ಕಲಬುರಗಿ	ಜೇವರ್ಗಿ	ಯಡ್ರಾಮಿ ಗ್ರಾಮಪಂಚಾಯಿತಿ	11.35 ಚ.ಕಿ.ಮೀ.

ಶೆಡ್ಯೂಲ್ –ಬಿ

ಪೂರ್ವಕ್ಕೆ: ಯಡ್ರಾಮಿ ಗ್ರಾಮವು ಜೇವರ್ಗಿ ಮತ್ತು ಚಿಗರಹಳ್ಳಿ ಮುಖ್ಯ ರಸ್ತೆಯ ಮೇಲೆ ನಿರ್ಮಾಣವಾಗಿದ್ದು ಸರ್ವೆ ನಂ.259 ರಿಂದ ಪ್ರಾರಂಭಗೊಂಡಿದ್ದು ದಕ್ಷಿಣಾಭಿಮುಖವಾಗಿ ಸರ್ವೆ ನಂ.442/1 ಅಖಂಡಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯನ್ನೊಳಗೊಂಡು ಸರ್ವೆ ನಂ. 442/1ರವರೆಗೆ ಮತ್ತು ಸ.ನಂ.ಗಳಾದ 447, 441, 440 ಕೂಡ ಒಳಗೊಂಡಿರುತ್ತದೆ.

ಪಶ್ಚಿಮಕ್ಕೆ: ಸ.ನಂ.22, 14, 15 ಇರುತ್ತವೆ ಮತ್ತು ಕಡಕೋಳ ಗ್ರಾಮ ಪಂಚಯಿತಿ ವ್ಯಾಪ್ತಿಯಲ್ಲಿ ಬರುವ ಯತ್ನಾಳ ಗ್ರಾಮಕ್ಕೆ ಹೋಗುವ ರಸ್ತೆ ಇರುತ್ತದೆ. ಅದೇ ರೀತಿ ಕಡಕೋಳ ಗ್ರಾಮಕ್ಕೆ ಹೋಗುವ ರಸ್ತೆಗೆ ಸ.ನಂ.10,233ಕ್ಕೆ ಅಂತ್ಯಗೊಂಡಿದೆ.

ಉತ್ತರಕ್ಕೆ: ಗೌಂಠಾಣ ಸ.ನಂ. 1, 2, 3, 4, 5 ಇಲ್ಲಿ ಪುರಾತನ ಕಾಲದ ರಾಮತೀರ್ಥ ಕೂಡ ಇದೆ. ಅರಳಗುಂಡಗಿ ಹೋಗುವ ರಸ್ತೆಗೆ ಹೊಂದಿಕೊಂಡಿರುವ ಸ.ನಂ.237 ರಿಂದ ಸ.ನಂ.207ಕ್ಕೆ ಅಂತ್ಯಕೊಂಡಿದೆ.

ದಕ್ಷಿಣಕ್ಕೆ: ಸುಂಬಡ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಸುಂಬಡ ಗ್ರಾಮಕ್ಕೆ ಹೋಗುವ ರಸ್ತೆಯನ್ನು ಹೊಂದಿಕೊಂಡಿರುವ ಸ.ನಂ. 425, 426, 427, 428, 439, 442/1, 435, 434 ಗಳನ್ನೊಳಗೊಂಡಿರುತ್ತದೆ ಮತ್ತು ಪೂರ್ವಕ್ಕೆ ಅಭಿಮುಖವಾಗಿ ತಾಂಡಾ ಇರುತ್ತದೆ. ಅದೇ ರೀತಿ ಯು.ಕೆ.ಪಿ.(ಕೃ.ಭಾ.ಜ.ನಿ.ನಿ) ಕ್ಯಾಂಪ್ ಕೂಡ ಇರುತ್ತದೆ.

GOVERNMENT OF KARNATAKA

No.UDD 87 MLR 2015

Karanataka Government Secretariat
Vikasasoudha
Bangalore, Dated:05.11.2020.

NOTIFICATION

Whereas the Notification of declaring the **'Grama Panchayat Area' of Yadrami** as Transitional area of **Yadrami, Jewargi Taluk, Kalaburgi District** mentioned in the Schedule "A" along with boundaries mentioned in Schedule "B" is hereby declared as the "Transitional Area" of **Yadrami** and further such area is specified as **"Town Panchayat Area" of Yadrami** was published as required by Section 349, 351 and 355(B) of the Karnataka Municipalities Act, 1964, vide 'Government Notification No:UDD 87 MLR 2015, dated:11.09.2020' by providing thirty days time and was published in part- III, No.397 Karnataka Gazette Extraordinary, dated:11.09.2020 inviting objections from all persons likely to be affected thereby on or before thirty days from the date of publication of the above notification.

And whereas the notification was made available to the public on the day of publication;

And whereas no objections/suggestions were received within the stipulated time,

Now, therefore, in exercise of the powers conferred by Section 9, 349, 351 and 355(B) of the Karnataka Municipalities Act, 1964, the Hon'ble Governor, hereby notify the **'Grama Panchayat Area' of Yadrami** area as Transitional area of Yadrami, Jewargi Taluk, Kalaburgi District mentioned in Schedule-A along with boundaries mentioned in

Schedule-B as the "Transitional Area" of **Yadrami**, and further specifying such area to be the "Town Panchayat Area" of **Yadrami** of Jewargi Taluk, Kalaburgi District, having regard to:-

i. The population of such area is not less than ten thousand and not more than Twenty thousand; **10,598**

ii. The density of population in such area is not less than four hundred inhabitants to one square kilometer of area; **933**

iii. The percentage of employment in non-agricultural activities is not less than fifty per cent of the total employment; **56%**

By Order and in the name of the
Governor of Karnataka,

(A. VIJAYAKUMAR)
Under Secretary to Government,
Urban Development Department.

File No. UDD 87 MLR 2015

Schedule – A

District	Taluk	Name of Grama Panchayat	Proposed villages to be included (details)	Total Upgraded Are a (Square kilometer)
Kalaburgi	Jewargi	Yadrami Gram Panchayat	Yadrami Gram Panchayat	11.35 Sq.KM

Schedule - B

East: Yadrami village boundary line point in near Jewargi to Chigarahalli Main Road, Eastablished to start from S.N. 259, and goes through south via S.No.442/1 and it covers Akhandahalli Road & goes upto s.no. 442/1 and it covers s.no.447, 441 and 440 also.

West: There is road to Yatnal under Kadakol Gram Panchayat and s.no.22, 14 and 15 are available. In the same way the road which goes to Kadakol is ended line s.no.10, 233.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

North: In Gaunthan Survey No.1, 2, 3, 4 and 5 there is a Historical a RAMATEERTHA TEMPLE is located. The way which goes to Aralagundagi is ended ine from Survey No.237 to 207.

South: The road which goes to SUMBAD which comes under Sumbad Grama panchayat having a s.nos.425, 426, 427, 428, 439, 442/1, 438, 435 & 434 under premises. In the east there is a tanda and UKP Camp is located.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE

E

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 95 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.12.2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1102ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1102ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
ಲಕ್ಷ್ಮೀಕಾಂತ ಟಿ.
(ಲಕ್ಷ್ಮೀಕಾಂತ ಟಿ.)
ಶಾಖಾಧಿಕಾರಿ,
ಪೌರಾಡಳಿತ–2
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1102
ಸದಸ್ಯರ ಹೆಸರು :	ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)
ಉತ್ತರಿಸಬೇಕಾದ ದಿನಾಂಕ :	11-12-2020
ಉತ್ತರಿಸುವವರು :	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ನಾಗರೀಕ ಸೇವೆಗಳನ್ನು ಸ್ವಯಂಚಾಲಿತ ಆನ್‌ಲೈನ್ ತಂತ್ರಾಂಶದ ಮುಖಾಂತರ ಒದಗಿಸಲಾಗುತ್ತಿದೆಯೇ; ಹಾಗಿದ್ದಲ್ಲಿ ಯಾವ ಯಾವ ಸೇವೆಗಳನ್ನು ಒದಗಿಸಲಾಗುತ್ತಿದೆ; (ಸಂಪೂರ್ಣ ವಿವರ ಒದಗಿಸುವುದು)	ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ನಾಗರೀಕ ಸೇವೆಗಳನ್ನು ಸ್ವಯಂಚಾಲಿತ ಆನ್‌ಲೈನ್ ತಂತ್ರಾಂಶದ ಮುಖಾಂತರ ಒದಗಿಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳು ನಾಗರೀಕರಿಗೆ ನೀಡುವ ಸೇವೆಗಳಿಗೆ ಸಂಬಂಧಪಟ್ಟಂತೆ ನಳ ಮತ್ತು ಒಳ ಚರಂಡಿ ಸಂಪರ್ಕ (ಜಲನಿಧಿ)ಕಟ್ಟಡ ಪರವಾನಿಗೆ (ನಿರ್ಮಾಣ-2), ಉದ್ದಿಮೆ ಪರವಾನಿಗೆ (ವ್ಯಾಪಾರ), ಇ-ಆಸ್ತಿ, ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆ (ಜನಹಿತ), ವೆಬ್‌ಸೈಟ್, ರಸ್ತೆ ಅಗೆತಕ್ಕೆ (ರೈಟ್ ಆಫ್ ವೇ) ಅನುಮತಿ ಮತ್ತು ಮೊಬೈಲ್ ಟವರ್ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ತಂತ್ರಾಂಶಗಳ ಮೂಲಕ ನಾಗರೀಕರು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ, ಶುಲ್ಕವನ್ನು ಪಾವತಿ ಮಾಡಬಹು ದಾಗಿರುತ್ತದೆ, ಅರ್ಜಿಯ ಸ್ಥಿತಿಯನ್ನು ತಿಳಿಯಬಹುದಾಗಿರುತ್ತದೆ ಮತ್ತು ಪರವಾನಿಗೆ / ಅನುಮತಿ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ನಿರ್ವಹಣೆಗೆ ನಿಧಿ ಆಧಾರಿತ ದ್ವಿನಮೂದು ಲೆಕ್ಕ ಪದ್ಧತಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿರುತ್ತದೆ.
ಆ)	ಸ್ಥಳೀಯ ಸಂಸ್ಥೆಗಳ ಕಛೇರಿ ಕಾರ್ಯ ಚಟುವಟಿಕೆಗಳು ಸ್ವಯಂಚಾಲಿತ ನಿರ್ವಹಣೆಗಾಗಿ ಎಂಟರ್‌ಪ್ರೈಸ್ ರಿಸೋರ್ಸ್ ಪ್ಲಾನಿಂಗ್-ಆನ್‌ಲೈನ್ ತಂತ್ರಾಂಶ ಉದ್ಯಮ ಸಂಪನ್ಮೂಲ ಯೋಜನೆ ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದ್ದು, ಇದು ಯಾವ ಹಂತದಲ್ಲಿದೆ; ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಈ ಸೇವೆಗಳನ್ನು ಅನುಷ್ಠಾನಗೊಳಿಸಲಾಗಿದೆಯೇ;	ಎಂಟರ್‌ಪ್ರೈಸ್ ರಿಸೋರ್ಸ್ ಪ್ಲಾನಿಂಗ್ ಗೆ ಸಂಬಂಧಪಟ್ಟಂತೆ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು Nihon Technologies ರವರಿಗೆ ಟೆಂಡರ್ ಪ್ರಕ್ರಿಯೆಯ ಮೂಲಕ ಕಾರ್ಯಾದೇಶವನ್ನು ನೀಡಿದ್ದು, ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಮೊದಲನೇ ಹಂತದಲ್ಲಿ ನೀರಿನ ಸಂಪರ್ಕ (ಜಲನಿಧಿ), ರಸ್ತೆ ಅಗೆತಕ್ಕೆ (ರೈಟ್ ಆಫ್ ವೇ) ಅನುಮತಿ, ಪೌರಾಡಳಿತ ನಿರ್ದೇಶನಾಲಯ ಹಾಗೂ ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳು, ಇ-ಸ್ವೀಕೃತಿ ಮತ್ತು ಯುಜರ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ತಂತ್ರಾಂಶಗಳ ಅಭಿವೃದ್ಧಿ ಪೂರ್ಣಗೊಂಡು ನಗರ ಸ್ಥಳೀಯ ಸಂಸ್ಥೆಗಳ ಪರಿಶೀಲನೆ ವರದಿಯಲ್ಲಿ ತಿಳಿಸಿರುವ ನ್ಯೂನ್ಯತೆ/ಸಲಹೆ/ ಸೂಚನೆಗಳನ್ನು ಪರಿಶೀಲಿಸಿ ಅಳವಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಇ)	ಬಹಳಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ನಾಗರೀಕ ಸೇವೆಗಳು ಆನ್‌ಲೈನ್ ತಂತ್ರಾಂಶದ ಮೂಲಕ ಜನರಿಗೆ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ಪರಿಣಾಮಕಾರಿಯಾಗಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಬಂದಿದೆ. ಆನ್‌ಲೈನ್ ತಂತ್ರಾಂಶಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವ ಕುರಿತು ಆಗಿಂದ್ದಾಗೆ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಹಲವು ತಂತ್ರಾಂಶಗಳನ್ನು ಯಶಸ್ವಿಗೊಳಿಸಲು ಕಡ್ಡಾಯಗೊಳಿಸಿ ಹಾಗೂ ಸಕಾಲ ತಂತ್ರಾಂಶದೊಂದಿಗೆ ಇಂಟಿಗ್ರೇಟ್ ಮಾಡಲಾಗಿರುತ್ತದೆ. ಸದರಿ ತಂತ್ರಾಂಶಗಳ ಅನುಷ್ಠಾನಕ್ಕೆ ಆಗಿಂದ್ದಾಗೆ ಅಗತ್ಯ ನಿರ್ದೇಶನ ಹಾಗೂ ಸುತ್ತೋಲೆಗಳನ್ನು ದಿನಾಂಕ: 30.01.2016, 05.02.2016, 08.02.2018, 19.09.2019ರಂದು ಹೊರಡಿಸಲಾಗಿದೆ.

ಸಂಖ್ಯೆ: ನಅಇ 95 ಜಿಇಎಲ್ 2020

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

E

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 90 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.12.2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. (ಮಾಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1075ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. (ಮಾಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1075ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಲಕ್ಷ್ಮೀಕಾಂತ ಟಿ.

(ಲಕ್ಷ್ಮೀಕಾಂತ ಟಿ.)
ಶಾಖಾಧಿಕಾರಿ,
ಪೌರಾಡಳಿತ-2
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1075
ಸದಸ್ಯರ ಹೆಸರು	:	ಶ್ರೀ ನಂಜೇಗೌಡ ಕೆ.ವೈ (ಮಾಲೂರು)
ಉತ್ತರಿಸಬೇಕಾದ ದಿನಾಂಕ	:	11.12.2020
ಉತ್ತರಿಸುವವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಮಾಲೂರು ಪುರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿನ ಖಾಸಗಿ ಆಸ್ತಿಗಳಿಗೆ ಇ-ಸ್ವತ್ತು ಮತ್ತು ಆಸ್ತಿ ವರ್ಗಾವಣೆ ಮಾಡಿಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಧಿಕೃತ ಖಾಸಗಿ ಆಸ್ತಿಗಳಿಗೆ ಇ-ಆಸ್ತಿ ಮುಖಾಂತರ ಆಸ್ತಿ ವರ್ಗಾವಣೆ ಮಾಡಲಾಗುತ್ತಿದೆ.
ಆ	ಬಂದಿದ್ದಲ್ಲಿ, ಇ-ಸ್ವತ್ತು ಮತ್ತು ಆಸ್ತಿ ಹಕ್ಕು ವರ್ಗಾವಣೆ ಮಾಡಿಕೊಡದಿರಲು ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರದ ಕಾಯ್ದೆ / ನಿಯಮಗಳಡಿ ನಗರ ಸ್ಥಳೀಯ ಸಂಸ್ಥೆಗಳು ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆಯನ್ನು ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ ಮಾಲೂರು ಪುರಸಭೆಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಇರುವ ಅನಧಿಕೃತ ಮತ್ತು ನಿಯಮಬಾಹಿರ ನಿವೇಶನಗಳಿಗೆ ಮತ್ತು ಆಸ್ತಿಗಳಿಗೆ ಇ-ಆಸ್ತಿ ಮುಂಖಾಂತರ ಆಸ್ತಿ ವರ್ಗಾವಣೆ ಮಾಡುತ್ತಿಲ್ಲ.
ಇ	ಇಂತಹ ಸಮಸ್ಯೆಗಳು ಎಷ್ಟು ನಗರ ಮತ್ತು ಪಟ್ಟಣಗಳಲ್ಲಿವೆ; (ವಿವರ ನೀಡುವುದು)	ಇಂತಹ ಸಮಸ್ಯೆಗಳು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಂಡುಬಂದಿದೆ.
ಈ	ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರದ ಮುಂದಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಲಾದ ನಗರ ಮತ್ತು ಪಟ್ಟಣಗಳಲ್ಲಿ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸುವ ಸಂಬಂಧ ಕಲಂ 76 ಎಫ್‌ಎಫ್ ಸೇರ್ಪಡೆಗೊಳಿಸಿ ನಿಯಮಗಳನ್ನು ರಚಿಸಲಾಗಿರುತ್ತದೆ. ಸದರಿ ಕಾಯ್ದೆ/ನಿಯಮಗಳನ್ನು ಜಾರಿಗೊಳಿಸದೇ ಇರುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮತ್ತು ನಗರ ಪ್ರದೇಶಗಳಲ್ಲಿ ಇ-ಖಾತಾ (Form-3) ನೀಡುವ ಕುರಿತು ಪರಾಮರ್ಶಿಸಲು ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ.

ಸಂಖ್ಯೆ: ನಅಇ 90 ಜಿಇಎಲ್ 2020

(ಡಾ: ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 100 ಪಿಎಂಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 530 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 530 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha HC
(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು	: ಶ್ರೀ. ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 530
ಉತ್ತರಿಸಬೇಕಾದ ದಿನಾಂಕ	: 11.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆ ಕುಶಾಲನಗರದ ಬಸವನಳ್ಳಿ ಲ್ಯಾಂಪ್ಸ್ ಸೊಸೈಟಿಯಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ದುರುಪಯೋಗ ಆಗಿರುವ ಹಣ ಎಷ್ಟು ಹಾಗೂ ಹಣ ವಸೂಲಾತಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ಪೂರ್ಣ ವಿವರ ನೀಡುವುದು)	ಕೊಡಗು ಜಿಲ್ಲೆ ಸೋಮವಾರಪೇಟೆ ತಾ ಕುಶಾಲನಗರ ಹೋಬಳಿಯ ಬಸವನಹಳ್ಳಿ ಲ್ಯಾಂಪ್ಸ್ ಸಹಕಾರ ಸಂಘದಲ್ಲಿ 2018-19 ಹಾಗೂ 2019-20ನೇ ಸಾಲುಗಳ ಲೆಕ್ಕಪರಿಶೋಧನೆಯು ಪ್ರಸ್ತುತ ಪೂರ್ಣಗೊಂಡಿದ್ದು, ಎರಡು ವರ್ಷಗಳ ಲೆಕ್ಕಪರಿಶೋಧನೆಯಲ್ಲಿ ದುರುಪಯೋಗವಾಗಿರುವುದು ಕಂಡು ಬಂದಿದ್ದು ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ದುರುಪಯೋಗ ನಡೆಸಿದ ವಿವರ	ದುರುಪಯೋಗದ ಒಟ್ಟು ಮೊಬಲಗು (ರೂ)
1	ಕಿರು ಅರಣ್ಯ ಉತ್ಪನ್ನ ಮುಂಗಡ	9,45,380.00
2	ವ್ಯಾಪಾರ ಮುಂಗಡ	75,000.00
3	ಕಿರು ಅರಣ್ಯ ಉತ್ಪನ್ನ ಮುಂಗಡ 2019-20	9,61,475.00
4	ವ್ಯಾಪಾರ ಮುಂಗಡ 2019-20	4,05,000.00
	ಒಟ್ಟು	**23,86,855.00**

1793	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Mallavva Kajagar	DOUBALE AADHAR CARD
1794	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Virupakshappa Hurali	DOUBALE AADHAR CARD
1795	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Chandrappa Harugoppa	DOUBALE AADHAR CARD
1796	SAVADATTI	ಇಂಚಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	DUNDAPPA BENAKATTI	DOUBALE AADHAR CARD
1797	SAVADATTI	ಕಮಲಿಶಿವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Bhagappa Rebbannavar	DOUBALE AADHAR CARD
1798	SAVADATTI	ಕೊರಕೊಪ್ಪ ಸೊಪ್ಪಡ್ಲ ಪಿ.ಕೆ.ಪಿ.ಎಸ್ ನಿ,	Prema B Goudra	DOUBALE AADHAR CARD
1799	SAVADATTI	ಬೂದಿಗೊಪ್ಪ ಗ್ರಾಮ ಸೇವಾ ಸಹಕಾರ ಸಂಘ ನಿ.	Balappa Basavantappa Shidabasanavar	DOUBALE AADHAR CARD
1800	SAVADATTI	ಬೂದಿಗೊಪ್ಪ ಗ್ರಾಮ ಸೇವಾ ಸಹಕಾರ ಸಂಘ ನಿ.	Basalingappa Basavantappa Siddabasnnavar	DOUBALE AADHAR CARD
1801	SAVADATTI	ಮಾಡಮಗೇರಿ - ತಾವಲಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ಮಾಡಮಗೇರಿ-ತಾವಲಗೇರಿ	BEERAPPA SIDDAPPA YARAGOPPA	DOUBALE AADHAR CARD
1802	SAVADATTI	ಮಾಡಮಗೇರಿ - ತಾವಲಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ಮಾಡಮಗೇರಿ-ತಾವಲಗೇರಿ	VITTAL SIDDAPPA YARAGOPPA	DOUBALE AADHAR CARD
1803	SAVADATTI	ಮುಗಳಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Neelavva J Syandagi	DOUBALE AADHAR CARD
1804	SAVADATTI	ಯರಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	ISWAR BADIGER	DOUBALE AADHAR CARD
1805	SAVADATTI	ಯರಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	FAKIRAPPA CHANNAMETRI	DOUBALE AADHAR CARD
1806	SAVADATTI	ಯರಝರ್ವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHASHIKALA BASAVARAJ HADIMANI	DOUBALE AADHAR CARD
1807	SAVADATTI	ರೈನಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	LAXMIBAYI B BAGODI	DOUBALE AADHAR CARD
1808	SAVADATTI	ರೈನಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	NAKUL V KADEMANI	DOUBALE AADHAR CARD
1809	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Basavaraj Hasabi	DOUBALE AADHAR CARD
1810	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Mahadevi Sangappa Hasabi	DOUBALE AADHAR CARD
1811	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Nagaraj Wali	DOUBALE AADHAR CARD
1812	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	CHANNAPPA GODI	DOUBALE AADHAR CARD
1813	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PANCHAKSHARI GODI	DOUBALE AADHAR CARD
1814	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	NAGAPPA KABBUR	DOUBALE AADHAR CARD
1815	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	NINGAPPA KODLIVAD	DOUBALE AADHAR CARD
1816	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAVANNEPPA SONTANNAVAR	DOUBALE AADHAR CARD
1817	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MUTTAVVA BANDIVADDAR	DOUBALE AADHAR CARD
1818	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAPPA BHANGI	DOUBALE AADHAR CARD
1819	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MALLAPPA KHADAKABHAVI	DOUBALE AADHAR CARD
1820	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	NAGAPPA HARALI	DOUBALE AADHAR CARD
1821	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RATNAVVA TORAGALL	DOUBALE AADHAR CARD
1822	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAHADEVAPPA PATIL	DOUBALE AADHAR CARD
1823	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRAMMA HUKKERI	DOUBALE AADHAR CARD
1824	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAHADEVAPPA BAGIDI	DOUBALE AADHAR CARD
1825	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	GURUPADAPPA KOTRASHETTI	DOUBALE AADHAR CARD
1826	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAVARAJ UPPIN	DOUBALE AADHAR CARD
1827	SAVADATTI	ಹಂಚಿನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHANTAVVA SANADI	DOUBALE AADHAR CARD
1828	SAVADATTI	ಹಂಚಿನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	VIJAKUMAR YALLAPPA GOVANNAVAR	DOUBALE AADHAR CARD
1829	SAVADATTI	ಶ್ರೀ ಕುಮಾರೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ಗೊರವನಕೊಳ್ಳ	Irappa Yallappa Shetttimali	DOUBALE AADHAR CARD
1830	SAVADATTI	ಚಿಕ್ಕುಳ್ಳಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Chandragoud Somanagouda Huded	DOUBALE AADHAR CARD
1831	SAVADATTI	ಹಿರೇಉಳ್ಳಿಗೇರಿ ಗ್ರಾಮ ಸೇವಾ ಸಹಕಾರ ಸಂಘ ನಿ.	DHATHARYYA ANNARAV KULAKARANI	DOUBALE AADHAR CARD
1832	SAVADATTI	ಹಿರೇಉಳ್ಳಿಗೇರಿ ಗ್ರಾಮ ಸೇವಾ ಸಹಕಾರ ಸಂಘ ನಿ.	KARIYAPPA THIRTHAD	DOUBALE AADHAR CARD
1833	SAVADATTI	ಅರಟಗಲ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	LAXMAN BHIMANGOUD NAIKAR	DOUBALE AADHAR CARD
	SAVADATTI	ಗ್ರಾಮದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ	MAHANTESH HALTI	DOUBALE AADHAR CARD

1835	SAVADATTI	ಗ್ರಾಮದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ: ತೆಗ್ಗಿಹಾಳಮಡ್ಡಿ	MAHADEV HATTI	DOUBALE AADHAR CARD
1836	SAVADATTI	ಜಾಲಿಕಟ್ಟಿ ಜೀವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PARVATEVVA SURESH ARIBENCHI	DOUBALE AADHAR CARD
1837	SAVADATTI	ಜಾಲಿಕಟ್ಟಿ ಜೀವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	ADIVEPPA UF SURESH BASAVANNEPPA ARIBENCHI	DOUBALE AADHAR CARD
1838	SAVADATTI	ಜಾಲಿಕಟ್ಟಿ ಜೀವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RUKMAVVA SURESH TALAVAR	DOUBALE AADHAR CARD
1839	SAVADATTI	ಜಾಲಿಕಟ್ಟಿ ಜೀವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Marnohar Basavanneppa Aribenchi	DOUBALE AADHAR CARD
1840	SAVADATTI	ಜಾಲಿಕಟ್ಟಿ ಜೀವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAVARAJ KRUSHTNAPPA NAIKAR	DOUBALE AADHAR CARD
1841	SAVADATTI	ತಗ್ಗಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MANJUNATH TIMMANNAVAR	DOUBALE AADHAR CARD
1842	SAVADATTI	ತಗ್ಗಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	HASANSAB H JAKATI	DOUBALE AADHAR CARD
1843	SAVADATTI	ತಗ್ಗಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	FAKIRAPPA V BARKI	DOUBALE AADHAR CARD
1844	SAVADATTI	ತಗ್ಗಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	HANUMANT CHUNCHANUR	DOUBALE AADHAR CARD
1845	SAVADATTI	ಧೂಪದಾಳ ಗ್ರಾಮಸೇವಾ ಸಹಕಾರಿ ಸಂಘ ನಿ.	Doddavva Pujeri	DOUBALE AADHAR CARD
1846	SAVADATTI	ಬಳಿಗೋಣೆ ಗ್ರಾಮ ಸೇವಾ ಸಹಕಾರ ಸಂಘ ನಿ.	SANNABHIMAPPA HANAMAPPA SUBRA	DOUBALE AADHAR CARD
1847	SAVADATTI	ಶ್ರೀ ಮಲ್ಲಿಕಾರ್ಜುನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಮುನವಳ್ಳಿ	DEVAPPA URF DEVENDRAPPA BHIMAPPA PUJER	DOUBALE AADHAR CARD
1848	SAVADATTI	ಶಿರಸಂಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SAYYADKHAN PATHAN	DOUBALE AADHAR CARD
1849	SAVADATTI	ಕಲ್ಪತರು ಪಿ.ಕೆ.ಪಿ.ಎಸ್ ಮುರಗೋಡ	JAVID MOGAL	FAMILY CROSSED 1 LAK
1850	SAVADATTI	ಕಲ್ಪತರು ಪಿ.ಕೆ.ಪಿ.ಎಸ್ ಮುರಗೋಡ	SURESH NAVVALAGATTI	FAMILY CROSSED 1 LAK
1851	SAVADATTI	ಮರಕುಂಬಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Somappa Bailwad	FAMILY CROSSED 1 LAK
1852	SAVADATTI	ಮರಕುಂಬಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Adiveppa Mavinakatti	FAMILY CROSSED 1 LAK
1853	SAVADATTI	ಮರಕುಂಬಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Arjun kalkutkar	FAMILY CROSSED 1 LAK
1854	SAVADATTI	ಮರಕುಂಬಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Sushilavva Bolettin	FAMILY CROSSED 1 LAK
1855	SAVADATTI	ಶ್ರೀ ಗಣೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Ashok Ingalagi	FAMILY CROSSED 1 LAK
1856	SAVADATTI	ಶ್ರೀ ಬಸವೇಶ್ವರ ಪಿ.ಕೆ.ಪಿ.ಎಸ್ ಚಿಕೊಪ್ಪ ಕೆ.ಎಂ.	Vishwanath Patil	FAMILY CROSSED 1 LAK
1857	SAVADATTI	ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Balanagoud Goudar	FAMILY CROSSED 1 LAK
1858	SAVADATTI	ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Shivakka Fakkirappa Jirigawad	FAMILY CROSSED 1 LAK
1859	SAVADATTI	ಹಾರುಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Maruti Hugar	FAMILY CROSSED 1 LAK
1860	SAVADATTI	ಇಟ್ನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRAPPA YALLAPPA CHANDARAGI	FAMILY CROSSED 1 LAK
1861	SAVADATTI	ಬೂದಿಗೊಪ್ಪ ಗ್ರಾಮ ಸೇವಾ ಸಹಕಾರ ಸಂಘ ನಿ.	NEELAKANTH ADIVEPPA KANOJI	FAMILY CROSSED 1 LAK
1862	SAVADATTI	ರೈನಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MALLAPPA B KANAKI	FAMILY CROSSED 1 LAK
1863	SAVADATTI	ರೈನಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SIDDAPPA F HOSAMANI	FAMILY CROSSED 1 LAK
1864	SAVADATTI	ಸವದತ್ತಿ ವಾರ್ಡನಂ 1 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Girish Hampannavar	FAMILY CROSSED 1 LAK
1865	SAVADATTI	ರಾಮಾಪೂರಸೈಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RAYANAGOUDA S PATIL	FAMILY CROSSED 1 LAK
1866	SAVADATTI	ಮಭನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	KENCHPPA MALAGALI	FAMILY CROSSED 1 LAK
1867	SAVADATTI	ಹಾರುಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	ANAND PATIL	FAMILY CROSSED 1 LAK
1868	SAVADATTI	ಇಂಚಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Ishwar Bagewadi	ATHENTICATION FAIL
1869	SAVADATTI	ಚಚಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Patrayya Hiremath urf Mellenavar	ATHENTICATION FAIL
1870	SAVADATTI	ಚಚಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Irappa Alladakatti	ATHENTICATION FAIL
1871	SAVADATTI	ಚಚಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Irappa Iti	ATHENTICATION FAIL
1872	SAVADATTI	ಚಚಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Balavva urf Parvatevva Ingalagi	ATHENTICATION FAIL
1873	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Gangavva Suresh Bhajantri	ATHENTICATION FAIL
1874	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Demavva Ingalagi	ATHENTICATION FAIL
1875	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Prakash Goudar alliyas Dundanakoppa	ATHENTICATION FAIL
1876	SAVADATTI	ಕಡಬಿಶಿವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Riyaj Kotur	ATHENTICATION FAIL
1877	SAVADATTI	ಕಡಬಿಶಿವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Nursab Kotur	ATHENTICATION FAIL
1878	SAVADATTI	ಕಡಬಿಶಿವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Virupakshi Lakshetti	ATHENTICATION FAIL
1879	SAVADATTI	ಕೊಟೂರ ಶಿವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Mahadev Shivlingappa Desai	ATHENTICATION FAIL
1880	SAVADATTI	ಬೆಣಕಕಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	DYAMAVVA HANAMAPPA KALLAKUTRI (UPPAR)	ATHENTICATION FAIL
1881	SAVADATTI	ಮಬನೂರ-ಮದ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Kenchanaik Patil	ATHENTICATION FAIL
1882	SAVADATTI	ಮಬನೂರ-ಮದ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Somanayka Patil	ATHENTICATION FAIL
1883	SAVADATTI	ಮಬನೂರ-ಮದ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SANNATIPPANNA ITI	ATHENTICATION FAIL
1884	SAVADATTI	ಮುಗಳಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Irappa T Naykar	ATHENTICATION FAIL

1885	SAVADATTI	ರೈನಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	ARUN S KADEMANI	ATHENTICATION FAIL
1886	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	VITTHAL SANNAMANAVAR	ATHENTICATION FAIL
1887	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Yallanaik Yarazarvi	ATHENTICATION FAIL
1888	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Venkavva Gangaraddi	ATHENTICATION FAIL
1889	SAVADATTI	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Veerayy Hiremath	ATHENTICATION FAIL
1890	SAVADATTI	ಶ್ರೀ ಶಿವಯೋಗೀಶ್ವರ ಪಿ.ಕೆ.ಪಿ.ಎಸ್ ಆಲದಕಟ್ಟಿ (ಕೆ.ಎಂ)	MANTAYYA SA.VEERAYYA HIREMAT	ATHENTICATION FAIL
1891	SAVADATTI	ಶ್ರೀ ಶಿವಯೋಗೀಶ್ವರ ಪಿ.ಕೆ.ಪಿ.ಎಸ್ ಆಲದಕಟ್ಟಿ (ಕೆ.ಎಂ)	NINGANAGOUD SHIVAPPA SANAGOUDRA	ATHENTICATION FAIL
1892	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAYYA MATAPATI	ATHENTICATION FAIL
1893	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	KASTURI HONAKUPPI	ATHENTICATION FAIL
1894	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRAPPA WALI	ATHENTICATION FAIL
1895	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Rajema Barki	ATHENTICATION FAIL
1896	SAVADATTI	ಸತ್ತಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASANGOUD B PATIL	ATHENTICATION FAIL
1897	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PUSPHA CHILAKANDI	ATHENTICATION FAIL
1898	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAHADEV GANAGI	ATHENTICATION FAIL
1899	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MARUTI TALAWAR	ATHENTICATION FAIL
1900	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RAJASHEKAR HIREMATH	ATHENTICATION FAIL
1901	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAHALINGAPPA KHADAKABHAVI	ATHENTICATION FAIL
1902	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	HANAMANTAPPA HONGAL	ATHENTICATION FAIL
1903	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	vilasan soppadla	ATHENTICATION FAIL
1904	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RAMAPPA MAHALINGAPUR	ATHENTICATION FAIL
1905	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	LAXMAPPA KODLIWAD	ATHENTICATION FAIL
1906	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRANNA B GOUDAR	ATHENTICATION FAIL
1907	SAVADATTI	ಸೊಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAHANTESH KOUJALAGI	ATHENTICATION FAIL
1908	SAVADATTI	ಅಚಮಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಅಚಮಟ್ಟಿ	BASAPPA JAMAKANDI	ATHENTICATION FAIL
1909	SAVADATTI	ಉಗರಗೋಳ ರೇಣುಕಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PATIL VIJAY VISHWANATHGOUDA	ATHENTICATION FAIL
1910	SAVADATTI	ದಡೇರ ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Shivappa Lachchappa Karikatti	ATHENTICATION FAIL
1911	SAVADATTI	ದಡೇರ ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Mahadevappa Ningappa Belavanaki	ATHENTICATION FAIL
1912	SAVADATTI	ದಡೇರ ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MADIWALLAPPA MADIWALAR	ATHENTICATION FAIL
1913	SAVADATTI	ಶ್ರೀ ಕಲ್ಮೇಶ್ವರ ಪಿ.ಕೆ.ಪಿ.ಎಸ್ ಸವದತ್ತಿ	Ashok Kalasappa Kashappanavar	ATHENTICATION FAIL
1914	SAVADATTI	ಶ್ರೀ ಕಲ್ಮೇಶ್ವರ ಪಿ.ಕೆ.ಪಿ.ಎಸ್ ಸವದತ್ತಿ	Basappa Irappa Sogalada	ATHENTICATION FAIL
1915	SAVADATTI	ಶ್ರೀ ಶಂಕರಲಿಂಗೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ; ಸವದತ್ತಿ	Channabasappa Basappa Dundi	ATHENTICATION FAIL
1916	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	MALLAPPA DODAWAD	ATHENTICATION FAIL
1917	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	GADIGEPPA HAROBIDI	ATHENTICATION FAIL
1918	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	RAVIKUMAR DESHANUR	ATHENTICATION FAIL
1919	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	FAKKIRAVVA LAGAMAKKANAVAR	ATHENTICATION FAIL
1920	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	FAKKIRAPPA YARAGATTI	ATHENTICATION FAIL
1921	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	MURTOJISAB DOTYALA	ATHENTICATION FAIL
1922	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	GUDUSAB SAVADATTI	ATHENTICATION FAIL
1923	SAVADATTI	ಸವದತ್ತಿ ವಾರ್ಡನಂ 1 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Kallappa Meti	ATHENTICATION FAIL
1924	SAVADATTI	ಸವದತ್ತಿ ವಾರ್ಡನಂ 1 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Mallikarjun Danappa Belawadi	ATHENTICATION FAIL
1925	SAVADATTI	ಚಿಕ್ಕುಳ್ಳಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SANGEETA SHANKARGOUD HUDED	ATHENTICATION FAIL
1926	SAVADATTI	ಯಡಳ್ಳಿ ಗ್ರಾಮ ಸೇವಾ ಸಹಕಾರ ಸಂಘ ನಿ.	Madivalappa Gudadur	ATHENTICATION FAIL
1927	SAVADATTI	ರಾಮಾಪೂರಸೈಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Shivalingappa Lakkappa Sutagatti	ATHENTICATION FAIL
1928	SAVADATTI	ಸುತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	YALLAPPA GOURI	ATHENTICATION FAIL
1929	SAVADATTI	ಸುತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MALLIKARJUN SANGAPPA ANGADI	ATHENTICATION FAIL
1930	SAVADATTI	ಸುತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Mahantesh Shidlingappa Mutnal	ATHENTICATION FAIL
1931	SAVADATTI	ಕಗದಾಳ ಗ್ರಾಮಸೇವಾ ಸಹಕಾರಿ ಸಂಘ ಕರದಾಳ	VAJJUDIN FAKRUDIN MUJAWAR	ATHENTICATION FAIL
1932	SAVADATTI	ಕಗದಾಳ ಗ್ರಾಮಸೇವಾ ಸಹಕಾರಿ ಸಂಘ ಕರದಾಳ	LACHCHAVVA HANAMAPPA JOTENNAVAR	ATHENTICATION FAIL
1933	SAVADATTI	ಗ್ರಾಮದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ; ತೆಗ್ಗಿಹಾಳ	MARUTI NARI	ATHENTICATION FAIL
1934	SAVADATTI	[illegible] ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHIVANAND RAMAPPA ARIBENCHI	ATHENTICATION FAIL

1935	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	DAREPPA A GANIGER	ATHENTICATION FAIL
1936	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRAPPA A YARAGATTI	ATHENTICATION FAIL
1937	SAVADATTI	ಮಬನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SIDDAPPA V MALAKKANNAVAR	ATHENTICATION FAIL
1938	SAVADATTI	ಮಬನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHIVANAND PATAT	ATHENTICATION FAIL
1939	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	GIRIJAVVA RAYANAGOUDRA	ATHENTICATION FAIL
1940	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SIDDANAGOUDA RAYANAGOUDRA	ATHENTICATION FAIL
1941	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	VEERUPAKSHAYYA HIREMATH	ATHENTICATION FAIL
1942	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	TIRAKAYYA HIREMATH	ATHENTICATION FAIL
1943	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	GURAPPA KOUJAGERI	ATHENTICATION FAIL
1944	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	LACHCHAPPA PUJER	ATHENTICATION FAIL
1945	SAVADATTI	ಮಲಪ್ರಭಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	FAKKIRAVVA MADAR URF SHILAVANT	ATHENTICATION FAIL
1946	SAVADATTI	ಯಕ್ಕುಂಡಿ ಗ್ರಾಮ ಸೇವಾ ಸಹಕಾರ ಸಂಘ ನಿ.	Mahammadahayat Dilavarsab Dharawad	ATHENTICATION FAIL
1947	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Somappa M Bettad	FSD NOT UPLOADED
1948	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Ranjeet Shivanand Desai	FSD NOT UPLOADED
1949	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Vittal Doddabirappa Kolekar	FSD NOT UPLOADED
1950	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Vineet Mahantesh Kubasad	FSD NOT UPLOADED
1951	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Gangayya Shankarayya Choukimath Urf Viraktamath	FSD NOT UPLOADED
1952	SAVADATTI	ಮರಕುಂಬಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Ishwar Muragod	FSD NOT UPLOADED
1953	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	SIDDAPPA ULLIGERI	FSD NOT UPLOADED
1954	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	YOGESH HANASI	FSD NOT UPLOADED
1955	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	HAJARATABI GIDADANNAVAR	FSD NOT UPLOADED
1956	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	FAKKIRAPPA LAGAMAKKANAVAR	FSD NOT UPLOADED
1957	SAVADATTI	ಸುತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PARAMESHWAR VAKKUND	FSD NOT UPLOADED
1958	SAVADATTI	ಹಿರೇಉಳ್ಳಿಗೇರಿ ಗ್ರಾಮ ಸೇವಾ ಸಹಕಾರ ಸಂಘ ನಿ.	MAHADEVAPPA SANGOLLI	FSD NOT UPLOADED
1959	SAVADATTI	ಜಾಲಿಕಟ್ಟಿ ಜೀವಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	KALLAPPA BHIMAPPA GIRADDI	FSD NOT UPLOADED
1960	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Veerappa Dundappa Huddar	FSD NOT UPLOADED
1961	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Rajeshakar Gurusiddappa Shivapuji	FSD NOT UPLOADED
1962	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAPPA M LAKKANNAVAR	FSD NOT UPLOADED
1963	SAVADATTI	ಸಪ್ಪಡ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHANTAYYA HOSAMATH	FSD NOT UPLOADED
1964	SAVADATTI	ಹಂಚನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RAJESAB MODINASAB MULLA	FSD NOT UPLOADED
1965	SAVADATTI	ಶ್ರೀ ಮಡಿವಾಳೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Prakash Mugabasav	BI CDO & not approved
1966	SAVADATTI	ಹಾರುಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRANAGOUDA PATIL	BI CDO & not approved
1967	SAVADATTI	ಹಾರುಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Basayya viraktamath	BI CDO & not approved
1968	SAVADATTI	ರುದ್ರಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Demappa Pujeri	BI CDO & not approved
1969	SAVADATTI	ಮುರಗೋಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Bilappa Lamani	BI CDO & not approved
1970	SAVADATTI	ಕಲ್ಪತರು ಪಿ.ಕೆ.ಪಿ.ಎಸ್ ಮುರಗೋಡ	SURESH NAYAKAR	BI CDO & not approved
1971	SAVADATTI	ಶ್ರೀ ಬಸವೇಶ್ವರ ಪಿ.ಕೆ.ಪಿ.ಎಸ್ ಚಿಕೊಪ್ಪ ಕೆ.ಎಂ.	Ramesh Narasannavar	BI CDO & not approved
1972	SAVADATTI	ಚಚಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	sadeppa Dalawai	BI CDO & not approved
1973	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAYAPPA DOLLI	BI CDO & not approved
1974	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	VIJAYALAXMI FAKIRAPPA KUGANNAVAR	BI CDO & not approved
1975	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASANAGOUDA MALLESHAPPA GOUDATI	BI CDO & not approved
1976	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	NAGAVVA SOMAPPA PATTANASHETTI	BI CDO & not approved
1977	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	LAKKAPPA DASANNAVAR	BI CDO & not approved
1978	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MARUTI DASANNAVAR	BI CDO & not approved
1979	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	YALLAPPA MUTTAPPA CHIGADOLLI	BI CDO & not approved
1980	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	CHUNAPPA NINGAPPA SARVI	BI CDO & not approved
1981	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	DUNDAPPA BASAPPA ANGADI	BI CDO & not approved
1982	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BHIMAPPA YALLAPPA MARAGAL	BI CDO & not approved
1983	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RAMAPPA DASANNAVAR	BI CDO & not approved
1984	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SOMASHEKHAR VEERAPPA UNNI	BI CDO & not approved
1985	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	RAJSHEKHAR UNNI	BI CDO & not approved

1986	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	NAGAPPA TAMMANNA MANDANNAVAR	BI CDO & not approved
1987	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PARAVVA VIRUPAKSHAPPA KADEMANI	BI CDO & not approved
1988	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SANNABHIMAPPA GOUDRA	BI CDO & not approved
1989	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAPPA RUDRAPPANAUR	BI CDO & not approved
1990	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PAVADEPPA NEMAGOUDR	BI CDO & not approved
1991	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	KAMALAVVA GIRENNAVARA	BI CDO & not approved
1992	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	ANAND SIDDARAMAYYA HIREMATH	BI CDO & not approved
1993	SAVADATTI	ಹಿರೇಬೂದನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	LAKSHMAPPA TALAVAR	BI CDO & not approved
1994	SAVADATTI	ದಡೇರ ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHIVAPPA ANNIGERI	BI CDO & not approved
1995	SAVADATTI	ದಡೇರ ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAPPA NAGANOOR	BI CDO & not approved
1996	SAVADATTI	ಶ್ರೀ ಕಲ್ಮೇಶ್ವರ ಪಿ.ಕೆ.ಪಿ.ಎಸ್ ಸವದತ್ತಿ	Anusuyya Mahabaleshwar Purudagudi	BI CDO & not approved
1997	SAVADATTI	ಹಂಚಿನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	basavanneppa baliger	BI CDO & not approved
1998	SAVADATTI	ಹಂಚಿನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	CHANNAPPA BASAPPA NADAKATTIN	BI CDO & not approved
1999	SAVADATTI	ಹಿರೇಕುಂಬಿ ಎಲ್.ಎಸ್.ಎಮ್.ಪಿ ಕೊ-ಆಪ ಸೊಸಾಯಿಟಿ ನಿ.	Sigihalli Shankreppa	BI CDO & not approved
2000	SAVADATTI	ಹೂಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MAILARAPPA SIDDAPPA TALAWAR	BI CDO & not approved
2001	SAVADATTI	ಯಡಳ್ಳಿ ಗ್ರಾಮ ಸೇವಾ ಸಹಕಾರ ಸಂಘ ನಿ.	GURAPPA KOTABAGI	BI CDO & not approved
2002	SAVADATTI	ರಾಮಾಪೂರಸೈಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Santavva Yallappa Bhope	BI CDO & not approved
2003	SAVADATTI	ಸಂತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHIVALINGAPPA SOGALAD	BI CDO & not approved
2004	SAVADATTI	ಸಂತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Shivaraj vakkund	BI CDO & not approved
2005	SAVADATTI	ಸಂತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BHIMAPPA SHIVARAYAPPA PUJER	BI CDO & not approved
2006	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MALLIKARJUN K KULAMGERI	BI CDO & not approved
2007	SAVADATTI	ತಲ್ಲೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	ANDANEPPA A ANNIGERI	BI CDO & not approved
2008	SAVADATTI	ಯಕ್ಕುಂಡಿ ಗ್ರಾಮ ಸೇವಾ ಸಹಕಾರ ಸಂಘ ನಿ.	ABDULAJIJ JALALUDDINKHAN PATHAN	BI CDO & not approved
2009	SAVADATTI	ಅರಟಗಲ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	TIMMANNA DODDAFAKKIRAPPA TANGOJI	BI CDO & not approved
2010	SAVADATTI	ಕಗದಾಳ ಗ್ರಾಮಸೇವಾ ಸಹಕಾರಿ ಸಂಘ ಕರದಾಳ	VITTAL RAMANAGOUDA HOSAMANI	BI CDO & not approved
2011	SAVADATTI	ಮಾಡಮಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	YALLAPPA YALLAPPA DALAVAI	BI CDO & not approved
2012	SAVADATTI	ಸಪ್ಪದ.. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHANTAYYA HOSAMATH	BI CDO & not approved
2013	SAVADATTI	ಶ್ರೀ ಮಡಿವಾಳೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BASAVVA SIDDANAGOUDAR	LOGICAL OPERATION FAILED
2014	SAVADATTI	ಶ್ರೀ ಮಡಿವಾಳೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	PARVATEVVA SIDDANAGOUDAR	LOGICAL OPERATION FAILED
2015	SAVADATTI	ಶ್ರೀ ಮಡಿವಾಳೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	VEERANAGOUD SIDDANGOUDAR	LOGICAL OPERATION FAILED
2016	SAVADATTI	ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Mahadevappa Kamatagi	LOGICAL OPERATION FAILED
2017	SAVADATTI	ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Basavaraj Prabhunavar	LOGICAL OPERATION FAILED
2018	SAVADATTI	ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Tammanna Sanadi	LOGICAL OPERATION FAILED
2019	SAVADATTI	ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Irappa Madalabavi	LOGICAL OPERATION FAILED
2020	SAVADATTI	ಹಾರುಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	VEERBHADRAPPA DAMASUR	LOGICAL OPERATION FAILED
2021	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Irappa Gurusiddappa Chalakoppa	LOGICAL OPERATION FAILED
2022	SAVADATTI	ಹೊಸೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸವದತ್ತಿ	Mahesh Potadar	LOGICAL OPERATION FAILED
2023	SAVADATTI	ಹಿರೇಉಳ್ಳಿಗೇರಿ ಗ್ರಾಮ ಸೇವಾ ಸಹಕಾರ ಸಂಘ ನಿ.	GOVINDRO A KULAKRNI	LOGICAL OPERATION FAILED
2024	SAVADATTI	ತಗ್ಗಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	HUVAPPA SOMAPPA INCHAL	LOGICAL OPERATION FAILED
2025	SAVADATTI	ತಗ್ಗಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SHIVAJI TIPPANNA PUJER	LOGICAL OPERATION FAILED
2026	SAVADATTI	ಶಿರಸಂಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	MALLANAGOUDA CHULAKKI	LOGICAL OPERATION FAILED
2027	SAVADATTI	ಮಾಡಮಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	IRAPPA BALAPPA NANDI	LOGICAL OPERATION FAILED
2028	SAVADATTI	ಸಪ್ಪದ.. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	CHAMBANNA BIRADAR	LOGICAL OPERATION FAILED
2029	SAVADATTI	ಹಾರುಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	SOMAPPA LANGOTI	TLC rejected or not uploaded
2030	SAVADATTI	ಶ್ರೀ ಮಡಿವಾಳೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	KUTBUDI D KUDARI	TLC rejected or not uploaded
[illegible]	[illegible]	[illegible]	Lakkappa Yakkanavar[illegible]	TLC rejected or not

2032	SAVADATTI	ಸುತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	Laxman N Naykar	TLC rejected or not uploaded
2033	SAVADATTI	ಸುತಗಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.	BABU GONDI	TLC rejected or not uploaded

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 41 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05.12.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 69ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 69ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

Received 05/12/2020

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
(ಪೌರಾಡಳಿತ-2 ಮತ್ತು ಮಂಡಳಿ)
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	69
ಸದಸ್ಯರ ಹೆಸರು	:	ಶ್ರೀ ಡಿ.ಕೆ. ಶಿವಕುಮಾರ್
ಉತ್ತರಿಸಬೇಕಾದ ದಿನಾಂಕ	:	13-03-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪೌರಾಡಳಿತ ಇಲಾಖೆಗೆ ಸೇರಿದ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು ಇತರೆ ಧಾರ್ಮಿಕ ಸಂಸ್ಥೆಗಳ ಬಗ್ಗೆ ಮಾಹಿತಿಗಳನ್ನು ಒದಗಿಸುವುದು.	ರಾಜ್ಯದಲ್ಲಿ ಪೌರಾಡಳಿತ ಇಲಾಖೆಗೆ ಸೇರಿದ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು ಇತರೆ ಧಾರ್ಮಿಕ ಸಂಸ್ಥೆಗಳ ಮಾಹಿತಿಯನ್ನು ಅನುಬಂಧದ ಪಟ್ಟಿಯಲ್ಲಿನ ಕಾಲಂ -4 ತಿಳಿಸಲಾಗಿದೆ.
ಆ	ಈ ರೀತಿಯಾಗಿ ಅನಧಿಕೃತವಾಗಿ ಉಪಯೋಗಿಸಿಕೊಂಡಿರುವ ಬಗ್ಗೆ ಸರ್ಕಾರವು ತೆರವುಗೊಳಿಸಲು ಹಾಗೂ ಸಕ್ರಮಗೊಳಿಸುವ ಬಗ್ಗೆ ಕಾನೂನು ರೀತ್ಯಾ ಯಾವ ಕ್ರಮ ಕೈಗೊಳ್ಳಲಾಗಿದೆ? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು)	ಅನಧಿಕೃತವಾಗಿ ನಿರ್ಮಾಣಗೊಂಡಿರುವ ಧಾರ್ಮಿಕ ಸಂಸ್ಥೆಗಳನ್ನು ತೆರವುಗೊಳಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದ ಪಟ್ಟಿಯಲ್ಲಿನ ಕಾಲಂ -5 ತಿಳಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಿಸಲಾದ ದೇವಾಲಯ, ಮಸೀದಿ, ಕ್ರೈಸ್ತ ದೇವಾಲಯ, ಗುರುದ್ವಾರ ಮುಂತಾದ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಪ್ರಕರಣ ಸಂಖ್ಯೆ:8519/2006 ದಿನಾಂಕ:07/12/2009 ರಂದು ನೀಡಿರುವ ಮಧ್ಯಂತರ ಆದೇಶದಂತೆ ಕ್ರಮವಹಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ:ಹೆಚ್‌ಡಿ 504 ಎಸ್‌ಎಸ್‌ಟಿ 2008, ದಿನಾಂಕ:19.02.2011ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಸಮಿತಿಯನ್ನು ರಚಿಸಿ ದೇವಾಲಯ, ಮಸೀದಿ, ಕ್ರೈಸ್ತ ದೇವಾಲಯ, ಗುರುದ್ವಾರ ಮುಂತಾದ ಅನಧಿಕೃತ ಕಟ್ಟಡಗಳನ್ನು ನೆಲಸಮ

		ಮಾಡುವುದು, ಸ್ಥಳಾಂತರಿಸುವಿಕೆ, ಅಧಿಕೃತಗೊಳಿಸುವಿಕೆಯ ಬಗ್ಗೆ ಮಾರ್ಗದರ್ಶನ ನೀಡಲಾಗಿರುತ್ತದೆ. ಮುಂದುವರೆದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಪ್ರಕರಣ ಸಂಖ್ಯೆ:8519/2006, ದಿನಾಂಕ: 29/09/2009 ರಂದು ನೀಡಿರುವ ಆದೇಶದಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ನಿಯಮಾನುಸಾರ ತೆರವುಗೊಳಿಸಲು ಕ್ರಮಗೈಗೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಎಸ್‌ಡಿ 257 ಇಎಸ್‌ಟಿ 2019, ದಿನಾಂಕ: 23.12.2019ರಲ್ಲಿ ಗೃಹ ಇಲಾಖೆಯಿಂದ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:8519/2006 ದಿನಾಂಕ: 29/09/2009 ಮತ್ತು 07.12.2009ರ ನಿರ್ದೇಶನದಂತೆ ಸರ್ಕಾರಿ ಜಮೀನಿನಲ್ಲಿ ನಿರ್ಮಾಣಗೊಂಡ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆವುಗೊಳಿಸಲಾಗುತ್ತಿದೆ. ಮುಂದುವರೆದು, ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ಸ್ವಯಂಪ್ರೇರಿತ ರಿಟ್ ಅರ್ಜಿ ಸಂಖ್ಯೆ:27551/2019ರಲ್ಲಿನ ನಿರ್ದೇಶನದಂತೆ ಸರ್ಕಾರವು ಇಂತಹ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ದಿನಾಂಕ: 31.03.2020ರೊಳಗೆ ಗುರುತಿಸಿ, ಪಟ್ಟಿ ಮಾಡಲು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಸರ್ವೆ ಕೆಲಸ ಪ್ರಗತಿಯಲ್ಲಿ ಇದೆ. ಈ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳಿಂದ ಪಡೆದಿರುವ ಇತ್ತೀಚಿನ ಹಂತದ ಮಾಹಿತಿಯಂತೆ ರಾಜ್ಯದಲ್ಲಿ ಇಲ್ಲಿಯವರೆಗೆ ಗುರುತಿಸಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳ ಸಂಖ್ಯೆ:6451 ಇದರಲ್ಲಿ 3079 ಕಟ್ಟಡಗಳನ್ನು ಇಲ್ಲಿಯವರೆಗೆ ತೆರವುಗೊಳಿಸಿದೆ.

ಸಂಖ್ಯೆ: ನಅಇ 41 ಜಿಇಎಲ್ 2020

(ಡಾ|| ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 304 ಎಸ್.ಎಫ್.ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 21-11-2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1493ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1493ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

K. Nagesh 21/11/2020

(ನಾಗೇಶ್ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿರವರ ಪರವಾಗಿ
ನಗರಾಭಿವೃದ್ಧಿ ಇಲಾಖೆ.

2
21/11

Received
07/12/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1493
ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸಬೇಕಾದ ದಿನಾಂಕ	:	25-09-2020 (ಕಾಲಾವಕಾಶ ಕೋರಲಾಗಿತ್ತು)
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿ ಯಾವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ: (ವಿವರ ನೀಡುವುದು)	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2019-20 ನೇ ಸಾಲಿನ ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು (ಅನುಬಂಧ-01) ರಲ್ಲಿ ಲಗತ್ತಿಸಿದೆ.
ಆ.	ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ನಲ್ಮ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)	ಡೇ-ನಲ್ಮ ಅಭಿಯಾನದಡಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಎಸ್.ಸಿ.ಪಿ / ಟಿ.ಎಸ್.ಪಿ ಗೆ ಸಂಬಂದಿಸಿದಂತೆ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ ಹಾಗೂ ಮಾರ್ಗಸೂಚಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವು ಸಹ ಇರುವುದಿಲ್ಲ.

ಕಡತ ಸಂಖ್ಯೆ:ನಅಇ 304 ಎಸ್.ಎಫ್.ಸಿ 2020

(ಬಿ.ಎ ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 405 ಸಿಎಲ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ ಡಾ॥ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1039 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ ಡಾ॥ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1039 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha H.C

(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು	:	ಡಾ॥ ಯತೀಂದ್ರ ಸಿದ್ದರಾಮಯ್ಯ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1039
ಉತ್ತರಿಸಬೇಕಾದ ದಿನಾಂಕ	:	11.12.2020

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯ ಸಹಕಾರಿ ಬ್ಯಾಂಕುಗಳಿಂದ 2018-19 ಮತ್ತು 2019-20ನೇ ಸಾಲಿನಲ್ಲಿ ಎಷ್ಟು ಜನ ರೈತರಿಗೆ ಸಾಲವನ್ನು ಮಂಜೂರು ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು);	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ 2018-19 ಸಾಲಿನಲ್ಲಿ 19,98,216 ರೈತರಿಗೆ 11116.74 ಕೋಟಿ ಮತ್ತು 2019-20 ನೇ 22,57,898 ರೈತರಿಗೆ 13,577.86 ಕೋಟಿ ಕೃಷಿ ಸಾಲವನ್ನು ಮಂಜೂರು ಮಾಡಲಾಗಿದ್ದು, ಜಿಲ್ಲಾವಾರು/ಬ್ಯಾಂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಕೆಲವು ಸಹಕಾರಿ ಬ್ಯಾಂಕುಗಳಲ್ಲಿ ಸರ್ಕಾರದ ನಿರ್ದೇಶನವಿದ್ದರೂ ಸಹ ಕೃಷಿ ಸಾಲವನ್ನು ನೀಡದೇ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಬ್ಯಾಂಕುಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ (ಮಾಹಿತಿ ನೀಡುವುದು)	ಹೌದು. ನಬಾರ್ಡ್‌ನಿಂದ ಪುನರ್ಧನ ಪಡೆಯಲು ಅರ್ಹವಿಲ್ಲದೇ ಇರುವ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಕೆಲವು ಆರ್ಥಿಕವಾಗಿ ಸದೃಢವಾಗಿರದೇ ಇರುವ ಬ್ಯಾಂಕುಗಳು ಸರ್ಕಾರದ ಆದೇಶದ ಪ್ರಕಾರ ಜಿಲ್ಲೆಯಲ್ಲಿರುವ ಎಲ್ಲಾ ಅರ್ಹ ರೈತರಿಗೆ ಸಾಲ ನೀಡಲು ಸಾಧ್ಯವಾಗದೇ ಇರುವ ವಿಷಯವು ಗಮನಕ್ಕೆ ಬಂದಿರುತ್ತದೆ. ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಪುನಃಶ್ಚೇತನಗೊಳಿಸಲು ಕ್ರಿಯಾ ಯೋಜನೆಯನ್ನು ತಯಾರಿಸಲು ನಬಾರ್ಡ್ ಕನ್ಸಲ್‌ಟೆನ್ಸಿ ಸಂಸ್ಥೆಗೆ ವಹಿಸಲಾಗಿದೆ. ಉಳಿದ ಜಿಲ್ಲಾ ಬ್ಯಾಂಕುಗಳಿಗೆ ಸರ್ಕಾರದ ಆದೇಶದನ್ವಯ ಕ್ರಮ ಕೈಗೊಳ್ಳಲು ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ. ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಿ ರೈತರಿಗೆ ಸಕಾಲದಲ್ಲಿ ಸುಲಭವಾಗಿ ಸಾಲ ದೊರೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಜಿಲ್ಲಾ ಸಹಕಾರ ಬ್ಯಾಂಕುಗಳು 2020-21 ನೇ ಸಾಲಿಗೆ 24.80 ಲಕ್ಷ ರೈತರಿಗೆ ರೂ.15300 ಕೋಟಿಗಳ ಕೃಷಿ ಸಾಲ ನೀಡಲು ಗುರಿ ನಿಗದಿಪಡಿಸಿದ್ದು, ಈ ಗುರಿಗೆ ತಕ್ಕಂತೆ ಜಿಲ್ಲೆಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಮತ್ತು ಹೊಸ ಸದಸ್ಯರಿಗೆ ಪ್ರತಿ ಮಾಹೆಯಾನ ಗುರಿ ನಿಗದಿಪಡಿಸಿ ಸಾಲ ವಿತರಿಸಲು ಸೂಚನೆ ನೀಡಲಾಗಿದೆ.

		2. ಸಹಕಾರ ಸಂಘಗಳು ರೈತರಿಗೆ ಸುಲಭವಾಗಿ ಅರ್ಜಿ ದೊರೆಯುವಂತೆ ಕ್ರಮ ವಹಿಸಲು ಮತ್ತು ಅರ್ಜಿ ವಿಲೇವಾರಿ ಮಾಡಿದ ರಿಜಿಸ್ಟರ್ ಅನ್ನು ಸಂಘದಲ್ಲಿ ನಿರ್ವಹಿಸಲು ಸೂಚನೆ ನೀಡಲಾಗಿದೆ. ಮಾದರಿ ಅರ್ಜಿ ನಮೂನೆಗಳನ್ನು ಸಹಕಾರ ಇಲಾಖೆಯ ವೆಬ್‌ಸೈಟ್‌ನಲ್ಲಿ ಸುತ್ತೋಲೆಯೊಂದಿಗೆ ನೀಡಲಾಗಿದೆ. 3. ಕಿಸಾನ್ ಸನ್ಮಾನ್ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿದ ಎಲ್ಲಾ ರೈತರ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನೀಡಿ, ರೈತರನ್ನು ಸಂಪರ್ಕಿಸಿ ಸಾಲ ವಿತರಿಸಲು ಸೂಚಿಸಲಾಗಿದೆ. ಬೆಳೆ ಸಾಲ, ಪಶುಸಂಗೋಪನೆಗೆ ದುಡಿಯುವ ಬಂಡವಾಳ ಅವಶ್ಯವಿರುವ ಸಾಲ ನೀಡುವ ಪ್ರಗತಿಯನ್ನು ಪ್ರತಿ ದಿನ ನಬಾರ್ಡ್ ವೆಬ್‌ಸೈಟ್‌ನಲ್ಲಿ ಅಳವಡಿಸಿ ಈ ಕುರಿತು ಪ್ರತೀ ದಿನದ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಸಿಒ 405 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ -

ಡಿಸಿಸಿ ಬ್ಯಾಂಕುಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ವಿತರಿಸಿದ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲದ ವಿವರ (ರೂ.ಲಕ್ಷಗಳಲ್ಲಿ)

SI	Name of the DCC bank/District	2018-19						2019-20					
		Short term Agri loan		Medium term agri loan		Total		Short term Agri loan		Medium term agri loan		Total	
		NO	Amount	NO	Amount	NO	Amount	NO	Amount	NO	Amount	NO	Amount
1	Bagalkot	236790	104532	778	5282.89	237568	109815.22	250343	113341	884	5740.78	251227	119081.49
2	Bangalore	52166	24331	38	281.72	52204	24612.68	88301	45299.4	164	162.2	88465	45461.60
3	Belgaum	347356	139705	358	1818.44	347714	141523.10	380223	189370	313	1680.51	380536	191050.21
4	Bellary	48763	35962.3	481	1872.37	49244	37834.64	69993	57600.4	475	2378.3	70468	59978.68
5	Bidar	151818	78072.8	774	1188.41	152592	79261.18	139703	72421.8	679	997.79	140382	73419.60
6	Bijapur	164515	82224	1015	3484.28	165530	85708.26	172566	98384.7	1197	3498.44	173763	101883.09
7	Chikmagalur	33218	41133.6	217	1364.27	33435	42497.82	35456	45084.7	354	1803.91	35810	46888.58
8	Chitradurga	26640	12132.1	646	3766.05	27286	15898.16	41508	20334.6	812	4738.79	42320	25073.40
9	Davangere	57201	18124.3	79	633.57	57280	18757.84	88326	32275.7	175	1039.75	88501	33315.44
10	Dharwad	61719	23415.3	167	912.21	61886	24327.55	78306	29674.6	353	1724.48	78659	31399.09
11	Gulburga	87115	24021.9	0	0	87115	24021.87	30123	7187.4	0	0	30123	7187.40
12	Hassan	116913	49159.2	15	606.7	116928	49765.94	127775	63945.2	111	1679.81	127886	65624.99
13	Kanara	88914	68394.8	5625	7741.58	94539	76136.33	79243	64746.5	3908	6280.79	83151	71027.29
14	Kodagu	35027	51313.7	873	2740.5	35900	54054.18	35479	54154.4	941	3145.22	36420	57299.62
15	Kolar	21516	26655.3	900	1434.94	22416	28090.25	28535	34845.5	792	3010.53	29327	37856.02
16	Mandya	69575	34545.9	713	985.17	70288	35531.03	126092	66593.3	908	1036	127000	67629.31
17	Mysore	45829	39363.9	1446	4931.01	47275	44294.91	58306	50238.7	877	1525.41	59183	51764.07
18	Raichur	82611	30283.1	77	499.8	82688	30782.90	113004	45256.3	66	429.44	113070	45685.69
19	S.Canara	109346	116271	10987	11167.9	120333	127438.44	120435	123758	13978	15182	134413	138939.80
20	Shimoga	98576	46310.9	98	882.57	98674	47193.43	91154	52576.6	117	1024.02	91271	53600.64
21	Tumkur	37086	12645.8	235	1483.46	37321	14129.24	75631	31628.8	292	1992.06	75923	33620.82
	Total	**1972694**	**1058597**	**25522**	**53077.8**	1998216	1111674.97	**2230502**	**1298717**	**27396**	**59070.3**	**2257898**	**1357786.83**

E

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 142 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.12.2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1094ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1094ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಲಕ್ಷ್ಮೀಕಾಂತ ಟಿ.

(ಲಕ್ಷ್ಮೀಕಾಂತ ಟಿ.)
ಶಾಖಾಧಿಕಾರಿ,
ಪೌರಾಡಳಿತ–2
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1094
ಸದಸ್ಯರ ಹೆಸರು :	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ ವಿ.ಸ.ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ :	11-12-2020
ಉತ್ತರಿಸುವವರು :	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಸರ್ಕಾರದ ಆದೇಶದಂತೆ ಅಧಿಕೃತ ಬಡಾವಣೆಯಲ್ಲಿ ಖಾತಾ ಉತಾರ್‌ಗಳ ತಡೆಹಿಡಿದಿದ್ದು, ಮತ್ತೆ ಖಾತಾ ಉತಾರ್‌ಗಳನ್ನು ಹಂಚಿಕೆಯನ್ನು ಯಾವಾಗ ಪ್ರಾರಂಭಿಸಲಾಗುವುದು;	ಅಧಿಕೃತ ಬಡಾವಣೆಯಲ್ಲಿ ಖಾತಾ ಉತಾರಗಳನ್ನು ನಿಯಮಾನುಸಾರ ಪರಿಶೀಲಿಸಿ ನೀಡಲಾಗುತ್ತಿದೆ. ಅಧಿಕೃತ ಖಾತಾ ಉತಾರಗಳನ್ನು ನೀಡದಿರಲು ಸರ್ಕಾರದಿಂದ ಯಾವುದೇ ಆದೇಶವಾಗಿರುವುದಿಲ್ಲ.
(ಆ)	ಜಮಖಂಡಿ ನಗರದಲ್ಲಿ ಖಾತಾ ಉತಾರ್‌ಗಳನ್ನು ನೀಡುವುದನ್ನು ತಡೆಹಿಸಿದ ಕಾರಣ ಮನೆಗಳನ್ನು ಕಟ್ಟಿಕೊಳ್ಳಲು ಹಾಗೂ ಜನರಿಗೆ ಬ್ಯಾಂಕ್‌ನಿಂದ ಸಾಲವನ್ನು ಪಡೆಯಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಸದರಿ ಆದೇಶವನ್ನು ರದ್ದುಪಡಿಸಿ ಖಾತಾ ಉತಾರ್‌ಗಳನ್ನು ನೀಡಲು ಯಾವಾಗ ಕ್ರಮಕೈಗೊಳ್ಳಲಾಗುವುದು? (ವಿವರ ನೀಡುವುದು)	ಅಧಿಕೃತ ಬಡಾವಣೆಗಳಲ್ಲಿ ಬರುವ ನಿವೇಶನಗಳಿಗೆ ಖಾತಾ ಉತಾರಗಳನ್ನು ನಿಯಮಾನುಸಾರ ಪರಿಶೀಲಿಸಿ ನೀಡಲಾಗುತ್ತಿದೆ ಹಾಗೂ ಕಟ್ಟಡ ಪರವಾನಿಗೆಯನ್ನು ಸಹಾ ನೀಡಲಾಗುತ್ತಿದೆ. ಅಧಿಕೃತ ಬಡಾವಣೆಗಳಲ್ಲಿನ ನಿವೇಶನಗಳಿಗೆ ಖಾತಾ ನೀಡದಿರಲು ಸರ್ಕಾರದಿಂದ ಆದೇಶ ಹೊರಡಿಸಿರುವುದಿಲ್ಲ. ಆದ್ದರಿಂದ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ನಅಇ 142 ಜಿಇಎಲ್ 2020(ಇ)

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 83 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1073ಕ್ಕೆ ಉತ್ತರಿಸುವ ಕುರಿತು

~*********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1073ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

AVijayaKumar
14.12.2020

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 89 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 15/12/2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1097ಕ್ಕೆ ಉತ್ತರಿಸುವ ಕುರಿತು

~**********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ) ಇವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1097ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
A.Vijayakumar
15.12.2020
(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

Received
16/12/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1097
ಸದಸ್ಯರ ಹೆಸರು	:	ಶ್ರೀ ಅಜಯ್ ಧರ್ಮ ಸಿಂಗ್ ಡಾ|| (ಜೇವರ್ಗಿ)
ಉತ್ತರಿಸುವ ದಿನಾಂಕ	:	11/12/2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	2019ರ ನವೆಂಬರ್ ತಿಂಗಳಲ್ಲಿ ಕಲಬುರಗಿ ಉಚ್ಚ ನ್ಯಾಯಾಲಯವು ಕಲಬುರಗಿ ಮಹಾನಗರ ಪಾಲಿಕೆಯ ಚುನಾವಣೆ ಪ್ರಕ್ರಿಯೆ ಸಂಬಂಧ ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಶೀಘ್ರದಲ್ಲಿ ಚುನಾವಣೆ ನಡೆಸುವಂತೆ ಅಧಿಸೂಚನೆ ಹೊರಡಿಸಲು ಸರ್ಕಾರಕ್ಕೆ ಸೂಚಿಸಿರುವುದು ಸರ್ಕಾರದ ಗಮನದಲ್ಲಿದೆಯೇ;	ಬಂದಿದೆ
ಆ)	ಹಾಗಿದ್ದಲ್ಲಿ, ಸದರಿ ಮಹಾನಗರ ಪಾಲಿಕೆಗೆ ಚುನಾವಣೆ ನಡೆಸುವ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು)	ಕಲಬುರ್ಗಿ ಮಹಾನಗರ ಪಾಲಿಕೆಗೆ ಹೊಸದಾಗಿ 2011ರ ಜನಗಣತಿಯನ್ವಯ ಕ್ಷೇತ್ರ ಪುನರ್ ವಿಂಗಡಣೆ ಕೈಗೊಂಡು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ, ಕಲಬುರ್ಗಿ ಜಿಲ್ಲೆರವರಿಗೆ ದಿನಾಂಕ 12/03/2020ರಂದು ತಿಳಿಸಲಾಗಿದೆ. ಜಿಲ್ಲಾಧಿಕಾರಿ, ಕಲಬುರ್ಗಿ ರವರಿಂದ ಪ್ರಸ್ತಾವನೆ ಬಂದ ಕೂಡಲೇ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರಡಿ ಪರಿಶೀಲಿಸಿ ಕ್ಷೇತ್ರ ಪುನರ್ ವಿಂಗಡಣೆಯನ್ನು ಅಂತಿಮಗೊಳಿಸಿ, ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಲಾಗುವುದು.
ಇ)	ಅಭಿವೃದ್ಧಿ ದೃಷ್ಟಿಯಿಂದ ಯಾವ ಕಾಲಮಿತಿಯಲ್ಲಿ ಪಾಲಿಕೆಯ ಚುನಾವಣೆ ಪ್ರಕ್ರಿಯೆಯನ್ನು ನಡೆಸಲಾಗುವುದು: (ಮಾಹಿತಿ ನೀಡುವುದು)	ಕಲಬುರ್ಗಿ ಮಹಾನಗರ ಪಾಲಿಕೆಯ ವಾರ್ಡ್‌ಗಳಿಗೆ 2011ರ ಜನಗಣತಿಯನ್ವಯ ಕ್ಷೇತ್ರ ಪುನರ್ ವಿಂಗಡಣೆ ಕೈಗೊಂಡು ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿ ತ್ವರಿತವಾಗಿ ಚುನಾವಣೆಯನ್ನು ನಡೆಸಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ನಅಇ/89/ಎಲ್ಎಕ್ಯೂ/2020

(ಬಿ. ಎ. ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1073
ಸದಸ್ಯರ ಹೆಸರು : ಶ್ರೀ. ಮಂಜುನಾಥ.ಎಚ್.ಪಿ.
ಉತ್ತರಿಸುವ ದಿನಾಂಕ : 11/12/2020
ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ (ಕಲೆ, ಸಾಹಿತ್ಯ, ವೈಜ್ಞಾನಿಕ ಅವಿಷ್ಕಾರ, ಇತರೆ ಕೋಟಾದಡಿಯಲ್ಲಿ) ಗಣನೀಯ ಸಾಧನೆ ಮಾಡಿ ರಾಜ್ಯಸಭೆಗೆ ಅಥವಾ ವಿಧಾನ ಪರಿಷತ್ತಿಗೆ ಕೇಂದ್ರ / ರಾಜ್ಯ ಸರ್ಕಾರದಿಂದ ನಿರ್ದೇಶನಗೊಂಡಂತಹ, ಸದಸ್ಯರನ್ನು ಮತದಾರರಿಂದ ಆಯ್ಕೆಗೊಂಡ ಪ್ರತಿನಿಧಿಗಳೆಂದು ಪರಿಗಣಿಸಲಾಗುವುದೇ;	ಕರ್ನಾಟಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ (ಕಲೆ, ಸಾಹಿತ್ಯ, ವೈಜ್ಞಾನಿಕ ಅವಿಷ್ಕಾರ, ಇತರೆ ಕೋಟಾದಡಿಯಲ್ಲಿ) ಗಣನೀಯ ಸಾಧನೆ ಮಾಡಿ ರಾಜ್ಯಸಭೆಗೆ ಅಥವಾ ವಿಧಾನ ಪರಿಷತ್ತಿಗೆ ಕೇಂದ್ರ / ರಾಜ್ಯ ಸರ್ಕಾರದಿಂದ ನಿರ್ದೇಶನಗೊಂಡಂತಹ, ಸದಸ್ಯರನ್ನು ಮತದಾರರಿಂದ ಆಯ್ಕೆಗೊಂಡ ಪ್ರತಿನಿಧಿಗಳೆಂದು ಪರಿಗಣಿಸಲಾಗುವುದಿಲ್ಲ.
ಆ	ಹಾಗಿದ್ದಲ್ಲಿ, ಅಂತಹವರು ಯಾವ ಚುನಾವಣಾ ಕ್ಷೇತ್ರದಿಂದ ಆಯ್ಕೆಗೊಂಡವರೆಂದು ಪರಿಗಣಿಸಲಾಗುವುದು (ವಿವರ ನೀಡುವುದು);	ಪ್ರಶ್ನೆ ಉದ್ಭವಿಸುವುದಿಲ್ಲ.
ಇ	ಸರ್ಕಾರದಿಂದ ವಿಧಾನ ಪರಿಷತ್ / ರಾಜ್ಯ ಸಭಾ ಸದಸ್ಯರಾಗಿ ನಾಮ ನಿರ್ದೇಶನಗೊಂಡಂತಹ ಸದಸ್ಯರು ಕರ್ನಾಟಕ ಪುರಸಭೆ ಕಾಯ್ದೆ 1964 ಪ್ರಕರಣ 11(1)(ಡಿ) ಮತ್ತು ಕರ್ನಾಟಕ ಪುರಸಭೆ ಕಾಯ್ದೆ 1976 ಪ್ರಕರಣ 7(1)(ಡಿ) ಪ್ರಕಾರ ನಗರ ಸ್ಥಳೀಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ಮತದಾನದ ಹಕ್ಕಿರುವುದೇ (ವಿವರ ನೀಡುವುದು);	ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 11(1)(ಡಿ) ಪ್ರಕಾರ ಪೌರಸಭಾ ಪ್ರದೇಶದೊಳಗೆ ಮತದಾರರಾಗಿ ನೊಂದಾಯಿತರಾದ ರಾಜ್ಯಸಭೆಗಳ ಸದಸ್ಯರು ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಮತದಾನದ ಹಕ್ಕಿರುತ್ತದೆ.
ಈ	ಹಾಗಿದ್ದಲ್ಲಿ, ಸರ್ಕಾರದಿಂದಲೇ ನಾಮ ನಿರ್ದೇಶನಗೊಳ್ಳುವಂತಹ ಪುರಸಭಾ/ ನಗರಸಭಾ ಸದಸ್ಯರಿಗೆ ಮತದಾನದ ಹಕ್ಕು ಇಲ್ಲದಿರಲು ಕಾರಣವೇನು (ಸಂಪೂರ್ಣ ವಿವರ ನೀಡುವುದು)?	ಕರ್ನಾಟಕ ಪುರಸಭೆ ಕಾಯ್ದೆ 1964 ಕಲಂ 11(1)ರಲ್ಲಿ ಮತದಾನದ ಹಕ್ಕಿನ ಬಗ್ಗೆ ವಿವರಿಸಲಾಗಿದೆ. ಅದರ ಉದ್ಧೃತ ಭಾಗ ಈ ಕೆಳಕಂಡಂತಿದೆ: 11(1): ಮುನಿಸಿಪಲ್ ಕೌನ್ಸಿಲ್‌ನಲ್ಲಿ– ಬಿ. ಪೌರಸಭಾ ಪ್ರದೇಶದ ನಿವಾಸಿಗಳ ಪೈಕಿ ಸರ್ಕಾರದಿಂದ ನಾಮನಿರ್ದೇಶಿತರಾದ ಮತ್ತು,– (i) ಪೌರಾಡಳಿತ ಅಥವಾ ಆರೋಗ್ಯ, ಪಟ್ಟಣ, ಯೋಜನೆ ಅಥವಾ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ಜ್ಞಾನ ಮತ್ತು ಅನುಭವ ಇರುವ; ಅಥವಾ (ii) ಸಮಾಜ ಸೇವಾಕರ್ತರಿಂದ ಐದಕ್ಕಿಂತ ಹೆಚ್ಚಲ್ಲದ ವ್ಯಕ್ತಿಗಳನ್ನು;

		ಸಿ. ಯಾರ ಚುನಾವಣಾ ಕ್ಷೇತ್ರಗಳು ಪೌರಸಭಾ ಪ್ರದೇಶದೊಳಗೆ ಇದೆಯೋ ಆ ಪೌರಸಭಾ ಪ್ರದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುವ ಲೋಕಸಭಾ ಸದಸ್ಯರು ಮತ್ತು ರಾಜ್ಯ ವಿಧಾನ ಸಭಾ ಸದಸ್ಯರನ್ನು; ಡಿ. ಪೌರಸಭಾ ಪ್ರದೇಶದೊಳಗೆ ಮತದಾರರಾಗಿ ನೋಂದಾಯಿತರಾದ ರಾಜ್ಯಸಭೆಗಳ ಸದಸ್ಯರು ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು– ಹೊಂದಿರತಕ್ಕದ್ದು. ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳಿಗೆ ಮುನಿಸಿಪಲ್ ಕೌನ್ಸಿಲ್ಲಿನ ಸಭೆಗಳಲ್ಲಿ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಆದ್ದರಿಂದ, ಸರ್ಕಾರದಿಂದಲೇ ನಾಮ ನಿರ್ದೇಶನಗೊಳ್ಳುವಂತಹ ಪುರಸಭಾ/ನಗರಸಭಾ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

ಸಂಖ್ಯೆ:ನಅಇ 83 ಎಲ್‌ಎಕ್ಯೂ 2020.

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 93 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.12.2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1104ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1104ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
ಲಕ್ಷ್ಮೀಕಾಂತ ಟಿ.
(ಲಕ್ಷ್ಮೀಕಾಂತ ಟಿ.)
ಶಾಖಾಧಿಕಾರಿ,
ಪೌರಾಡಳಿತ-2
ನಗರಾಭಿವೃದ್ಧಿ ಇಲಾಖೆ.

Received
16/12/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1104
ಸದಸ್ಯರ ಹೆಸರು :	ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)
ಉತ್ತರಿಸಬೇಕಾದ ದಿನಾಂಕ :	11-12-2020
ಉತ್ತರಿಸುವವರು :	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿರುವ ಅಧಿಕೃತ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ಇ-ಸ್ವತ್ತು, ಖಾತೆ ಬದಲಾವಣೆ, ಕಂದಾಯ ನಕ್ಷೆ ಮಂಜೂರಾತಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿರುವ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿದ್ದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಘೋಷಣೆಯ ಪೂರ್ವದಲ್ಲಿ ಭೂ ಪರಿವರ್ತನೆಗೊಂಡ ಜಮೀನುಗಳಿಗೆ ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಅನುಮೋದನೆ ಪಡೆದಿರುವ ವಿನ್ಯಾಸಗಳಲ್ಲಿನ ನಿವೇಶನಗಳಿಗೆ ಕಟ್ಟಡ ಪರವಾನಿಗೆ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಯಾವುದೇ ನಿರ್ಬಂಧವಿರುವುದಿಲ್ಲ. ಆದರೆ, ದಿನಾಂಕ 08.12.1976ರಲ್ಲಿ ಕರ್ನಾಟಕ ಪುರ ಸಭೆಗಳ ಕಾಯ್ದೆ 1964ರಲ್ಲಿ ಕಲಂ 387 ಸೇಪರ್ಡೆಗೊಳಿಸಲಾಗಿದ್ದು, ಅದರಂತೆ ನಗರ ಸ್ಥಳೀಯ ಸಂಸ್ಥೆಗಳು ಯೋಜನಾ ಪ್ರಾಧಿಕಾರಗಳನ್ನು ರಚಿಸದೇ ಇರುವ ಪ್ರದೇಶಗಳಲ್ಲಿ ನಗರ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ಸಮೀಪದ ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚಿಸಬೇಕಿರುತ್ತದೆ. ದಿನಾಂಕ 08.12.1976ರ ನಂತರ ವಿನ್ಯಾಸ ನಕ್ಷೆ ಅನುಮೋದನೆ ಪಡೆಯದೇ ಅನಧಿಕೃತವಾಗಿ ವಿಭಜಿಸಿ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ಪರವಾನಿಗೆ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಅವಕಾಶವಿರುವುದಿಲ್ಲ. ಅಲ್ಲದೇ, ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 7 ಟಿಟಿಪಿ 2017, ದಿನಾಂಕ:22-03-2017 ರಲ್ಲಿ ಅನಧಿಕೃತ ಬೆಳವಣಿಗೆಗಳನ್ನು ತಡೆಹಿಡಿಯುವ ದೃಷ್ಟಿಯಿಂದ ನಗರ ಸ್ಥಳೀಯ ಸಂಸ್ಥೆಗಳು ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆಯನ್ನು ನೀಡಬಾರದೆಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ. ಒಂದುವೇಳೆ ಅದರಂತೆ ಕ್ರಮ ಕೈಗೊಳ್ಳದೇ

Scanned with CamScanner

		ಖಾತೆಗಳನ್ನು ವಿತರಿಸದ್ದಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿ ಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಸೂಚನೆ ನೀಡಲಾಗಿದೆ. ಇಂತಹ ಸ್ವತ್ತುಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನೀಡಿರುವ ಖಾತಾ / ಇ-ಖಾತಾ ಕುರಿತಂತೆ ಪರ್ಯಾಲೋಚಿಸಲು ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿರುತ್ತದೆ.
ಆ)	ರಾಜ್ಯದಲ್ಲಿ ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳಿಂದ ಸರ್ಕಾರಕ್ಕೆ ಸಂದಾಯವಾಗಬೇಕಾಗಿರುವ ಕೋಟ್ಯಾಂತರ ರೂ.ಗಳ ಕಂದಾಯ ಮತ್ತು ಇತರೆ ಅಭಿವೃದ್ಧಿ ಶುಲ್ಕಗಳ ರೂಪದಲ್ಲಿ ಬರುವ ಆದಾಯ ಕುಂಠಿತ ವಾಗುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೆ;	ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 556 ಮೈಅಪ್ರಾ 2013 (1), ದಿನಾಂಕ:28-05-2014ರಲ್ಲಿ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ (ಅನಧಿಕೃತ ಅಭಿವೃದ್ಧಿ ಅಥವಾ ನಿರ್ಮಾಣಗಳನ್ನು ಸಕ್ರಮಗೊಳಿಸುವಿಕೆ) ನಿಯಮಗಳು 2014ನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:13-01-2017ರ ಆದೇಶದಲ್ಲಿ, ದಿನಾಂಕ:28-05-2014 ರಂದು ಸರ್ಕಾರವು ಹೊರಡಿಸಿರುವ ಅಕ್ರಮ-ಸಕ್ರಮ ನಿಯಮಗಳಡಿ ಸ್ವೀಕರಿಸಲಾಗುವ ಅರ್ಜಿಗಳನ್ನು ಪರಿಶೀಲಿಸದಂತೆ, ಈ ಹಿಂದೆ ಕರ್ನಾಟಕ ಉಚ್ಚನ್ಯಾಯಾಲಯವು ದಿನಾಂಕ:19-03-2015 ರಂದು ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು ಮುಂದಿನ ತೀರ್ಪನ್ನು ನೀಡುವವರೆಗೆ ಮುಂದುವರೆಸುವಂತೆ ಆದೇಶ ನೀಡಿರುತ್ತದೆ. ಸದರಿ ನಿಯಮಗಳನ್ವಯ ಅನಧಿಕೃತ ಬೆಳವಣಿಗೆಗಳಿಗೆ ದಂಡ ವಿಧಿಸಿ ಸಕ್ರಮಗೊಳಿಸಬೇಕಾಗಿರುತ್ತದೆ.
ಇ)	ಈ ಬಗ್ಗೆ ಶಾಶ್ವತ ಪರಿಹಾರಕ್ಕೆ ಸರ್ಕಾರದ ಕ್ರಮವೇನು;	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿ ಸ್ಥಳೀಯ ಯೋಜನಾ ಪ್ರಾಧಿಕಾರ ಪ್ರದೇಶ ಘೋಷಿಸಲಾದ ನಗರ ಮತ್ತು ಪಟ್ಟಣಗಳಲ್ಲಿ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸುವ ಸಂಬಂಧ ಕಲಂ 76 ಎಫ್‌ಎಫ್ ಸೇರ್ಪಡೆಗೊಳಿಸಿ ನಿಯಮಗಳನ್ನು ರಚಿಸಲಾಗಿರುತ್ತದೆ. ಸದರಿ ಕಾಯ್ದೆ/ನಿಯಮಗಳು ಜಾರಿಗೊಳಿಸದೇ ಇರುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ಈ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮತ್ತು ನಗರ ಪ್ರದೇಶಗಳಲ್ಲಿ ಇ-ಖಾತಾ (ಈಂಡಿಟ-3) ನೀಡುವ ಕುರಿತು ಪರಾಮರ್ಶಿಸಲು ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ.

Scanned with CamScanner

ಈ)	ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಅನಧಿಕೃತ ಬಡಾವಣೆಗಳಿವೆ; ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಬಡಾವಣೆಗಳಿವೆ; ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು).	ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 133 ಅನಧಿಕೃತ ಬಡಾವಣೆಗಳಿರುತ್ತದೆ. 1. ಚಿತ್ರದುರ್ಗ ನಗರಸಭೆ – 04 2. ಚಳ್ಳಕೆರೆ ನಗರಸಭೆ – 02 3. ಹಿರಿಯೂರು ನಗರಸಭೆ – 0 4. ಹೊಸದುರ್ಗ ಪುರಸಭೆ – 77 5. ಹೊಳಲ್ಕೆರೆ ಪ.ಪಂ – 49 6. ಮೊಳಕಾಲ್ಮೂರು ಪ.ಪಂ – 0 7. ನಾಯಕನಹಟ್ಟಿ ಪ.ಪಂ – 01 ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 28 ಬೆಮಪ್ರಾ 2018 ದಿ: 28.08.2019 & ನಅಇ 105 ಮೈಅಪ್ರಾ 2020 ದಿ: 16.06.2020ರಲ್ಲಿ ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಬೆಳವಣಿಗೆಗಳನ್ನು ಕೈಗೊಳ್ಳುವ ಮಾಲೀಕರ ವಿರುದ್ಧ ಕಾಯ್ದೆಯಲ್ಲಿನ ಅವಕಾಶದಂತೆ ಕ್ರಿಮಿನಲ್ ಮೊಕದ್ದಮೆ ಹೂಡಲು ಸೂಚಿಸಿದೆ. ಕೃಷಿ ಜಮೀನಿನಲ್ಲಿ ಅನಧಿಕೃತ ಬೆಳವಣಿಗೆಗಳು ಕಂಡು ಬಂದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲು ತಿಳಿಸಿದೆ.

ಸಂಖ್ಯೆ: ನಅಇ 93 ಜಿಇಎಲ್ 2020

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

Scanned with CamScanner

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 88 ಎಲ್ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹೆಚ್. ಡಿ. ರೇವಣ್ಣ, ಮಾನ್ಯ ಶಾಸಕರು (ಹೊಳೇನರಸೀಪುರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:992ಕ್ಕೆ ಉತ್ತರಿಸುವ ಕುರಿತು

~**********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣ, ಮಾನ್ಯ ಶಾಸಕರು (ಹೊಳೇನರಸೀಪುರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:992ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
A. Vijayakumar
14.12.2020
(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 144 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.12.2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 516ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 516ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಲಕ್ಷ್ಮೀಕಾಂತ ಟಿ.

(ಲಕ್ಷ್ಮೀಕಾಂತ ಟಿ.)
ಶಾಖಾಧಿಕಾರಿ,
ಪೌರಾಡಳಿತ-2
ನಗರಾಭಿವೃದ್ಧಿ ಇಲಾಖೆ.

Received
18/12/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	516
ಸದಸ್ಯರ ಹೆಸರು :	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ :	11-12-2020
ಉತ್ತರಿಸುವವರು :	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಪಿರಿಯಾಪಟ್ಟಣ ಪುರಸಭೆಯ ವ್ಯಾಪ್ತಿಯ ಬಡಾವಣೆಗಳಲ್ಲಿ ಎಷ್ಟು ನಿವೇಶನಗಳು ಇ-ಸ್ವತ್ತಿಗೆ ಒಳಪಟ್ಟಿವೆ; ಎಷ್ಟು ನಿವೇಶನಗಳು ಇ-ಸ್ವತ್ತುಗೊಂಡಿರುವುದಿಲ್ಲ; (ವಿವರ ನೀಡುವುದು)	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ಬಡಾವಣೆಗಳಲ್ಲಿ 2658 ನಿವೇಶನಗಳು ಇ-ಆಸ್ತಿಗೆ ಒಳಪಟ್ಟಿರುತ್ತವೆ ಹಾಗೂ 1878 ನಿವೇಶನಗಳು ಇ-ಆಸ್ತಿಗೆ ಒಳಪಟ್ಟಿರುವುದಿಲ್ಲ.
(ಆ)	ಪುರಸಭೆಯ ಬಡಾವಣೆ ವ್ಯಾಪ್ತಿಯ ನಿವೇಶನಗಳನ್ನು ಇ-ಸ್ವತ್ತುಗಳಿಗಾಗಿ ಇದುವರವಿಗೆ ಪರಿವರ್ತಿಸದಿರಲು ಕಾರಣವೇನು; (ವಿವರ ನೀಡುವುದು)	ಪಿರಿಯಾಪಟ್ಟಣ ಪಟ್ಟಣ ಪಂಚಾಯಿತಿಯು ಸರ್ಕಾರದ ಆದೇಶ ಸಂಖ್ಯೆ: ನಅಇ 132 ಎಂಎಲ್ಆರ್ 2014, ಬೆಂಗಳೂರು ದಿನಾಂಕ: 15.05.2015ರಂತೆ ಪುರಸಭೆಯಾಗಿ 2015ರಲ್ಲಿ ಮೇಲ್ದರ್ಜೆಗೇರಿಸಲಾಗಿರುತ್ತದೆ ಹಾಗೂ ಈ ಹಿಂದೆ ಪಟ್ಟಣ ಪಂಚಾಯಿತಿಯಾಗಿದ್ದ ಸಂದರ್ಭದಲ್ಲಿ ಆಸ್ತಿಗಳ ಸರ್ವೆಯನ್ನು ಮಾಡಿ ಪಿಐಯುಡಿ ಗಳನ್ನು ನೀಡಲಾಗಿರುತ್ತದೆ. ಸದರಿ ಆಸ್ತಿಗಳಿಗೆ ಇ-ಆಸ್ತಿ ತಂತ್ರಾಂಶದ ಮೂಲಕ ಹೆಚ್ಚಿನ .ಮಾಹಿತಿಯನ್ನು ದಾಖಲಿಸಿ ನಮೂನೆ-3 ರನ್ನು ಸೃಜನೆ ಮಾಡಬೇಕಿರುತ್ತದೆ. ಆಸ್ತಿಗಳ ಸರ್ವೆಯಾದ ನಂತರ ಹೊಸದಾಗಿ ಸೇರ್ಪಡೆಗೊಂಡಿರುವ ಬಡಾವಣೆಗಳನ್ನು / ಆಸ್ತಿಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಸೇರ್ಪಡೆಗೊಳಿಸಲು ಅವಕಾಶವಿರುತ್ತದೆ. ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ಮೇಲ್ದರ್ಜೆಗೇರಿದ ನಂತರ ಹಲವು ಗ್ರಾಮ ಪಂಚಾಯಿತಿ ಪ್ರದೇಶಗಳು ಪುರಸಭೆಗೆ ವಿಲೀನಗೊಂಡಿದ್ದು, ನಿರ್ದೇಶನಾಲಯದಿಂದ ಕೈಬರಹದ ನಮೂನೆ-3 ಅನ್ನು ನೀಡಲು ರದ್ದುಗೊಳಿಸಿರುವುದರಿಂದ ನಾಗರೀಕರ ಬೇಡಿಕೆಯ ಮೇರೆಗೆ ಹಂತ ಹಂತವಾಗಿ ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದೆ.
(ಇ)	ಸರ್ಕಾರ ಪುರಸಭೆಯ ಬಡಾವಣೆಯ ಎಲ್ಲಾ ನಿವೇಶನಗಳನ್ನು ಇ-ಸ್ವತ್ತುಗಳಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿಗಳಿಗೆ ಆಸ್ತಿ ಗುರುತಿನ ಸಂಖ್ಯೆಯು (PIUD) ಸ್ವಯಂ ಚಾಲಿತವಾಗಿ ಸೃಜನೆಯಾಗುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿಯೇ ಹೊಸ ಬಡಾವಣೆಗಳ ರಸ್ತೆಗಳನ್ನು ಸೇರ್ಪಡೆಗೊಳಿಸಲು ತಂತ್ರಾಂಶದಲ್ಲಿ ಅವಕಾಶಕಲ್ಪಿಸಲಾಗಿರುತ್ತದೆ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳು ಈ ಹಿಂದೆ ಪಿಐಡಿ ನೀಡಲು ಆಗುತ್ತಿದ್ದ ವಿಳಂಬವನ್ನು ತಪ್ಪಿಸಲಾಗಿದೆ. ಮೊಬೈಲ್ ತಂತ್ರಾಂಶವನ್ನೂ ಕೂಡ ಅಭಿವೃದ್ಧಿಗೊಳಿಸಲಾಗುತ್ತಿದ್ದು ಇನ್ನೂ ಕೆಲವೇ ದಿನಗಳಲ್ಲಿ ಇದನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ

Scanned with CamScanner

		ಲಭ್ಯವಾಗುವಂತೆ ಮಾಡಲಾಗುವುದು. ಮೊಬೈಲ್ ತಂತ್ರಾಂಶವು ಲಭ್ಯವಾದ ನಂತರ ನಗರ ಸ್ಥಳೀಯ ಸಂಸ್ಥೆಗಳು ಸ್ಥಳದಲ್ಲಿಯೇ ಆಸ್ತಿಗಳ ಮಾಹಿತಿಯನ್ನು ದಾಖಲಿಸಬಹುದಾಗಿರುತ್ತದೆ. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್‌ವಾರು ಎಲ್ಲಾ ಆಸ್ತಿಗಳನ್ನು ಹಂತ ಹಂತವಾಗಿ ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ನಅಇ 144 ಜಿಇಎಲ್ 2020(ಇ)

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

Scanned with CamScanner

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 992

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ.
(ಹೊಳೆನರಸೀಪುರ)

ಉತ್ತರಿಸುವ ದಿನಾಂಕ : 11.12.2020

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ನಗರಸಭೆಗಳಿಗೆ ಎರಡು ವರ್ಷಗಳಾದರೂ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸಿ ಚುನಾವಣೆ ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು;	ಸರ್ಕಾರದ ಆದೇಶ ಸಂಖ್ಯೆ: ನಅಇ 107 ಎಂಎಲ್ಆರ್ 2020(1) ದಿನಾಂಕ 08.10.2020ರಲ್ಲಿ ನಗರಸಭೆಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ ಹಾಗೂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಗಿದೆ.
ಆ)	ರಾಜ್ಯದ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸುವಲ್ಲಿ ಅನುಸರಿಸಲಾಗುವ ಮಾನದಂಡಗಳೇನು;	ಸರ್ಕಾರದ ಆದೇಶ ಸಂಖ್ಯೆ: ನಅಇ 65 ಎಂಎಲ್ಆರ್ 2020, ದಿನಾಂಕ 11/09/2020ರಲ್ಲಿ ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿಗಳಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.
ಇ)	ಕೆಲವು ನಗರಸಭೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಮೀಸಲಾತಿ ನಿಗದಿಪಡಿಸಲು ಅವಕಾಶವಿಲ್ಲದಿದ್ದರೂ ಮೀಸಲಾತಿ ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ 2018 ರಿಂದ ಚುನಾವಣೆಯಾಗದಿರುವುದನ್ನು ಗಮನದಲ್ಲಿರಿಸಿ ಆದಷ್ಟು ತ್ವರಿತವಾಗಿ ಚುನಾವಣೆ ನಡೆಸುವ ದೃಷ್ಟಿಯಿಂದ ಆವರ್ತನೆಯ ತತ್ವದ ಆಧಾರದ ಮೇಲೆ ಮೀಸಲಾತಿ ನಿಗದಿಪಡಿಸುವ ಕ್ರಮದ ಬದಲಾಗಿ ಹಿಂದಿನ ಅವಧಿಯ ಮೀಸಲಾತಿಯು ಆದಷ್ಟು ಮಟ್ಟಿಗೆ ಪುನರಾವರ್ತನೆಯಾಗದಂತೆ ಹಾಗೂ ಆಯಾಯ ವರ್ಗಗಳಿಗೆ ಲಭ್ಯವಾಗುವ ಮೀಸಲಾತಿ ಸ್ಥಾನಗಳ ಸಂಖ್ಯೆಯನ್ನು ಕಾಯ್ದುಕೊಂಡು ಮೀಸಲಾತಿ ನಿಗದಿಪಡಿಸಲಾಗಿದೆ.

ಈ)	ರಾಜ್ಯದ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಅಧಿಸೂಚನೆ ಸಂಖ್ಯೆ:ನಅಇ 107 ಎಂಎಲ್ಆರ್ 2020 (1)(2)(3), ದಿನಾಂಕ 08/10/2020ರಲ್ಲಿ ಮೀಸಲಾತಿ ನಿಗದಿಪಡಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಅಧಿಸೂಚನೆಗಳನ್ನು ಲಗತ್ತಿಸಲಾಗಿದೆ.

ಸಂಖ್ಯೆ: ನಅಇ/88/ಎಲ್ಎಕ್ಯೂ/2020

(ನಾರಾಯಣ ಗೌಡ)
ಮಾನ್ಯ ಪೌರಾಡಳಿತ, ತೋಟಗಾರಿಕೆ
ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 98 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15.12.2020.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಾಗೇಶ್ ಬಿ.ಸಿ. (ತಿಪಟೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 514ಕ್ಕೆ ಉತ್ತರ ಕಳುಹಿಸುವ ಬಗ್ಗೆ.

~** **~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಾಗೇಶ್ ಬಿ.ಸಿ. (ತಿಪಟೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 514ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಲಕ್ಷ್ಮೀಕಾಂತ ಟಿ.

(ಲಕ್ಷ್ಮೀಕಾಂತ ಟಿ.)
ಶಾಖಾಧಿಕಾರಿ,
ಪೌರಾಡಳಿತ-2
ನಗರಾಭಿವೃದ್ಧಿ ಇಲಾಖೆ.

Received
16/12/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	514
ಸದಸ್ಯರ ಹೆಸರು :	ಶ್ರೀ ನಾಗೇಶ್ ಬಿ.ಸಿ. (ತಿಪಟೂರು)
ಉತ್ತರಿಸಬೇಕಾದ ದಿನಾಂಕ :	11-12-2020
ಉತ್ತರಿಸುವವರು :	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ತಿಪಟೂರು ನಗರದ ಸ್ಥಳೀಯ ಸಂಸ್ಥೆಗಳ ಹೊರವಲಯಗಳಲ್ಲಿ ಭೂ ಪರಿವರ್ತನೆಯಾಗದೆ ಹಾಗೂ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ವಾಣಿಜ್ಯ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ ನಿರ್ಮಾಣವಾಗುತ್ತಿರುವ ಈ ವಾಣಿಜ್ಯ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ನಿರಕ್ಷೇಪಣಾ ಪತ್ರ ಹಾಗೂ ವಾಣಿಜ್ಯ ಪರವಾನಗಿ ಯಾವ ಮಾನದಂಡಗಳ ಮೇಲೆ ನೀಡಲಾಗುತ್ತಿದೆ; (ವಿವರ ನೀಡುವುದು)	ಕರ್ನಾಟಕ ಪೌರಸಭೆಗಳ ಅಧಿನಿಯಮ 1964, ಕಲಂ 187 ರೀತ್ಯಾ ಅಕ್ರಮ ಕಟ್ಟಡಗಳನ್ನು ನಿರ್ಮಾಣ ಹಂತದಲ್ಲಿ ತಡೆಹಿಡಿಯಲು ಕ್ರಮವಹಿಸಲಾಗುತ್ತಿದೆ. ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ವಾಣಿಜ್ಯ ಕಟ್ಟಡಗಳಿಗೆ ವಿದ್ಯುತ್ ನಿರಾಕ್ಷೇಪಣ ಪತ್ರ ಮತ್ತು ವಾಣಿಜ್ಯ ಪರವಾನಿಗೆಯನ್ನು ನೀಡಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಈಗಾಗಲೇ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳಿಗೆ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 107 ರಡಿ ತೆರಿಗೆಯ ಎರಡರಷ್ಟು ಸಮನಾದ ದಂಡವನ್ನು ಪಾವತಿಸಿಕೊಂಡು ಸದರಿ ಕಟ್ಟಡಗಳಲ್ಲಿ ಉದ್ದಿಮೆ ನಡೆಸಲು ವಾಣಿಜ್ಯ ಪರವಾನಿಗೆಯನ್ನು ನೀಡಲಾಗುತ್ತಿದೆ.

...2

Scanned with CamScanner

ಇ)	ಹಾಗಿದ್ದಲ್ಲಿ ಅಕ್ರಮ ಕಟ್ಟಡಗಳು ನಿರ್ಮಾಣವಾಗುವುದನ್ನು ತಡೆಗಟ್ಟಲು ನಿಯಮಾವಳಿ ರಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)	ಕರ್ನಾಟಕ ಪೌರಸಭೆಗಳ ಅಧಿನಿಯಮ 1964, ಕಲಂ.187(8) ರೀತ್ಯಾ ಅಕ್ರಮ ಕಟ್ಟಡಗಳನ್ನು ನಿರ್ಮಾಣ ಹಂತದಲ್ಲಿ ತಡೆಹಿಡಿಯಬೇಕಾಗಿರುತ್ತದೆ. ಸರ್ಕಾರದ ಸುತ್ತೋಲೆ ನಅಇ 28 ಬೆಮಪ್ರಾ 2018 ದಿ: 28.08.2019 & ನಅಇ 105 ಮೈಅಪ್ರಾ 2020 ದಿ: 16.06.2020 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಬೆಳವಣಿಗೆಗಳನ್ನು ಕೈಗೊಳ್ಳುವ ಮಾಲೀಕರ ವಿರುದ್ಧ ಕಾಯ್ದೆಯಲ್ಲಿನ ಅವಕಾಶದಂತೆ ಕ್ರಿಮಿನಲ್ ಮೊಕದ್ದಮೆ ಹೂಡಲು ಸೂಚಿಸಿದೆ. ಕೃಷಿ ಜಮೀನಿನಲ್ಲಿ ಅನಧಿಕೃತ ಬೆಳವಣಿಗೆಗಳು ಕಂಡುಬಂದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲು ತಿಳಿಸಿದೆ.

ಸಂಖ್ಯೆ: ನಅಇ 98 ಜಿಇಎಲ್ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

Scanned with CamScanner

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 398 ಸಿಎಲ್ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಬಸನಗೌಡ ಆರ್.ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 524 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಅವಿನಾಶ್ ಉಮೇಶ್ ಜಾಧವ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 524 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha H.C

(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಬಸನಗೌಡ ಆರ್. ಪಾಟೀಲ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 524

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳಿಂದ ಎಷ್ಟು ಜನ ರೈತರು ಬೆಳೆಸಾಲ ಪಡೆದಿದ್ದಾರೆ; ಸಾಲದ ಒಟ್ಟು ಮೊತ್ತ ಎಷ್ಟು; (ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳ ಜಿಲ್ಲಾವಾರು ಪ್ರತ್ಯೇಕ ವಿವರವನ್ನು ನೀಡುವುದು)	<u>ಸಹಕಾರ ಸಂಘಗಳು /ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ</u> ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ದಿ:31-3-2020 ರ ಅಂತ್ಯಕ್ಕೆ 23,36,536 ರೈತರು ರೂ.13,514.00 ಕೋಟಿಗಳ ಬೆಳೆ ಸಾಲ ಪಡೆದಿರುತ್ತಾರೆ. ಜಿಲ್ಲಾವಾರು ವಿವರವನ್ನು **<u>ಅನುಬಂಧ-01</u>** ರಲ್ಲಿ ನೀಡಲಾಗಿದೆ. <u>ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ</u> ರಾಜ್ಯದಲ್ಲಿ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರ ಸಂಸ್ಥೆಗಳಿಂದ 44,94,470 ರೈತರು ರೂ51,414 ಕೋಟಿ ಬೆಳೆ ಸಾಲ ಪಡೆದಿದ್ದಾರೆ. ಬ್ಯಾಂಕುವಾರು ಹಾಗೂ ಸಹಕಾರಿ ಸಂಸ್ಥೆಗಳ ವಿವರಗಳನ್ನು **<u>ಅನುಬಂಧ-02</u>** ರಲ್ಲಿ ಹಾಗೂ ಜಿಲ್ಲಾವಾರು ವಿವರಗಳನ್ನು **<u>ಅನುಬಂಧ-03</u>** ರಲ್ಲಿ ನೀಡಲಾಗಿದೆ.
ಆ)	ಈ ಬೆಳೆ ಸಾಲದ ಮೊತ್ತದಲ್ಲಿ ಮರುಪಾವತಿ ಆಗಿರುವ ಮತ್ತು ಬಾಕಿ ಇರುವ ಮೊತ್ತವೆಷ್ಟು; (ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳ ಜಿಲ್ಲಾವಾರು ಪ್ರತ್ಯೇಕ ವಿವರಗಳನ್ನು ನೀಡುವುದು)	<u>ಸಹಕಾರ ಸಂಘಗಳು /ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ</u> ಈ ಬೆಳೆ ಸಾಲದಲ್ಲಿ ದಿ:31-10-2020 ರವರೆಗೆ ರೂ.7517.68 ಕೋಟಿಗಳು ಮರುಪಾವತಿ ಆಗಿದ್ದು, ರೂ.5996.32 ಕೋಟಿಗಳು ಬಾಕಿ ಇದ್ದು, ಬಹುತೇಕ ಸಾಲಗಳು ಚಾಲ್ತಿಯಲ್ಲಿರುತ್ತವೆ. ಜಿಲ್ಲಾವಾರು ವಿವರವನ್ನು **<u>ಅನುಬಂಧ-01</u>** ರಲ್ಲಿ ನೀಡಲಾಗಿದೆ. <u>ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ</u> ಈ ಬೆಳೆ ಸಾಲದ ಮೊತ್ತದಲ್ಲಿ ಮರುಪಾವತಿ ಆಗಿರುವ ಮತ್ತು ಬಾಕಿ ಇರುವ ಮೊತ್ತದ ಮಾಹಿತಿ ಲಭ್ಯವಿಲ್ಲವೆಂದು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ ಸಂಚಾಲಕರು ತಿಳಿಸಿರುತ್ತಾರೆ.
ಇ)	ಕೊರೊನಾ ವೈರಸ್ ಹಿನ್ನಲೆಯಲ್ಲಿ ರೈತರ ಸಾಲವನ್ನು ಮನ್ನಾ ಮಾಡುವ ಕುರಿತು ಸರ್ಕಾರದ ನಿಲುವೇನು?	ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಸಿಒ 398 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರ

ಅನುಬಂಧ - 1

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್) ವಿಜಯಪುರ ನಗರ ರವರು ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 524 ಕ್ಕೆ ಅನುಬಂಧ

ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲ ಪಡೆದ ಮತ್ತು ಮರುಪಾವತಿಸಿದ ವಿವರ (ರೂ.ಕೋಟಿಗಳಲ್ಲಿ)

ಕ್ರ. ಸಂ	ಜಿಲ್ಲೆಯ ಹೆಸರು	ದಿ.31-3-2020 ರ ರಗೆ ಸಾಲ ಪಡೆದ ವಿವರ		ದಿ.1-4-2020 ರಿಂದ ದಿ.31-10-2020 ರ ವರೆಗೆ ಮರುಪಾವತಿಸಿದ ಸಾಲದ ಮೊತ್ತ	ದಿ.31-10-2020 ಕ್ಕೆ ಬಾಕಿ
		ಸಂಖ್ಯೆ	ಮೊತ್ತ		
1	ಬೆಳಗಾವಿ	379221	1782.00	1103.62	678.38
2	ವಿಜಯಪುರ	204365	1037.00	401.53	635.47
3	ಬಾಗಲಕೋಟೆ	210310	1073.00	1072.24	0.76
4	ಧಾರವಾಡ	24584	96.00	65.21	30.79
5	ಹಾವೇರಿ	36959	109.00	70.92	38.08
6	ಗದಗ	25777	111.00	60.68	50.32
7	ಉತ್ತರ ಕನ್ನಡ	78540	671.00	600.00	71.00
8	ಮೈಸೂರು	48570	443.00	297.94	145.06
9	ಚಾಮರಾಜನಗರ	15667	127.00	56.06	70.94
10	ಮಂಡ್ಯ	143987	890.00	703.02	186.98
11	ಹಾಸನ	128443	647.00	70.69	576.31
12	ಚಿಕ್ಕಮಗಳೂರು	36819	452.00	449.43	2.57
13	ಕೊಡಗು	35944	530.00	500.19	29.81
14	ದಕಿಣ ಕನ್ನಡ	81261	938.00	311.87	626.13
15	ಉಡುಪಿ	23266	276.00	113.26	162.74
16	ಬೆಂಗಳೂರು	10106	50.00	29.97	20.03
17	ಬೆಂಗಳೂರು ಗ್ರಾಮಾಂತರ	27605	124.00	75.30	48.70
18	ರಾಮನಗರ	63669	294.00	177.38	116.62
19	ಕೋಲಾರ	15385	161.00	55.31	105.69
20	ಚಿಕ್ಕಬಳ್ಳಾಪುರ	21966	199.00	57.08	141.92
21	ತುಮಕೂರು	77423	326.00	95.67	230.33
22	ಚಿತ್ರದುರ್ಗ	49586	222.00	93.21	128.79
23	ದಾವಣಗೆರೆ	92718	351.00	180.72	170.28
24	ಶಿವಮೊಗ್ಗ	89562	421.00	153.12	267.88
25	ಬಳ್ಳಾರಿ	84881	640.00	251.34	388.66
26	ಬೀದರ್	154025	825.00	315.92	509.08
27	ಕಲಬುರ್ಗಿ	55982	160.00	17.70	142.30
28	ಯಾದಗಿರಿ	32749	92.00	7.50	84.50
29	ರಾಯಚೂರು	56683	315.00	74.89	240.11
30	ಕೊಪ್ಪಳ	30483	152.00	55.91	96.09
	Total	**2336536**	**13514**	**7517.68**	**5996.32**

ಸಹಕಾರ ಸಂಘಗಳ ಅಪರ ನಿಬಂಧಕರು,(ಪತ್ತು)

ಅನುಬಂಧ-೨

SLBC KARNATAKA

BANKWISE DATA ON CROP LOAN/ KCC DATA AS AT SEPT 2020 (NO. in actuals, Amount in Crore)

Sl. No	Name of the Bank	KCC/Crop Loan O/s as SEPT 2020	
		No.	Amount
(A)	**Major Banks**		
1	Canara Bank	586413	8376.05
2	State Bank of India	245978	4618.89
3	Union Bank Of India	160208	3347.44
4	Bank of Baroda	95042	2036.09
	Total (A)	**1087641**	**18378.47**
(B)	**OtherNationalised Banks**		
1	Bank of India	26987	467.43
2	Bank of Maharastra	8209	135.21
3	Central Bank of India	9852	245.67
4	Indian Bank	9775	321.39
5	Indian Overseas Bank	41254	445.45
6	Punjab National Bank	16698	177.96
7	Punjab and Synd Bank	48	1.26
8	UCO Bank	3258	41.77
	Total (B)	**116081**	**1836.14**
(C)	**Other Comm.Banks**		
1	IDBI Bank	6883	247.31
2	Karnataka Bank Ltd	19387	558.72
3	Kotak Mahendra Bank	1627	25.37
4	Cathelic Syrian Bank Ltd.	1	0.01
5	City Union Bank Ltd	1150	11.25
6	Dhanalaxmi Bank Ltd.	0	0.00
7	Federal Bank Ltd.	74500	1367.01
8	J and K Bank Ltd	0	0.00
9	Karur Vysya Bank Ltd.	14047	232.75
10	Lakshmi Vilas Bank Ltd	9	0.00
11	Ratnakar Bank Ltd	3575	183.45
12	South Indian Bank Ltd	69	21.55
13	Tamil Nadu Merchantile Bank Ltd.	2908	29.06
14	IndusInd Bank	0	0.00
15	HDFC Bank Ltd	46151	1409.45
16	Axis Bank Ltd	22802	555.57
17	ICICI Bank Ltd	24920	1571.94
18	YES BANK Ltd.	45	1.27
19	Bandhan Bank	0	0.00
20	DCB Bank Ltd	1131	162.89
21	IDFC Bank	392	30.56
	Total(C)	**219597**	**6408.16**
(D)	**R R B 's**		
1	Karnataka Grameena Bank	292508	4456.18
2	Karnataka Vikas Grameena Bank	304044	5324.00
	Total (D)	**596552**	**9780.18**
Total (Comm.Banks) A+B+C		**1423319**	**26622.77**
Grand Total (A+B+C+D)		**2019871**	**36402.95**
(E)	**Co-Op Sector**		
1	KSCARD Bk.Ltd	0	0.00
2	K.S.Coop Apex Bank ltd	2474586	15010.81
3	Indl.Co.Op.Bank ltd.	0	0.00
	Total (E)	**2474586**	**15010.81**
(F)	KSFC	0	0.00
	TOTAL (F)	**0**	**0.00**
(G)	**Small Finance Bank**		
1	Equitas Small Finance Bank	0	0.00
2	Ujjivan Small Finnance	13	0.28
3	Suryoday Small Finance Bank	0	0.00
4	ESAF Small Finance Bank	0	0.00
	TOTAL (G)	**13**	**0.28**
(H)	**Payments bank**		
1	India Post Payments Bank Limited	0	0.00
2	Airtel Payments Bank	0	0.00
	TOTAL (H)	**0**	**0.00**
	TOTAL (A+B+C+D+E+F+G+H)	**4494470**	**51414.04**

ಅನುಬಂಧ-2

SLBC Karnataka

DISTRICT WISE DATA ON CROP LOAN/ KCC AS AT 30.9.2020 (Amount in Crore)

Sl	Name of the District	Outstanding as at the quarter ending SEPT 2020	
		No.	Amount
1	BAGALKOTE	325854	3876
2	BALLARI	150114	2153
3	BELAGAVI	607615	5466
4	BENGALURU (Rural)	56760	554
5	BENGALURU (Urban + Metro)	39705	1004
6	BIDAR	206736	1681
7	Chamarajnagar	59369	682
8	CHICKBALLAPUR	50338	748
9	CHICKKMAGALURU	92659	1812
10	CHITRADURGA	108465	1045
11	DAKSHINA KANNADA	109278	1394
12	DAVANAGERE	167767	1464
13	DHARWAD	136177	2125
14	GADAG	110396	1935
15	HASSAN	261333	2423
16	HAVERI	158907	2360
17	KALBURGI	185027	2147
18	KODAGU	67232	1350
19	KOLAR	47347	638
20	KOPPAL	78178	1009
21	MANDYA	207677	1419
22	MYSURU	139283	1678
23	RAICHUR	139953	2082
24	RAMANAGAR	116777	801
25	SHIVAMOGGA	138451	1694
26	TUMAKURU	202870	1994
27	UDUPI	34971	503
28	Uttarakannada	91576	779
29	VIJAYAPURA	312322	3527
30	YADGIR	91333	1072
	TOTAL	**4494470**	**51414**

– 2

Manju Prasanna 9/12/20

ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ಸಾಂಸ್ಥಿಕ ಹಣಕಾಸು)

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 77 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 14/12/2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1125ಕ್ಕೆ ಉತ್ತರಿಸುವ ಕುರಿತು

~*********~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1125ರ ಉತ್ತರದ 25 ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

A Vijayakumar
14.12.2020

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1125**
ಸದಸ್ಯರ ಹೆಸರು : **ಶ್ರೀ. ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)**
ಉತ್ತರಿಸುವ ದಿನಾಂಕ : **11/12/2020**
ಉತ್ತರಿಸುವ ಸಚಿವರು : **ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು**

	ಪ್ರಶ್ನೆ	ಉತ್ತರ
ಅ	ಬೈಲಹೊಂಗಲ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮ ಪಂಚಾಯಿತಿಯು ಸವದತ್ತಿ ತಾಲ್ಲೂಕಿನಲ್ಲಿಯೇ ಗ್ರೇಡ್–1 ಗ್ರಾಮ ಪಂಚಾಯಿತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಮುರಗೋಡ ಗ್ರಾಮದಲ್ಲಿ ಉಪನೋಂದಾವಣಿ ಅಧಿಕಾರಿಗಳ ಕಛೇರಿ, ಪೊಲೀಸ್ ಠಾಣೆ, ಉಪತಹಶೀಲ್ದಾರ ಕಛೇರಿ (ನಾಡಕಛೇರಿ) ಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ	ಮುರಗೋಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಜಿಲ್ಲಾಧಿಕಾರಿ ವತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;	ಮುರಗೋಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಂದ ಪ್ರಸ್ತಾವನೆ ಬಂದಿರುವುದಿಲ್ಲ.
ಈ	ಹಾಗಿದ್ದಲ್ಲಿ, ಮುರಗೋಡ ಗ್ರಾಮ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಪ್ರಸ್ತಾವನೆ ಸ್ವೀಕೃತವಾದಲ್ಲಿ ಕರ್ನಾಟಕ ಪುರಸಭೆ ಕಾಯ್ದೆ 1964 ರಡಿ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು.

ಸಂಖ್ಯೆ:ನಅಇ 77 ಎಲ್‌ಎಕ್ಯೂ 2020.

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 397 ಸಿಎಲ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಅವಿನಾಶ್ ಉಮೇಶ್ ಜಾಧವ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 522 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಅವಿನಾಶ್ ಉಮೇಶ್ ಜಾಧವ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 522 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha HC
(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಡಾ॥ ಅವಿನಾಶ್ ಉಮೇಶ್ ಜಾಧವ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 522

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಲ್ಯಾಣ–ಕರ್ನಾಟಕ ಭಾಗದ ಚಿಂಚೋಳಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ, ಅವು ಯಾವುವು; ಇವುಗಳಲ್ಲಿ ಸಹಕಾರ ಸಂಘಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ ಹಾಗೂ ಎಷ್ಟು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ;	ಕಲ್ಯಾಣ ಕರ್ನಾಟಕ ಭಾಗದ ಚಿಂಚೋಳಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ 23 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 16 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸ್ವಂತ ಕಟ್ಟಡ ಹೊಂದಿರುತ್ತವೆ ಮತ್ತು 07 ಸಹಕಾರ ಸಂಘಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಆ)	ಚಿಂಚೋಳಿ ತಾಲ್ಲೂಕಿನ ಐನಾಪೂರ ಹಾಗೂ ಚಿತ್ತಾಪೂರ ತಾಲ್ಲೂಕಿನ ಮಂಗಲಗಿ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಗ್ರಾಮ ಪಂಚಾಯಿತಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;	ಚಿಂಚೋಳಿ ತಾಲ್ಲೂಕಿನ ಐನಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಂಗಲಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಹೊಸದಾಗಿ ನೋಂದಣಿಯಾಗಿದ್ದು, ಸ್ವಂತ ನಿವೇಶನ ಹೊಂದಿದ್ದು, ಹಾಲಿ ಸಂಘದ ವ್ಯವಹಾರವನ್ನು ಗ್ರಾಮ ಪಂಚಾಯಿತಿ ಕಟ್ಟಡದಲ್ಲಿ ನಡೆಸುತ್ತಿದೆ. ಸಹಾಯಧನ ಕೋರಿ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? (ಮಾಹಿತಿ ಒದಗಿಸುವುದು)	ಅನ್ವಯಿಸುವುದಿಲ್ಲ.

ಸಂಖ್ಯೆ: ಸಿಒ 397 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಕಲ್ಯಾಣ ಕರ್ನಾಟಕ ಭಾಗದ ಚಿಂಚೋಳಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಸ್ವಂತ ಕಟ್ಟಡಗಳ ಮಾಹಿತಿ

ಕ್ರಮ ಸಂಖ್ಯೆ	ಸಂಘದ ಹೆಸರು	ಕಟ್ಟಡದ ಮಾಹಿತಿ
01	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಐನಾಪೂರ	ಸ್ವಂತ ಕಟ್ಟಡ
02	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಐನೊಳ್ಳಿ	ಸ್ವಂತ ಕಟ್ಟಡ
03	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಮೋಲಕಪಳ್ಳಿ	ಬಾಡಿಗೆ ಕಟ್ಟಡ
04	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಚಿಮ್ಮನಚೋಡ	ಸ್ವಂತ ಕಟ್ಟಡ
05	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಗಡಿಲಿಂಗದಳ್ಳಿ	ಸ್ವಂತ ಕಟ್ಟಡ
06	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಸಾಲೇಬೀರನಳ್ಳಿ	ಸ್ವಂತ ಕಟ್ಟಡ
07	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕೊಳ್ಳುರ	ಸ್ವಂತ ಕಟ್ಟಡ
08	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕರಕಮುಕಳಿ	ಸ್ವಂತ ಕಟ್ಟಡ
09	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹಸರಗುಂಡಗಿ	ಸ್ವಂತ ಕಟ್ಟಡ
10	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಶಾದಿಪುರ	ಸ್ವಂತ ಕಟ್ಟಡ
11	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಮಿರಿಯಾಣ	ಸ್ವಂತ ಕಟ್ಟಡ
12	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ವೆಂಕಟಾಪೂರ	ಬಾಡಿಗೆ ಕಟ್ಟಡ
13	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕುಂಚಾವರಂ	ಬಾಡಿಗೆ ಕಟ್ಟಡ
14	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಚಂದನಕೇರಾ	ಸ್ವಂತ ಕಟ್ಟಡ
15	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಚೆಂಗಟಾ	ಸ್ವಂತ ಕಟ್ಟಡ
16	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹೋಡಿನಬಾವಿ	ಬಾಡಿಗೆ ಕಟ್ಟಡ
17	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಗಾರಂಪಳ್ಳಿ	ಬಾಡಿಗೆ ಕಟ್ಟಡ
18	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಮೋಘಾ	ಬಾಡಿಗೆ ಕಟ್ಟಡ
19	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕೋಡ್ಲಿ	ಸ್ವಂತ ಕಟ್ಟಡ
20	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹೊಡ್ಡೆಬೀರನಳ್ಳಿ	ಸ್ವಂತ ಕಟ್ಟಡ
21	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹಲಚೇರಾ	ಸ್ವಂತ ಕಟ್ಟಡ
22	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕೋರವಿ	ಬಾಡಿಗೆ ಕಟ್ಟಡ
23	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ರಟಕಲ	ಸ್ವಂತ ಕಟ್ಟಡ

ಸಹಕಾರ ಸಂಘಗಳ ಅಪರ ನಿಬಂಧಕರು,
(ಪತ್ತು)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 407 ಸಿಎಲ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್.ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1085 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್.ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1085 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha HC
(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಶಿವಾನಂದ ಎಸ್. ಪಾಟೀಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1085

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಒಣದ್ರಾಕ್ಷೀ ತಯಾರಿಸುವ ಘಟಕಗಳನ್ನು ಸ್ಥಾಪಿಸಲು ರೈತರಿಗೆ ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸಲಾಗುತ್ತಿದೆಯೇ	ಹೌದು, ಒಣದ್ರಾಕ್ಷೀ ತಯಾರಿಸುವ ಘಟಕಗಳನ್ನು ಸ್ಥಾಪಿಸಲು ರೈತರಿಗೆ ಡಿಸಿಸಿ ಬ್ಯಾಂಕು ಮತ್ತು ಪಿಕಾರ್ಡ್ ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಒದಗಿಸುವ ಸಾಲಕ್ಕೆ ಆಕರಣೆ ಮಾಡುವ ಬಡ್ಡಿದರ ಎಷ್ಟು	ಒಣದ್ರಾಕ್ಷೀ ತಯಾರಿಸುವ ಘಟಕಗಳನ್ನು ಸ್ಥಾಪಿಸಲು ರೈತರಿಗೆ ಡಿಸಿಸಿ ಬ್ಯಾಂಕುಗಳು, ಪ್ಯಾಕ್ಸ್ ಗಳು ಮತ್ತು ಮತ್ತು ಪಿಕಾರ್ಡ್ ಬ್ಯಾಂಕುಗಳು ನಿವ್ವಳ ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಸಾಲ ವಿತರಿಸಬೇಕಿರುತ್ತದೆ.
ಇ)	ಒಣ ದ್ರಾಕ್ಷೀ ತಯಾರಿಸುವ ಘಟಕ ಸ್ಥಾಪನೆಗೆ ರೈತರು ಪಡೆಯುವ ಬ್ಯಾಂಕುಗಳು ಸಾಲಕ್ಕೆ ವಿಧಿಸುವ ಬಡ್ಡಿದರವು ಕೃಷಿಯೇತರ ಸಾಲಗಳಿಗೆ ನಿಗಧಿಪಡಿಸಿದ ಬಡ್ಡಿದರದಂತೆ ಆಕರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ರೈತರ ಅನುಕೂಲಕ್ಕಾಗಿ ಒಣ ದ್ರಾಕ್ಷೀ ತಯಾರಿಸುವ ಘಟಗಳಿಗೆ ಸಾಲ ಪಡೆಯುವ ರೈತರಿಗೆ ಬ್ಯಾಂಕುಗಳಿಂದ ಕೃಷಿಯೇತರ ಬಡ್ಡಿದರದ ಬದಲಾಗಿ, ಸರ್ಕಾರದ ಬಡ್ಡಿ ಸಹಾಯಧನ ಯೋಜನೆಯಡಿ ಮಧ್ಯಮಾವಧಿ/ ಧೀರ್ಘಾವಧಿ ಸಾಲದ ಬಡ್ಡಿದರ ಆಕರಣೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?	ರೈತರ ಅನುಕೂಲಕ್ಕಾಗಿ ಒಣ ದ್ರಾಕ್ಷೀ ತಯಾರಿಸುವ ಘಟಗಳಿಗೆ ಶೇ.3ರ ಬಡ್ಡಿ ದರದಲ್ಲಿ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ ದೊರೆಯಲು ಈಗಾಗಲೇ ಕ್ರಮಕೈಗೊಂಡಿದ್ದು, ವಿವರ ಈ ಕೆಳಗಿನಂತಿರುತ್ತದೆ. ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆಯಲ್ಲಿ 2020–21 ನೇ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಒ 272 ಸಿಎಲ್ಎಸ್ 2020, ದಿ.07–10–2020 ರ ಆದೇಶದ ಷರತ್ತು ಸಂಖ್ಯೆ 4 ಈ ಕೆಳಗಿನಂತಿರುತ್ತದೆ. "ನಬಾರ್ಡ್ ಗುರುತಿಸಿದ ಕೃಷಿ / ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಪೈಕಿ ಲಘು ನೀರಾವರಿ, ಭೂ

		ಅಭಿವೃದ್ಧಿ, ಕೃಷಿ ಯಾಂತ್ರೀಕರಣ, ಪ್ಲಾಂಟೇಷನ್ ಹಾಗೂ ತೋಟಗಾರಿಕೆ ಅಭಿವೃದ್ಧಿ, ಸಾವಯವ ಕೃಷಿ, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ಮೀನು ಕೃಷಿ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ ಉದ್ದೇಶಗಳಿಗೆ ರೈತರಿಗೆ ನೀಡಲಾಗುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಯೋಜನೆಯು ಕೊಯ್ಲು (harvest) ವರೆಗಿನ ಮತ್ತು ಕೊಯ್ಲು ನಂತರದ ಕೃಷಿ ಚಟುವಟಿಕೆಗಳಿಗೆ ಅಂದರೆ ಮಾರುಕಟ್ಟೆಗೆ ಕೃಷಿ ಉತ್ಪನ್ನ ಸಿದ್ದವಾಗುವ ಹಂತದ ವರೆಗೆ (threshing, winnowing, cleaning, grading, drying) ಅವಶ್ಯವಿರುವ ಕೃಷಿ ಯಂತ್ರೋಪಕರಣ/ಘಟಕಗಳನ್ನು ಹೊಂದಲು ನೀಡುವ ಸಾಲಗಳಿಗೂ ಸಹ ಅನ್ವಯವಾಗುತ್ತದೆ. ದ್ವಿಚಕ್ರ ವಾಹನ, ಜೀಪು, ಪಿಕಪ್ ವ್ಯಾನ್ ಹಾಗೂ ಇನ್ನು ಮುಂತಾದ ಯಾವುದೇ ಕೃಷಿ ಸಾಗಾಣಿಕೆಗೆ ಬಳಸುವ ವಾಹನ ಸಾಲಗಳಿಗೆ, ತೋಟದ ಮನೆ, ಗ್ರಾಮೀಣ ಗೋದಾಮು ಗಳಿಗೆ, ದ್ವಿತೀಯ ಸಂಸ್ಕರಣೆ, ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ/ಆಹಾರ ಸಂಸ್ಕರಣೆ, ಕೃಷಿ ಕ್ಲಿನಿಕ್‌ಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಹಾಗೂ ಇಂತಹ ಸಾಲಗಳಿಗೆ ಬ್ಯಾಂಕು ನಿಗದಿಪಡಿಸಿದ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸಬಹುದಾಗಿದೆ. ರೈತರು ಸಾಲದಿಂದ ನಿರ್ಮಿಸುವ ಘಟಕ/ಯಂತ್ರೋಪಕರಣಗಳು ಕನಿಷ್ಟ ಶೇ.25 ರಷ್ಟು ಸ್ವಂತಕ್ಕೆ ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು". ಈ ಷರತ್ತಿನನ್ವಯ ಒಣದ್ರಾಕ್ಷೀ ತಯಾರಿಸುವ ಘಟಕಗಳನ್ನು ಸ್ಥಾಪಿಸಲು ರೈತರಿಗೆ ನಿವ್ವಳ ಶೇ.3ರ ಬಡ್ಡಿ ದರದಲ್ಲಿ ಸಾಲ ಪಡೆಯಲು ಅವಕಾಶವಿರುತ್ತದೆ. ಸರ್ಕಾರದ ಆದೇಶದಂತೆ ಕ್ರಮವಹಿಸಲು ಬ್ಯಾಂಕಿಗೆ ಸೂಚನೆ ನೀಡಲಾಗಿದೆ.

ಸಂಖ್ಯೆ: ಸಿಓ 407 ಸಿಎಲ್ಎಸ್ 2020

ಎಸ್.ಟಿ. ಸೋಮಶೇಖರ್

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 408 ಸಿಎಲ್ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ನಿಸರ್ಗ ನಾಯಾರಣಸ್ವಾಮಿ ಎಲ್.ಎನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1090 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ನಿಸರ್ಗ ನಾಯಾರಣಸ್ವಾಮಿ ಎಲ್.ಎನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1090 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha H C

(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1090

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಸಹಕಾರ ಸಂಘಗಳೆಷ್ಟು; ಈ ಪೈಕಿ ಕೃಷಿ ಪತ್ತಿನ ಸಹಕಾರ ಸಂಘಗಳು, ತಾಲ್ಲೂಕು, ಜಿಲ್ಲಾ ಮಟ್ಟದ ಸಂಘಗಳು, ಯೂನಿಯನ್, ಬ್ಯಾಂಕ್ ಹಾಗೂ ರಾಜ್ಯಮಟ್ಟದ ಒಕ್ಕೂಟ ಹಾಗೂ ಮಂಡಳಿಗಳೆಷ್ಟು; (ಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿರುವ ಒಟ್ಟು ಸಹಕಾರ ಸಂಘಗಳ ಸಂಖ್ಯೆ 44571 ಮಾಹಿತಿಯನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. ಈ ಪೈಕಿ ಕೃಷಿ ಪತ್ತಿನ ಸಹಕಾರ ಸಂಘಗಳು 5851, ತಾಲ್ಲೂಕು ಮಟ್ಟದ ಸಹಕಾರ ಸಂಘಗಳು-2736, ಜಿಲ್ಲಾ ಮಟ್ಟದ ಸಹಕಾರ ಸಂಘಗಳು-634, ಯೂನಿಯನ್‌ಗಳು-34, ಬ್ಯಾಂಕ್‌ಗಳು-305, ರಾಜ್ಯಮಟ್ಟದ ಒಕ್ಕೂಟ ಹಾಗೂ ಮಂಡಳಿಗಳು-36. ಮಾಹಿತಿಯನ್ನು **ಅನುಬಂಧ-02** ರಲ್ಲಿ ನೀಡಲಾಗಿದೆ.
ಆ)	ಸದರಿ ಸಂಘ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಮೀಸಲಾತಿ ನಿಗದಿಪಡಿಸಲಾಗಿದೆಯೇ; ಹಾಗೂ ಯಾವ ಮಾನದಂಡಗಳಡಿಯಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಸದರಿ ಸಂಘಗಳಿಗೆ ಆಯ್ಕೆ ಮಾಡಲಾಗುತ್ತದೆ; (ವಿವರ ನೀಡುವುದು)	ಸಹಕಾರ ಸಂಘಗಳಿಗೆ ನಡೆಯುವ ಚುನಾವಣೆಗಳಿಗೆ ಮೀಸಲಾತಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 28ಎ ರಲ್ಲಿ ನಿಗದಿಪಡಿಸಲಾಗಿದೆ. ಅದರಂತೆ, (i) ಪ್ರಾಥಮಿಕ ಸಂಘದ ಮತ್ತು ಮಾಧ್ಯಮಿಕ ಸಂಘದ ಕಾರ್ಯಕ್ಷೇತ್ರದ ವ್ಯಾಪ್ತಿಯು:- (ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದ್ದರೆ, (ಹದಿಮೂರು) ಸದಸ್ಯರು; (ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, (ಹದಿನೈದು) ಸದಸ್ಯರು; (ಸಿ) ತಾಲ್ಲೂಕನ್ನು ಮೀರಿದ ಆದರೆ ಜಿಲ್ಲೆಯನ್ನು ಮೀರದ ಪ್ರದೇಶಕ್ಕೆ ವ್ಯಾಪಿಸಿದರೆ,(ಹದಿನೇಳು) ಸದಸ್ಯರು: (ಡಿ) ಜಿಲ್ಲೆಯನ್ನು ಮೀರಿ ವ್ಯಾಪಿಸಿದ್ದರೆ, (ಹತ್ತೊಂಬತ್ತು ಸದಸ್ಯರು) (ii) ಅಪೆಕ್ಸ್ ಸಂಘಗಳನ್ನೂ (ಒಳಗೊಂಡಂತೆ) ಫೆಡರಲ್ ಸಂಘವಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು;
ಇ)	ಎಲ್ಲಾ ಸಂಘ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವ ಬಗ್ಗೆ ಸರ್ಕಾರದ ನಿಲುವೇನು ಹಾಗೂ ಪ್ರಸ್ತುತ ಅನುಸರಿಸುತ್ತಿರುವ ನಿಯಮಗಳೇನು? (ವಿವರ ನೀಡುವುದು)	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 28ಎ ರಲ್ಲಿ ಮೀಸಲಾತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. ಪ್ರಕರಣ 28ಎ(3) ರಡಿಯಲ್ಲಿ ಪ್ರತಿ ಸಹಕಾರ ಸಂಘದ ಮಂಡಳಿಯಲ್ಲಿ:- (i) ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗಳಿಗೆ ಒಂದು ಸ್ಥಾನವನ್ನು ಚುನಾವಣೆ ಮೂಲಕ ಭರ್ತಿಮಾಡತಕ್ಕದ್ದು ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗಳಿಗೆ ಒಂದು ಸ್ಥಾನವನ್ನು ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು.

		(ii) ಎರಡು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ. (iii) ಅಂಥ ರೀತಿಯಲ್ಲಿ ನಿಯಮಿಸಬಹುದಾದಂತೆ, ಹಿಂದುಳಿದ ವರ್ಗದವರಿಗೆ ಎರಡು ಸ್ಥಾನಗಳನ್ನು ಚುನಾವಣೆ ಮೂಲಕ ಭರ್ತಿಮಾಡತಕ್ಕದ್ದು. ಪರಂತು, ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಮತ್ತು ಅಂಥ ವರ್ಗದ ಅಥವಾ ಗುಂಪಿನ ಸದಸ್ಯರನ್ನು ಹೊಂದಿರುವ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯಲ್ಲಿ ಅಂಥ ಮೀಸಲಾತಿಯನ್ನು ಮಾಡತಕ್ಕದ್ದು.

ಸಂಖ್ಯೆ: ಸಿಒ 408 ಸಿಎಲ್‌ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ.ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್.[ದೇವನಹಳ್ಳಿ] ಇವರ ಪ್ರಶ್ನೆ ಸಂಖ್ಯೆ 1090 ರ ಪ್ರಶ್ನೆ ಅ]ಕ್ಕೆ ಉತ್ತರ

ಅನುಬಂಧ-1

ಕ್ರ. ಸಂ	ಜಿಲ್ಲೆಯ ಹೆಸರು	ಸಹಕಾರ ಸಂಘಗಳ ಸಂಖ್ಯೆ
1	ಬೆಂಗಳೂರು ನಗರ	2712
2	ಬೆಂಗಳೂರು ಗ್ರಾಮಾಂತರ	1112
3	ರಾಮನಗರ	1294
4	ತುಮಕೂರು	2248
5	ಚಿತ್ರದುರ್ಗ	1017
6	ಕೋಲಾರ	1574
7	ಚಿಕ್ಕಬಳ್ಳಾಪುರ	1549
8	ಶಿವಮೊಗ್ಗ	1244
9	ದಾವಣಗೆರೆ	1402
10	ಮೈಸೂರು	2442
11	ಮಂಡ್ಯ	2147
12	ಹಾಸನ	1930
13	ಕೊಡುಗು	337
14	ಮಂಗಳೂರು	858
15	ಚಿಕ್ಕಮಗಳೂರು	598
16	ಚಾಮರಾಜನಗರ	821
17	ಉಡುಪಿ	669
18	ಬೆಳಗಾಂ	5760
19	ಬಿಜಾಪುರ	1505
20	ಧಾರವಾಡ	1053
21	ಕಾರವಾರ	916
22	ಹಾವೇರಿ	1247
23	ಗದಗ	996
24	ಬಾಗಲಕೋಟೆ	1906
25	ಗುಲ್ಬರ್ಗಾ	1571
26	ರಾಯಚೂರು	1264
27	ಬೀದರ್	1275
28	ಬಳ್ಳಾರಿ	1512
29	ಕೊಪ್ಪಳ	789
30	ಯಾದಗಿರಿ	823
	ಒಟ್ಟು	**44571**

Assistant Director (Statistics)
(Research and Evaluation Section)
Office of the Registrar of Co-operative Societies
No. 1, Ali Askar Road, Bengaluru - 560 052

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ.ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್.[ದೇವನಹಳ್ಳಿ] ಇವರ ಪ್ರಶ್ನೆ ಸಂಖ್ಯೆ 1090 ರ ಪ್ರಶ್ನೆ ಅ)ಕ್ಕೆ ಉತ್ತರ

ಅನುಬಂಧ-2

ಕ್ರ ಸಂ	ಜಿಲ್ಲೆ	ಕೃಷಿ ಪತ್ತಿನ ಸಹಕಾರ ಸಂಘಗಳು	ತಾಲೂಕು ಮಟ್ಟದ ಸಹಕಾರ ಸಂಘಗಳು	ಜಿಲ್ಲಾ ಮಟ್ಟದ ಸಹಕಾರ ಸಂಘಗಳು	ಯೂನಿಯನ್‌ಗಳು	ಬ್ಯಾಂಕುಗಳು	ರಾಜ್ಯ ಮಟ್ಟದ ಒಕ್ಕೂಟಗಳು ಹಾಗೂ ಮಂಡಳಿಗಳು
1	ಬೆಂಗಳೂರು ನಗರ	42	107	65	1	46	23
2	ಬೆಂಗಳೂರು ಗ್ರಾಮಾಂತರ	78	59	6	0	2	2
3	ರಾಮನಗರ	100	50	5	0	2	0
4	ತುಮಕೂರು	236	157	33	2	9	0
5	ಚಿತ್ರದುರ್ಗ	165	0	21	1	0	1
6	ಕೋಲಾರ	104	89	17	1	1	1
7	ಚಿಕ್ಕಬಳ್ಳಾಪುರ	158	86	1	1	6	0
8	ಶಿವಮೊಗ್ಗ	172	105	17	2	17	2
9	ದಾವಣಗೆರೆ	176	0	16	1	16	0
10	ಮೈಸೂರು	201	169	59	1	1	2
11	ಮಂಡ್ಯ	232	84	45	1	11	0
12	ಹಾಸನ	226	87	25	1	6	2
13	ಕೊಡುಗು	73	25	29	1	8	0
14	ಮಂಗಳೂರು	117	63	20	1	1	1
15	ಚಿಕ್ಕಮಗಳೂರು	126	57	20	1	12	0
16	ಚಾಮರಾಜನಗರ	100	72	6	1	0	0
17	ಉಡುಪಿ	54	64	4	2	0	0
18	ಬೆಳಗಾಂ	1226	411	68	3	43	0
19	ಬಿಜಾಪುರ	289	94	27	3	21	0
20	ಧಾರವಾಡ	164	104	8	1	16	0
21	ಕಾರವಾರ	175	74	25	1	11	0
22	ಹಾವೇರಿ	231	78	8	1	11	0
23	ಗದಗ	175	87	6	1	10	0
24	ಬಾಗಲಕೋಟೆ	278	140	21	1	16	0
25	ಗುಲ್ಬರ್ಗಾ	217	144	22	1	10	0
26	ರಾಯಚೂರು	138	63	15	1	9	0
27	ಬೀದರ್	184	80	10	1	4	2
28	ಬಳ್ಳಾರಿ	191	78	21	1	4	0
29	ಕೊಪ್ಪಳ	121	67	10	1	8	0
30	ಯಾದಗಿರಿ	102	42	4	0	4	0
	ಒಟ್ಟು	5851	2736	634	34	305	36

Assistant Director (Statistics)
(Research and Evaluation ...)
... the Registrar of Cooperative ...
1, Ali Askar Road, Bengaluru - 560 ...

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 403 ಸಿಎಲ್ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಲಿಂಗೇಶ್ ಕೆ.ಎಸ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1032 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಲಿಂಗೇಶ್ ಕೆ.ಎಸ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1032 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha HC

(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಲಿಂಗೇಶ್ ಕೆ. ಎಸ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1032

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರಸಂ	ಪ್ರಶ್ನೆ	ಉತ್ತರ
ಅ)	2017-18, 2018-19 ಹಾಗೂ 2019-20 ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಇಲ್ಲಿ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು ನಡೆಸಿರುವ ಅವ್ಯವಹಾರಗಳ ಬಗ್ಗೆ ದೂರು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರತಿ ಅಂಶಗಳನ್ನು ಲಿಖಿತವಾಗಿ ತಿಳಿಸುವುದು.	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಇಲ್ಲಿ ನಡೆದಿರುವ ಅವ್ಯವಹಾರಗಳು ದೂರು ಅರ್ಜಿಗಳ ಮೂಲಕ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ದೂರು ಅರ್ಜಿಗಳಲ್ಲಿನ ಅಂಶಗಳು ಈ ಕೆಳಕಂಡಂತಿರುತ್ತವೆ. 1. 26 ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲ & ಮುಂಗಡಗಳು, 2. 2013-14 ರಿಂದ 2018-19 ನೇ ಅವಧಿಯಲ್ಲಿ ಬ್ಯಾಂಕಿನ ಹೂಡಿಕೆ ಮತ್ತು ಭದ್ರತಾ ಪತ್ರಗಳ ಖರೀದಿಯ ವ್ಯವಹಾರ 3. ಶ್ರೀಮತಿ ಉಮಾ ಸುರೇಶ್ ಮತ್ತು ಅನೇಕಲ್ ತಿಮ್ಮಯ್ಯ ಚಾರಿಟಬಲ್ ಟ್ರಸ್ಟ್, ಬೆಂಗಳೂರು ಇವರುಗಳಿಗೆ ಯೋಜನೆಯಡಿ ಏಕಕಾಲಿಕ ಸಾಲ ತೀರುವಳಿ ಯೋಜನೆಯಡಿ ಸಾಲ ತೀರುವಳಿ, 4. ರಿಯಲ್ ಎಸ್ಟೇಟ್, ಸೀಗಡಿ ಮೀನಿನ ಉತ್ಪಾದನಾ ಘಟಕಗಳು ಸೇರಿದಂತೆ 11 ಜನ/ಸಂಸ್ಥೆಗಳಿಗೆ ನೀಡಿರುವ ಯೋಜನಾಬದ್ಧ ಸಾಲಗಳು, 5. ಕೋರ್ ಬ್ಯಾಂಕಿಂಗ್ ಸಾಫ್ಟ್‌ವೇರ್ ಖರೀದಿ, 6. ಸೇವಾ ಜ್ಯೇಷ್ಠತೆಯನ್ನು ಪರಿಗಣಿಸದೆ ಬ್ಯಾಂಕಿನ ಸಿಬ್ಬಂದಿಗಳಿಗೆ ಪದೋನ್ನತಿ ನೀಡಿರುವುದು, 7. ಕಂಪ್ಯೂಟರ್ ತಜ್ಞರಲ್ಲದ ಬಿ.ಕಾಂ. ಪದವೀಧರರನ್ನು ಸಾಫ್ಟ್‌ವೇರ್ ನಿರ್ವಹಣೆಗೆ ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡಿರುವುದು, 8. ಬ್ಯಾಂಕಿನ ಸೇವೆಯಿಂದ ವಜಾಗೊಂಡ ಶ್ರೀಮತಿ ಲಕ್ಷ್ಮೀದೇವಿ ಮತ್ತು ಇತರರ ನೌಕರರಿಗೆ ವೇತನ ನಿವೃತ್ತಿ ಸೌಲಭ್ಯ ಪಾವತಿಸಿರುವುದು. 9. 2016 ನೇ ಸಾಲಿನಲ್ಲಿ ಸುಮಾರು 100 ದ್ವಿತೀಯ ದರ್ಜೆ ಸಹಾಯಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಮತ್ತು ಸ್ವಜನ ಪಕ್ಷಪಾತ. 10. ಸುಸ್ತಿ ಸಾಲಗಳನ್ನು ಪುನರುಜ್ಜೀವನ ಸಾಲವಾಗಿ ಪರಿವರ್ತಿಸಿರುವುದು

ಆ)	ಮೇಲ್ಕಂಡ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಆಡಳಿತ ಮಂಡಳಿಯ ಅವ್ಯವಹಾರದ ಬಗ್ಗೆ ನಬಾರ್ಡ್ ಹಾಗೂ ಆರ್.ಬಿ.ಐ ನಿಂದ ಪತ್ರಗಳು ಬಂದಿದ್ದು, ಆ ಪತ್ರಗಳ ಆಧಾರದ ಮೇಲೆ ಸಹಕಾರ ಇಲಾಖೆ ನಿಬಂಧಕರು, ಸರ್ಕಾರದ ಕಾರ್ಯದರ್ಶಿಗಳಿಗೆ ಮುಂದಿನ ಕ್ರಮವಿಡುವ ಕುರಿತು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);	ಹೌದು. ಈ ಕುರಿತು ಸಹಕಾರ ಸಂಘಗಳ ನಿಬಂಧಕರು, ಸರ್ಕಾರಕ್ಕೆ ಅರೆ ಸರ್ಕಾರಿ ಪತ್ರ ಸಂಖ್ಯೆ: ಆರ್‌ಸಿಎಸ್/ಪಿಎಸ್/ಸಿಆರ್‌ಡಿ/ಕೆಎಂಸಿ-4/90/2019-20. ದಿನಾಂಕ:28-10-2019 ರಲ್ಲಿ ಪತ್ರ ಬರೆದಿದ್ದು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಈ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಕಲಂ 64 ರ ಮುಂದುವರೆದ ವಿಚಾರಣೆಯನ್ನು ಮಾಡಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾನೂನು ಕೋಶ, ನಿಬಂಧಕರ ಕಛೇರಿ ಇವರನ್ನು ಅಪರ ನಿಬಂಧಕರು (ಪತ್ತು) ಇವರು ದಿ:17.10.2020 ರಂದು ಆದೇಶಿಸಿರುತ್ತಾರೆ. ಕಲಂ 64ರ ಮುಂದುವರೆದ ವಿಚಾರಣಾ ವರದಿಯನ್ನು ಸಲ್ಲಿಸಲು ಸಹಕಾರ ಸಂಘಗಳ ನಿಬಂಧಕರಿಗೆ ದಿ:04-11-2020 ರಂದು ಸೂಚಿಸಲಾಗಿದೆ. ವರದಿಯು ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.
ಇ)	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವ್ಯವಸ್ಥಾಪಕ ನಿರ್ದೇಶಕರು ಸಹಕಾರ ಇಲಾಖೆಯ ಕಾರ್ಯದರ್ಶಿಗಳ ಕಛೇರಿಯಲ್ಲಿ ವಿಶೇಷ ಕರ್ತವ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಬಾರ್ಡ್ ಹಾಗೂ ಆರ್.ಬಿ.ಐ ಬಂದ ಪತ್ರಗಳ ನಿರ್ದೇಶನಗಳ ಮೇರೆಗೆ ಸದರಿ ಪ್ರಕರಣವನ್ನು ಹೆಚ್ಚಿನ ವಿಚಾರಣೆಗೆ ಸಿ.ಬಿ.ಐ ಗೆ ವಹಿಸುವ ಕುರಿತು ಸರ್ಕಾರದ ಹಂತದಿಂದ ನಿರ್ದೇಶನವನ್ನು ಲಿಖಿತವಾಗಿ ಸ್ವೀಕರಿಸಿದ್ದರೂ ಸಹ ಸದರಿ ನಿರ್ದೇಶನದ ರೀತ್ಯಾ ಕ್ರಮವಹಿಸದೇ ಸದರಿ ಪತ್ರವನ್ನು ಮುಚ್ಚಿಟ್ಟು ಸರ್ಕಾರಕ್ಕೆ ಮೋಸ ಹಾಗೂ ಕರ್ತವ್ಯಲೋಪವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ಎಲ್ಲಾ ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು).	ಇಲ್ಲ.

ಸಂಖ್ಯೆ: ಸಿಒ 403 ಸಿಎಲ್‌ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 400 ಸಿಎಲ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 997 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 997 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha HC

(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಕುಮಾರಸ್ವಾಮಿ ಹೆಚ್.ಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 997

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2017-18, 2018-19 ಮತ್ತು 2019-20ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಇಲ್ಲಿ ನಡೆದಿರುವ ಕೋಟ್ಯಾಂತರ ರೂ.ಗಳ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು;	ಹೌದು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಇಲ್ಲಿ ನಡೆದಿರುವ ಅವ್ಯವಹಾರ ದೂರು ಅರ್ಜಿಗಳ ಮೂಲಕ ಸರ್ಕಾರದ ಗಮನಕ್ಕೆ ಬಂದಿದ್ದು, ದೂರು ಅರ್ಜಿಗಳಲ್ಲಿನ ಅಂಶಗಳನ್ನು ಬ್ಯಾಂಕಿನ ದಾಖಲಾತಿಗಳೊಂದಿಗೆ ಪರಿಶೀಲಿಸಲು ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು), ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ), ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರನ್ನೊಳಗೊಂಡ ತಂಡವನ್ನು ನಿಯೋಜಿಸಲಾಗಿತ್ತು. ಪರಿಶೀಲನಾ ತಂಡವು ದೂರು ಅರ್ಜಿಗಳಲ್ಲಿನ ಪ್ರತಿಯೊಂದು ಅಂಶಗಳನ್ನು ಬ್ಯಾಂಕಿನ ದಾಖಲಾತಿಗಳೊಡನೆ ಪರಿಶೀಲಿಸಿ, ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರು ಅರ್ಜಿಗಳಲ್ಲಿನ ಕೆಲವೊಂದು ಅಂಶಗಳು ಸಾಬೀತಾಗಿದ್ದು, ಉನ್ನತ ಮಟ್ಟದ ತನಿಖೆಗೆ ಒಳಪಡಿಸಿದರೆ ಸತ್ಯಾಂಶ ಪಡೆಯಲು ಸಾದ್ಯವಾಗುತ್ತದೆಯೆಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಪರಿಶೀಲನಾ ತಂಡದ ವರದಿಯನ್ನಾಧರಿಸಿ, ಈ ಕೆಳಕಂಡ 10 ಅಂಶಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆ ನಡೆಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ದಿನಾಂಕ:08-07-2019 ರಂದು ಆದೇಶಿಸಲಾಗಿದ್ದು, ಈ ಕೆಳಕಂಡ ಅಂಶಗಳ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ತಿಳಿಸಲಾಗಿತ್ತು. (1) 26 ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲ & ಮುಂಗಡಗಳು, (2) 2013-14 ರಿಂದ 2018-19 ನೇ ಅವಧಿಯಲ್ಲಿ ಬ್ಯಾಂಕಿನ ಹೂಡಿಕೆ ಮತ್ತು ಭದ್ರತಾ ಪತ್ರಗಳ ಖರೀದಿಯ ವ್ಯವಹಾರ (3) ಶ್ರೀಮತಿ ಉಮಾ ಸುರೇಶ್ ಮತ್ತು ಅನೇಕಲ್ ತಿಮ್ಮಯ್ಯ ಚಾರಿಟಬಲ್ ಟ್ರಸ್ಟ್, ಬೆಂಗಳೂರು ಇವರುಗಳಿಗೆ ಯೋಜನೆಯಡಿ ಏಕಕಾಲಿಕ ಸಾಲ ತೀರುವಳಿ ಯೋಜನೆಯಡಿ ಸಾಲ ತೀರುವಳಿ, (4) ರಿಯಲ್ ಎಸ್ಟೇಟ್, ಸೀಗಡಿ ಮೀನಿನ ಉತ್ಪಾದನಾ ಘಟಕಗಳು

		ಸೇರಿದಂತೆ 11 ಜನ/ಸಂಸ್ಥೆಗಳಿಗೆ ನೀಡಿರುವ ಯೋಜನಾಬದ್ಧ ಸಾಲಗಳು, (5) ಕೋರ್ ಬ್ಯಾಂಕಿಂಗ್ ಸಾಫ್ಟ್‌ವೇರ್ ಖರೀದಿ, (6) ಸೇವಾ ಜ್ಯೇಷ್ಠತೆಯನ್ನು ಪರಿಗಣಿಸದೆ ಬ್ಯಾಂಕಿನ ಸಿಬ್ಬಂದಿಗಳಿಗೆ ಪದೋನ್ನತಿ ನೀಡಿರುವುದು, (7) ಕಂಪ್ಯೂಟರ್ ತಜ್ಞರಲ್ಲದ ಬಿ.ಕಾಂ. ಪದವೀಧರರನ್ನು ಸಾಫ್ಟ್‌ವೇರ್ ನಿರ್ವಹಣೆಗೆ ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡಿರುವುದು, (8)ಬ್ಯಾಂಕಿನ ಸೇವೆಯಿಂದ ವಜಾಗೊಂಡ ಶ್ರೀಮತಿ ಲಕ್ಷ್ಮೀದೇವಿ ಮತ್ತು ಇತರರ ನೌಕರರಿಗೆ ವೇತನ ನಿವೃತ್ತಿ ಸೌಲಭ್ಯ ಪಾವತಿಸಿರುವುದು, (9) 2016 ನೇ ಸಾಲಿನಲ್ಲಿ ಸುಮಾರು 100 ದ್ವಿತೀಯ ದರ್ಜೆ ಸಹಾಯಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಮತ್ತು ಸ್ವಜನ ಪಕ್ಷಪಾತ, (10) ಸುಸ್ತಿ ಸಾಲಗಳನ್ನು ಪುನರುಜ್ಜೀವನ ಸಾಲವಾಗಿ ಪರಿವರ್ತಿಸಿರುವುದು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64ರ ವಿಚಾರಣಾ ವರದಿಯಲ್ಲಿ ವಿಚಾರಣೆಗೆ ಒಳಪಡಿಸಿ ದಿ:05/12/2019 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯಲ್ಲಿ ಎಲ್ಲಾ 10 ಆರೋಪಗಳು ಸಾಬೀತಾಗಿಲ್ಲವೆಂದು ವಿಚಾರಣಾಧಿಕಾರಿಗಳು ತಿಳಿಸಿದ್ದು, ಪ್ರಾಥಮಿಕ ತನಿಖಾ ತಂಡದ ವರದಿ ಹಾಗೂ ಕಲಂ 68 ರ ಆದೇಶದಲ್ಲಿ ಸ್ಪಷ್ಟವಾಗಿ ಆರೋಪಗಳು ಸಾಬೀತಾಗಿರುವ ಬಗ್ಗೆ ಪ್ರಸ್ತಾಪಿಸಿದ್ದು, ವಿಚಾರಣಾಧಿಕಾರಿ ಆರೋಪ ಸಾಬೀತಾಗಿಲ್ಲವೆಂದು ವರದಿಸಿರುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿದ್ದು, ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ. • ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64(4–ಎ) ಪ್ರಕಾರ ಕ್ರಮಗಳನ್ನು ಕೈಗೊಳ್ಳಲು ಕಳುಹಿಸಿ, ಅಪೆಕ್ಸ್ ಬ್ಯಾಂಕ್‌ನಿಂದ ಅನುಪಾಲನಾ ವರದಿಯನ್ನು ಪಡೆದ ನಂತರ ಕಲಂ 68 ರ ಆದೇಶ ಹೊರಡಿಸಬೇಕಾಗಿರುತ್ತದೆ. ಆದರೆ ಕಲಂ 64(4) ಮತ್ತು ಕಲಂ 64(4–ಎ) ರಡಿಯಲ್ಲಿ ಕ್ರಮವಿಟ್ಟಿರುವುದಿಲ್ಲ. • ಸದರಿ ಅವಧಿಯಲ್ಲಿ ಅಪೆಕ್ಸ್ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸಿದ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಂದ ಪ್ರಮಾಣೀಕರಿಸಿದ ಲಿಖಿತ ಹೇಳಿಕೆ, ಪ್ರಕರಣವಾರು ಸಂಬಂಧಪಟ್ಟ ದಾಖಲೆಗಳನ್ನು ಪಡೆದಿರುವುದು ಕಂಡು ಬಂದಿರುವುದಿಲ್ಲ. • ನಬಾರ್ಡ್ ಸುತ್ತೋಲೆ, ಸಾಲದ ನಿಯಮಗಳು, ಸಕ್ಕರೆ ಸಾಲದ ನಿಯಮಗಳು ಪಡೆದಿರುವ ಭದ್ರತೆ ಸಾಲ ವಸೂಲಾತಿ, ಬ್ಯಾಂಕಿನ ಬೈಲಾ ಆಡಳಿತ ಮಂಡಳಿ ಠರಾವುಗಳು ಮತ್ತು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು

		ಮನಃ ಪರಿಶೀಲಿಸಿ ಸಾಲ ಪಡೆದಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳ ಎಲ್ಲಾ ಪ್ರಕರಣಗಳನ್ನು ಪರಿಶೀಲಿಸಿ ದಾಖಲೆಗಳೊಂದಿಗೆ ಸ್ಪಷ್ಟವಾಗಿ ಆರೋಪ ದೃಢಪಟ್ಟಿರುವ ಹಾಗೂ ದೃಢಪಡದಿರುವ ಬಗ್ಗೆ ವಿಚಾರಣಾಧಿಕಾರಿ ನಮೂದಿಸಿ ಜವಾಬ್ದಾರಿ ನಿಗಧಿಪಡಿಸಲು ಮುಂದುವರೆದ ಹೆಚ್ಚುವರಿ ವಿಚಾರಣೆ ಅಗತ್ಯವಿರುವುದನ್ನು ಮನಗಂಡು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68 ರಡಿ ಈ ಹಿಂದೆ ಹೊರಡಿಸಿದ್ದ ಆದೇಶವನ್ನು ಹಿಂಪಡೆದು ಮುಂದುವರೆದ ವಿಚಾರಣೆಗೆ ಶ್ರೀ ಎಂ.ಡಿ.ನರಸಿಂಹಮೂರ್ತಿ, ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ಕೋಶ) ಕೇಂದ್ರ ಕಛೇರಿ ಬೆಂಗಳೂರು ಇವರನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣಾಧಿಕಾರಿಯಾಗಿ ನೇಮಿಸಿ ಆದೇಶಿಸಿ ದಿನಾಂಕ:17-10-2020 ರಂದು ಆದೇಶ ಹೊರಡಿಸಲಾಗಿದೆ.
ಆ)	ಮೇಲ್ಕಂಡ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಇಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ದೂರುಗಳು ಸರ್ಕಾರಕ್ಕೆ ಸ್ವೀಕೃತವಾಗಿದೆಯೇ; (ದೂರುದಾರರ ಹೆಸರು ಹಾಗೂ ದೂರಿನ ವಿವರ ನೀಡುವುದು)	ಹೌದು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತಂತೆ ಈ ಕೆಳಕಂಡ ದೂರುದಾರರು, ಸಾರ್ವಜನಿಕರು ಮತ್ತು ಕಛೇರಿಗಳಿಂದ ದೂರುಗಳು ಸ್ವೀಕರಿಸಲ್ಪಟ್ಟಿವೆ. 1. ಮೂರ್ತಿ, ವಿಜಯನಗರ, ಬೆಂಗಳೂರು ಇವರು ಸರ್ಕಾರಕ್ಕೆ , ನಬಾರ್ಡ್ ಮತ್ತು ನಿಬಂಧಕರಿಗೆ ನೀಡಿರುವ ದೂರು ಅರ್ಜಿಗಳು 2. ಅಪೆಕ್ಸ್ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಇವರು ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯಕ್ಕೆ ನೀಡಿರುವ ದೂರು ಅರ್ಜಿ ಆರ್.ಬಿ.ಐ. ನಿಂದ ಈ ಕಛೇರಿಗೆ ಬಂದಿರುತ್ತದೆ. 3. ಅಪೆಕ್ಸ್ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಇವರು ಸೂಪರಿಟೆಂಡೆಂಟ್ ಆಫ್ ಪೊಲೀಸ್, ಸಿಬಿಐ, ಎಸಿಬಿ, ಬೆಂಗಳೂರು ಇವರ ಕಛೇರಿಗೆ ನೀಡಿರುವ ಪತ್ರ 4. ಶ್ರೀ ಎಸ್.ಆರ್ ನವೀನ್ ಕುಮಾರ್, ವಕೀಲರು ಮಂಡ್ಯ ಜಿಲ್ಲೆ 5. ಶ್ರೀ ಪ್ರದೀಪ್ ಕುಮಾರ್ ಎಸ್.ಪಿ, ವಕೀಲರು ಬೆಂಗಳೂರು-72 6. ಶ್ರೀ ಎಂ.ಆರ್. ನವೀನ್ ವಕೀಲರು ಬೆಂಗಳೂರು-02 7. ಶ್ರೀ ರಮೇಶ್ ಆರ್. ವಕೀಲರು ಬೆಂಗಳೂರು-78 8. ಶ್ರೀ ಪಿ. ಶಿವರೆಡ್ಡಿ ಬಿನ್ ಲೇ॥ ಪಾಪಣ್ಣ, ಅಧ್ಯಕ್ಷರು ವ್ಯವಸಾಯ ಸೇವಾ ಸಹಕಾರ ಸಂಘ ನಿ, ಇ.ತಿಮ್ಮಸಂದ್ರ ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಹಾಗೂ ಸಂತೋಷ್ ಎಂ ಮೇತ್ರಿ ಬೆಳಗಾವಿ

		ದೂರುದಾರರು ನೀಡಿರುವ ದೂರಿನ ವಿವರಗಳು ಪ್ರಶ್ನೆ 'ಅ' ರಲ್ಲಿ ನಮೂದಿಸಲಾಗಿದೆ.
ಇ)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಇಲ್ಲಿ ನಡೆದಿರುವ ಅವ್ಯವಹಾರದ ಕುರಿತು ದಾಖಲಾತಿ ಪರಿಶೀಲನೆಗೆ ಸರ್ಕಾರದ ವತಿಯಿಂದ ತನಿಖಾ ತಂಡ ರಚಿಸಲಾಗಿತ್ತೇ; ರಚಿಸಿದ್ದರೆ, ತಂಡದಿಂದ ಪರಿಶೀಲನಾ ವರದಿ ಪಡೆಯಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು, ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತಂತೆ ತನಿಖೆ ನಡೆಸಲು ಅಧಿಕಾರಿಗಳ ತಂಡ ರಚಿಸಲಾಗಿದ್ದು, ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆ.
ಈ)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಇಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ದಾಖಲಾತಿ ಪರಿಶೀಲನೆಗೆ ಸರ್ಕಾರದ ವತಿಯಿಂದ ನಿಯೋಜಿಸಲಾಗಿದ್ದ ಅಧಿಕಾರಿಗಳ ವರದಿಯ ಮೇಲೆ ಯಾವುದಾದರೂ ಶಾಸನಬದ್ಧ ವಿಚಾರಣೆ ನಡೆದಿದೆಯೇ; (ತನಿಖಾಧಿಕಾರಿಗಳ ಹೆಸರು ಮತ್ತು ವಿಳಾಸದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು	ಹೌದು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಇಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ದಾಖಲಾತಿ ಪರಿಶೀಲನೆಗೆ ನಿಬಂಧಕರ ವತಿಯಿಂದ ನಿಯೋಜಿಸಲಾಗಿದ್ದ ಅಧಿಕಾರಿಗಳ ತಂಡವು ಸಲ್ಲಿಸಿದ್ದ ವರದಿಯಲ್ಲಿ ದೂರು ಅರ್ಜಿಗಳಲ್ಲಿನ ಕೆಲವೊಂದು ಅಂಶಗಳು ಸಾಬೀತಾಗಿದ್ದು, ಉನ್ನತ ಮಟ್ಟದ ತನಿಖೆಗೆ ಒಳಪಡಿಸಿದರೆ ಸತ್ಯಾಂಶ ಪಡೆಯಲು ಸಾದ್ಯವಾಗುತ್ತದೆಯೆಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಪರಿಶೀಲನಾ ತಂಡದ ವರದಿಯನ್ನಾಧರಿಸಿ, ಹೆಚ್ಚಿನ ತನಿಖೆಯ ಅವಶ್ಯಕತೆ ಕಂಡುಬಂದ ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆ ಜರುಗಿಸಲು ದಿ:08/07/2019 ರಂದು ಆದೇಶ ಹೊರಡಿಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೆಂಗಳೂರು, ಪ್ರಾಂತ ಬೆಂಗಳೂರು (ಶ್ರೀ ಆರ್ ಲೋಕೇಶ್ ಇವರು ಜಂಟಿ ನಿಬಂಧಕರಾಗಿದ್ದರು) ರವರನ್ನು ಕಲಂ 64 ರಡಿ ವಿಚಾರಣಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿತ್ತು. ತದನಂತರ ಸದರಿ ಅಧಿಕಾರಿಯ ವರ್ಗಾವಣೆಯಿಂದ ತೆರವಾದ ಹುದ್ದೆಗೆ ಸ್ಥಳ ನಿಯುಕ್ತಿಗೊಂಡ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೆಂಗಳೂರು ಪ್ರಾಂತ ಬೆಂಗಳೂರು (ಶ್ರೀ ಎಂ.ಡಿ ನರಸಿಂಹಮೂರ್ತಿ ಇವರು ಜಂಟಿ ನಿಬಂಧಕರಾಗಿದ್ದರು) ಇವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆ ಕೈಗೊಂಡು ವಿಚಾರಣಾ ವರದಿಯನ್ನು ದಿ:05/12/2019 ರಂದು ಸಲ್ಲಿಸಿರುತ್ತಾರೆ.
ಉ)	ಸದರಿ ಅವ್ಯವಹಾರದ ಕುರಿತು ಶಾಸನಬದ್ಧ ತನಿಖೆಗೆ ಆದೇಶಿಸಲಾಗಿದೆಯೇ; ಆದೇಶಿಸಿದ್ದರೆ ತನಿಖೆ ಯಾವ ಹಂತದಲ್ಲಿರುತ್ತದೆ. (ಸಂಪೂರ್ಣ ಮಾಹಿತಿ ನೀಡುವುದು)	ಹೌದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ಮುಂದುವರೆದ ವಿಚಾರಣೆ ಪ್ರಗತಿಯಲ್ಲಿದೆ. ಉತ್ತರ 'ಅ' ರಲ್ಲಿ ಸಂಪೂರ್ಣ ವಿವರ ನೀಡಲಾಗಿದೆ.

ಊ)	ಈ ಅವಧಿಯಲ್ಲಿನ ಅವ್ಯವಹಾರದ ಕುರಿತು ಸರ್ಕಾರದಿಂದ ನಿಯೋಜಿಸಲಾಗಿರುವ ಅಧಿಕಾರಿಗಳು ಕಲಂ 64 ಮತ್ತು 68ರಡಿ ನೀಡಿರುವ ವರದಿಯ ಆಧಾರದಲ್ಲಿ ಆರೋಪಿತರ ವಿರುದ್ಧ ಸರ್ಕಾರದ ವತಿಯಿಂದ ಶಿಸ್ತು ಕ್ರಮ ಕೈಗೊಳ್ಳಲಾಗಿದೆಯೇ; ಶಿಸ್ತು ಕ್ರಮ ಕೈಗೊಳ್ಳದಿದ್ದರೆ ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಈ ಹಿಂದೆ ಅಂದರೆ ದಿನಾಂಕ:05-12-2019 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ವಿಚಾರಣಾಧಿಕಾರಿ ಸಲ್ಲಿಸಿದ್ದ ವಿಚಾರಣಾ ವರದಿಯ ಮೇಲೆ ದಿನಾಂಕ:14-05-2020 ಮತ್ತು 25-08-2020 ರಂದು ಹೊರಡಿಸಲಾಗಿದ್ದ ಕಲಂ 68 ರ ಆದೇಶಗಳನ್ನು ಹಿಂಪಡೆದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ಮುಂದುವರೆದ ಹೆಚ್ಚುವರಿ ವಿಚಾರಣೆಗೆ ದಿನಾಂಕ:17-10-2020 ರಂದು ಆದೇಶಿಸಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತದೆ.
ಋ)	ಈ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ದಲ್ಲಿ ಅವ್ಯವಹಾರ ನಡೆದಿಲ್ಲವೆಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ಅವ್ಯವಹಾರ ನಡೆದಿದೆಯೇ ಅಥವಾ ಇಲ್ಲವೆ ಎಂಬುದು ಕಲಂ 64 ರ ಮುಂದುವರೆದ ವಿಚಾರಣೆ ಪ್ರಗತಿಯಲ್ಲಿದ್ದು, ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಸಂಖ್ಯೆ: ಸಿಒ 400 ಸಿಎಲ್ಎಸ್ 2020

ಎಸ್.ಟಿ. ಸೋಮಶೇಖರ್

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 406 ಸಿಎಲ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.12.2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ ಹೆಚ್.ಪಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1047 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ ಹೆಚ್.ಪಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1047 ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha H.C
(ರಾಧ. ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಮಂಜುನಾಥ ಹೆಚ್.ಪಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1047

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸಹಕಾರ ಬ್ಯಾಂಕ್‌ಗಳಲ್ಲಿ ರೈತರು ಸಾಲ ಪಡೆಯಲು ಎಲ್ಲಾ ದಾಖಲೆಗಳನ್ನು ನೀಡಿದಾಗ್ಯೂ ಸರಿಯಾದ ಸಮಯಕ್ಕೆ ಸಾಲ ಸೌಲಭ್ಯ ಪಡೆಯಲಾಗದೆ ಬ್ಯಾಂಕುಗಳಿಗೆ ಅಲೆದಾಡುವಂತಾಗಿ ತೊಂದರೆ ಅನುಭವಿಸುತ್ತಿರುವುದು ಗಮನಕ್ಕೆ ಬಂದಿದೆಯೇ:	ಹೌದು.
ಆ)	ಬಂದಿದಲ್ಲಿ, ಸರ್ಕಾರವು ಈ ರೈತರ ಸಮಸ್ಯಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳೇನು:	ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಿ ರೈತರಿಗೆ ಸಕಾಲದಲ್ಲಿ ಸುಲಭವಾಗಿ ಸಾಲ ದೊರೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಜಿಲ್ಲಾ ಸಹಕಾರ ಬ್ಯಾಂಕುಗಳು 24.80 ಲಕ್ಷ ರೈತರಿಗೆ ರೂ.15,300 ಕೋಟಿಗಳ ಕೃಷಿ ಸಾಲ ನೀಡುಲು ಗುರಿ ನಿಗದಿಪಡಿಸಿದ್ದು, ಈ ಗುರಿಗೆ ತಕ್ಕಂತೆ ಜಿಲ್ಲೆಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಮತ್ತು ಹೊಸ ಸದಸ್ಯರಿಗೆ ಪ್ರತೀ ಮಾಹೆಯಾನ ಗುರಿ ನಿಗದಿಪಡಿಸಿ ಸಾಲ ವಿತರಿಸಲು ಸೂಚನೆ ನೀಡಲಾಗಿದೆ. 2. ಸಹಕಾರ ಸಂಘಗಳು ರೈತರಿಗೆ ಸುಲಭವಾಗಿ ಅರ್ಜಿ ದೊರೆಯುವಂತೆ ಕ್ರಮ ವಹಿಸಲು ಮತ್ತು ಅರ್ಜಿ ವಿಲೇವಾರಿ ಮಾಡಿದ ರಿಜಿಸ್ಟರ್ ಅನ್ನು ಸಂಘದಲ್ಲಿ ನಿರ್ವಹಿಸಲು ಸೂಚನೆ ನೀಡಲಾಗಿದೆ. ಮಾದರಿ ಅರ್ಜಿ ನಮೂನೆಗಳನ್ನು ಸಹಕಾರ ಇಲಾಖೆಯ ವೆಬ್ ಸೈಟ್ ನಲ್ಲಿ ಸುತ್ತೋಲೆಯೊಂದಿಗೆ ನೀಡಲಾಗಿದೆ. 3. ಕಿಸಾನ್ ಸನ್ಮಾನ್ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿದ ಎಲ್ಲಾ ರೈತರ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನೀಡಿ, ಈ ರೈತರನ್ನು ಸಂಪರ್ಕಿಸಿ ಸಾಲ ವಿತರಿಸಲು ಸೂಚಿಸಲಾಗಿದೆ. 4. ಬೆಳೆ ಸಾಲ, ಪಶುಸಂಗೋಪನೆಗೆ ದುಡಿಯುವ ಬಂಡವಾಳ ಸಾಲ ನೀಡುವ ಪ್ರಗತಿಯನ್ನು ಪ್ರತೀ ದಿನ ನಬಾರ್ಡ್ ವೆಬ್‌ಸೈಟ್‌ನಲ್ಲಿ ಅಳವಡಿಸಿ ಈ ಕುರಿತು ಪ್ರತೀ ದಿನದ ಪ್ರಗತಿಯನ್ನು ನಬಾರ್ಡ್ ಪರಿಶೀಲಿಸಲಾಗುತ್ತಿದೆ.

ಇ)	ರಾಜ್ಯದಲ್ಲಿ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಸಹಾಯಧನ ಸಹಿತ ಮತ್ತು ಸಹಾಯಧನ ರಹಿತ ಸಾಲ ಸೌಲಭ್ಯ ನೀಡಲು ಇರುವಂತಹ ವಿವಿಧ ಯೋಜನೆಗಳು ಯಾವುವು? (ವಿವರವಾದ ಮಾಹಿತಿಗಳನ್ನು ನೀಡುವುದು)	ರಾಜ್ಯದಲ್ಲಿ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಸಹಾಯಧನ ಸಹಿತ ಸಾಲ ಸೌಲಭ್ಯ ನೀಡಲು ಇರುವಂತಹ ಯೋಜನೆಗಳು ಈ ಕೆಳಗಿನಂತಿರುತ್ತವೆ. 1. **ಶೂನ್ಯ ಬಡ್ಡಿ ದರಲ್ಲಿ ಬೆಳೆ ಸಾಲ ವಿತರಣೆ ಯೋಜನೆ;** ಈ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಡಿಸಿಸಿ ಬ್ಯಾಂಕುಗಳಿಂದ ಒಂದು ಕುಟುಂಬಕ್ಕೆ ರೂ.3.00 ಲಕ್ಷಗಳ ವರೆಗಿನ ಬೆಳೆ ಸಾಲವನ್ನು ನಿವ್ವಳ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. 2. **ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆ :** ಈ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕುಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಿಂದ ಒಂದು ಕುಟುಂಬಕ್ಕೆ ರೂ.10.00 ಲಕ್ಷಗಳ ವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ನಿವ್ವಳ ಶೇ.3 ರ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. 3. **ಶೂನ್ಯ ಬಡ್ಡಿದರಲ್ಲಿ ಪಶು ಸಂಗೋಪನೆ ದುಡಿಯುವ ಬಂಡವಾಳ ಸಾಲ ವಿತರಣೆ ಯೋಜನೆ :** ಈ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಡಿಸಿಸಿ ಬ್ಯಾಂಕುಗಳಿಂದ ಒಂದು ಕುಟುಂಬಕ್ಕೆ ರೂ.2.00 ಲಕ್ಷಗಳ ವರೆಗಿನ ಸಾಲವನ್ನು ನಿವ್ವಳ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. ರಾಜ್ಯದಲ್ಲಿ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಸಹಾಯಧನ ರಹಿತ ಸಾಲ ಸೌಲಭ್ಯ ನೀಡಲು ಯಾವುದೇ ಯೋಜನೆ ಇರುವುದಿಲ್ಲ.

ಸಂಖ್ಯೆ: ಸಿಒ 406 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕಸರ್ಕಾರ

ಸಂಖ್ಯೆ: HORTI 504 HGM 2020

ಕರ್ನಾಟಕಸರ್ಕಾರದಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 14-12-2020

ಇವರಿಂದ:
ಸರ್ಕಾರದಕಾರ್ಯದರ್ಶಿ
ತೋಟಗಾರಿಕೆಇಲಾಖೆ

ಇವರಿಗೆ:
ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ಸಂಜೀವ ಮಠಂದೂರ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1107ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಸಂಜೀವ ಮಠಂದೂರ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1107ಕ್ಕೆ ಉತ್ತರದ 10 ಪ್ರತಿಗಳನ್ನುಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮನಂಬುಗೆಯ

T. V. Sunandamma 14/12/20

(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ತೋಟಗಾರಿಕೆ ಇಲಾಖೆ.

14/12

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1107

ಸದಸ್ಯರ ಹೆಸರು : ಶ್ರೀ ಸಂಜೀವ್ ಮಠಂದೂರ್

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11-12-2020

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹವಾಮಾನ ವೈಪರೀತ್ಯದಿಂದ ಅಡಿಕೆ ಬೆಳೆ ನಾಶಗೊಂಡು ಫಸಲು ಭಿಮಾ ಯೋಜನೆಯಲ್ಲಿ ಪರಿಹಾರ ಪಡೆದ ರೈತರ ಸಂಖ್ಯೆ ಎಷ್ಟು; ಹಾಗೂ ರೈತರು ಪಡೆದ ಒಟ್ಟು ಪರಿಹಾರದ ಮೊತ್ತ ಎಷ್ಟು	ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಅಡಿಕೆ ಬೆಳೆಗೆ ಕಳೆದ ಮೂರು ವರ್ಷಗಳಿಂದ ಎಂದರೆ, 2016-17, 2017-18 ಮತ್ತು 2018-19 ವರ್ಷಗಳಲ್ಲಿ, ಸಂಬಂಧಿಸಿದ ಬೆಳೆ ವಿಮಾ ಕಂಪನಿಗಳವತಿಯಿಂದ ಬೆಳೆ ವಿಮೆ ಪರಿಹಾರ ಪಡೆದ ಅರ್ಹ ರೈತ ಪ್ರಕರಣಗಳ ಸಂಖ್ಯೆ 4561 ಹಾಗೂ ವಿಮೆ ಪರಿಹಾರ ಪಡೆದ ವಿಮಾ ಪರಿಹಾರ ಮೊತ್ತ ರೂ.1112.84 ಲಕ್ಷಗಳು.
(ಆ)	ತಾಂತ್ರಿಕ ತೊಂದರೆಗಳಿಂದ ಪರಿಹಾರ ಪಡೆಲು ಬಾಕಿ ಇರುವ ರೈತರಿಗೆ ಪರಿಹಾರ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ತಾಂತ್ರಿಕ ತೊಂದರೆಗಳಾದ ರೈತರ ಹೆಸರು, ಖಾತೆ ಸಂಖ್ಯೆ ಮತ್ತು ಬ್ಯಾಂಕ್ IFSC ಕೋಡ್ ಗಳ ವ್ಯತ್ಯಾಸದಿಂದ ಪರಿಹಾರ ವಿತರಿಸಲಾಗದ ವಿಮಾ ಪರಿಹಾರ ಮೊತ್ತವನ್ನು ಸಂಬಂಧಿತ ಫಲಾನುಭವಿಗಳ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸುವ ಕಾರ್ಯವು ಬೆಳೆ ವಿಮೆ ಕಂಪನಿಗಳವತಿಯಿಂದ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: HORTI 507 HGM 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

ಕರ್ನಾಟಕಸರ್ಕಾರ

ಸಂಖ್ಯೆ: HORTI 487 HGM 2020

ಕರ್ನಾಟಕಸರ್ಕಾರದಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 14-12-2020

ಇವರಿಂದ:

ಸರ್ಕಾರದಕಾರ್ಯದರ್ಶಿ
ತೋಟಗಾರಿಕೆಇಲಾಖೆ

ಇವರಿಗೆ:

ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ಯಶವಂತರಾಯಗೌಡ ವಿ.ಪಾಟೀಲ, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:553ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಯಶವಂತರಾಯಗೌಡ ವಿ.ಪಾಟೀಲ, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:553ಕ್ಕೆ ಉತ್ತರದ 10 ಪ್ರತಿಗಳನ್ನುಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮನಂಬುಗೆಯ

T.V. Sunandamma 14/12/2020

(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

14/12

ಕರ್ನಾಟಕ ವಿಧಾನಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ : 553
2. ಸದಸ್ಯರ ಹೆಸರು : ಶ್ರೀ.ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
3. ಉತ್ತರಿಸುವ ಸಚಿವರು : ಪೌರಾಡಳಿತ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸುವ ದಿನಾಂಕ : 11.12.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಯಾವ ಯಾವ ವಸ್ತು ಅಥವಾ ಪದಾರ್ಥಗಳಿಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು (GI) ನೀಡಲಾಗಿದೆ; (ವಿವರ ನೀಡುವುದು)	ರಾಜ್ಯದಲ್ಲಿ ಒಟ್ಟು 12 ತೋಟಗಾರಿಕೆ ಬೆಳೆಗಳಿಗೆ ಭೌಗೋಳಿಕ ಗುರುತು/ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು ನೀಡಲಾಗಿದೆ. ಈ ಬೆಳೆಗಳೆಂದರೆ: ನಂಜನಗೂಡು ಬಾಳೆ, ಮೈಸೂರು ವೀಳ್ಯೆದೆಲೆ, ಮೈಸೂರು ಮಲ್ಲಿಗೆ, ಉಡುಪಿ ಮಲ್ಲಿಗೆ, ಉಡುಪಿ ಮಟ್ಟುಗುಳ್ಳಬದನೆ, ಕೊಡಗಿನಕಿತ್ತಳೆ, ಹಡಗಲಿಮಲ್ಲಿಗೆ, ಕಮಲಾಪುರ ಕೆಂಪುಬಾಳೆ, ಸಾಗರ ಅಪ್ಪೆಮಿಡಿ, ದೇವನಹಳ್ಳಿ ಚಕ್ಕೋತ, ಬೆಂಗಳೂರು ನೀಲಿ ದ್ರಾಕ್ಷಿ ಮತ್ತು ಬೆಂಗಳೂರು ಕೆಂಪು ಈರುಳ್ಳಿ.
ಆ)	ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಬೆಳೆಯುವ ಲಿಂಬೆಹಣ್ಣು ವಿಶಿಷ್ಟ ಗುಣದಿಂದ ಕೂಡಿದ್ದು, ಇಲ್ಲಿ ಬೆಳಯುವ ಲಿಂಬೆಯು ಅಂತರರಾಜ್ಯ ಮತ್ತು ವಿದೇಶಗಳಿಗೆ ರಫ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಗಮನಕ್ಕೆ ಬಂದಿರುತ್ತದೆ.
ಇ)	ಬಂದಿದ್ದಲ್ಲಿ, ಇಂಡಿ ಲಿಂಬೆಹಣ್ಣಿಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ, ಸಲ್ಲಿಸಿದ್ದಲ್ಲಿ, ಯಾವಾಗ ಸಲ್ಲಿಸಲಾಗಿದೆ;	ಹೌದು. ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ. ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಉತ್ಕೃಷ್ಟ ಗುಣಮಟ್ಟದ ಲಿಂಬೆ ಕಾಯಿಗಳನ್ನು ಸುಮಾರು 5 ಸಾವಿರ ಹೇಕ್ಟರ್ ಪ್ರದೇಶದಲ್ಲಿ ಅದರಲ್ಲೂ ವಿಶೇಷವಾಗಿ ಸಾವಯವ ಪದ್ಧತಿಯಲ್ಲಿ ಬೆಳೆಯಲಾಗುತ್ತಿದ್ದು, ಈ ಪ್ರದೇಶದಲ್ಲಿ ಬೆಳೆಯಲಾಗುತ್ತಿರುವ ಲಿಂಬೆ ಕಾಯಿಗಳ ಗುಣಮಟ್ಟ ವಿಶಿಷ್ಟವಾಗಿದ್ದು, ಈ ರೀತಿಯ ಗುಣಮಟ್ಟ ಬೇರೆ ಯಾವುದೇ ಪ್ರದೇಶದಲ್ಲಿ ಬೆಳೆದ ಲಿಂಬೆ ಕಾಯಿಗಳಲ್ಲಿ ಕಾಣುವುದಿಲ್ಲ, ಆದಕಾರಣ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಬೆಳೆಯಲಾಗುತ್ತಿರುವ ಲಿಂಬೆ ಬೆಳೆಗೂ ಸಹ ಜಿಯೋಗ್ರಫಿಕಲ್ ಐಡೆಂಟಿಫಿಕೇಷನ್ (GI) ಗುರುತು ದೊರಕಿಸಿ ಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.
ಈ)	ಇಂಡಿ ನಿಂಬೆಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು ದೊರಕಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಹೌದು, ಆಸಕ್ತಿ ಹೊಂದಿದೆ.

ಸದಸ್ಯ ಕಾರ್ಯದರ್ಶಿ
ತಿಪಟೂರು ಯೋಜನಾ ಪ್ರಾಧಿಕಾರ
ತಿಪಟೂರು.

ಅನುಮೋದಿತ ವಿನ್ಯಾಸಗಳ ವಿವರಗಳು–2018–19

ಕ್ರಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ	ಉದ್ದೇಶ	ಅನುಮೋದನೆ ದಿನಾಂಕ	ಷರಾ
1..	ಶ್ರೀ ಟಿ.ಎಸ್.ಶಾಮಣ್ಣ ಬಿನ್ ಸುಬ್ಬರಾಯಪ್ಪ	ತಿಪಟೂರು	ಅಣ್ಣಾಪುರ	19/3ಬಿ	2ಎ–00 ಗುಂಟೆ	ವಸತಿ	30–05–2018	ಶೇ100% ನಿವೇಶನ ಬಿಡುಗಡೆ ಮಾಡಲಾಗಿದೆ

ಸದಸ್ಯ ಕಾರ್ಯದರ್ಶಿ
ತಿಪಟೂರು ಯೋಜನಾ ಪ್ರಾಧಿಕಾರ
ತಿಪಟೂರು.

ಅನುಮೋದಿತ ವಿನ್ಯಾಸಗಳ ವಿವರಗಳು–2019–20

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ	ಉದ್ದೇಶ	ಅನುಮೋದನೆ ದಿನಾಂಕ	ಷರಾ
1.	ಶ್ರೀಮತಿ ಸುಧಾ ಕೋಂ ಲೇ॥ಮಹದೇವಪ್ಪ	ತಿಪಟೂರು	ತಿಪಟೂರು	290/1	0ಎ–39 ಗುಂಟೆ	ವಸತಿ	07–06–2019	ಶೇ.100% ರಷ್ಟು ನಿವೇಶನ ಬಿಡುಗಡೆ ಮಾಡಲಾಗಿದೆ.
2.	ಶ್ರೀ ಎಸ್.ಎ.ಅಣ್ಣಯ್ಯ ಮತ್ತು ಎಸ್.ಎ.ಜನಾರ್ಧನ	ತಿಪಟೂರು	ಮಾರನಗೆರೆ	176/5 188/4 188/6 189/2	0ಎ–39	ವಸತಿ	07–06–2019	ಶೇ.100% ರಷ್ಟು ನಿವೇಶನ ಬಿಡುಗಡೆ ಮಾಡಲಾಗಿದೆ.
3.	ಶ್ರೀ ಕ.ಪ್ರಕಾಶ್ ಬಿನ್ ಡಿ.ಕೃಷ್ಣಮೂರ್ತಿ	ತಿಪಟೂರು	ಲಿಂಗದಹಳ್ಳಿ	146/2	0ಎ–29	ವಸತಿ	22–08–2019	ಶೇ.100% ರಷ್ಟು ನಿವೇಶನ ಬಿಡುಗಡೆ ಮಾಡಲಾಗಿದೆ.
4.	ಶ್ರೀ ಜಿ.ಸಿ.ಚಂದ್ರಶೇಖರ್ ಬಿನ್ ಚಿದನಂದಮೂರ್ತಿ	ತಿಪಟೂರು	ಮಾದಿಹಳ್ಳಿ	118/2 118/8 118/1 118/6 118/7	01ಎ–12.08	ವಸತಿ	22–8–2019	ಶೇ.100% ರಷ್ಟು ನಿವೇಶನ ಬಿಡುಗಡೆ ಮಾಡಲಾಗಿದೆ.

ಸದಸ್ಯ ಕಾರ್ಯದರ್ಶಿ
ತಿಪಟೂರು ಯೋಜನಾ ಪ್ರಾಧಿಕಾರ
ತಿಪಟೂರು

ಅನುಮೋದಿತ ವಿನ್ಯಾಸಗಳ ವಿವರಗಳು-2020-21

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ	ಉದ್ದೇಶ	ಅನುಮೋದನೆ ದಿನಾಂಕ	ಷರಾ
1.	ಶ್ರೀ ಓಂಕಾರಮೂರ್ತಿ ಬಿನ್ ಬಸಪ್ಪ	ತಿಪಟೂರು	ಮಾದಿಹಳ್ಳಿ	203/4	04ಎ-27.08 ಗುಂಟೆ	ವಸತಿ	08-06-2020	ಶೇ.100% ರಷ್ಟು ನಿವೇಶನ ಬಿಡುಗಡೆ ಮಾಡಲಾಗಿದೆ.
2.	ಶ್ರೀ ಹೆಚ್.ಎಂ.ಶಿವಕುಮಾರ್ ಬಿನ್ ಸದಾಶಿವಯ್ಯ	ತಿಪಟೂರು	ಮಾದಿಹಳ್ಳಿ	108	01ಎ-23 ಗುಂಟೆ	ವಸತಿ	23-11-2020	ಶೇ.100% ರಷ್ಟು ನಿವೇಶನ ಬಿಡುಗಡೆ ಮಾಡಲಾಗಿದೆ.

ಸದಸ್ಯ ಕಾರ್ಯದರ್ಶಿ
ತಿಪಟೂರು ಯೋಜನಾ ಪ್ರಾಧಿಕಾರ
ತಿಪಟೂರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 184 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಅಪ್ಪಚ್ಚು ರಂಜನ್ ಎಂ.ಪಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:527ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಅಪ್ಪಚ್ಚು ರಂಜನ್ ಎಂ.ಪಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:527ಕ್ಕೆ ಸಂಬಂಧಿಸಿದ ಉತ್ತರದ-25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ (ಮಡಿಕೇರಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	527
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಗೆ ನಗರಾಭಿವೃದ್ಧಿ ಇಲಾಖೆಯಿಂದ ಕುಡಿಯುವ ನೀರಿನ ಯೋಜನೆಗೆ ಮಂಜೂರಾದ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು	ಕೊಡಗು ಜಿಲ್ಲೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಮಡಿಕೇರಿ ನಗರಕ್ಕೆ ಕುಂಡ ಮೇಸ್ತ್ರಿ, ಹಾಗೂ ಕೂಟುಹೊಳೆಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ಸರ್ಕಾರದಿಂದ ರೂ.3000.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆಗೊಳಿಸಲಾಗಿದೆ.
ಆ)	ಮಡಿಕೇರಿಗೆ ಕುಂಡ ಮೇಸ್ತ್ರಿ, ಕುಡಿಯುವ ನೀರಿನ ಯೋಜನೆಗೆ ಸರ್ಕಾರ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಮಂಜೂರು ಮಾಡಿದ ಅನುದಾನವೆಷ್ಟು; ಖರ್ಚು ಮಾಡಿದ ಅನುದಾನವೆಷ್ಟು; ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ; ಗುತ್ತಿಗೆದಾರರಿಗೆ ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಕಾಶವೆಷ್ಟು? (ಸಂಪೂರ್ಣ ವಿವರ ನೀಡುವುದು)	ಮಡಿಕೇರಿ ನಗರಕ್ಕೆ ಕುಂಡ ಮೇಸ್ತ್ರಿ, ಹಾಗೂ ಕೂಟುಹೊಳೆಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರೂ.3000.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದೆ. ಸದರಿ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. **ಪ್ಯಾಕೇಜ್-1:** ಕುಂಡ ಮೇಸ್ತ್ರಿ, ಹೊಳೆಯಲ್ಲಿ, ಮೂಲಸ್ಥಾವರದ ಜಾಕ್ ವೆಲ್ ನಿರ್ಮಾಣ, ಕುಂಡ ಮೇಸ್ತ್ರಿಯಿಂದ ಕೂಟುಹೊಳೆಗೆ ಹಾಗೂ ಕೂಟುಹೊಳೆಯಿಂದ ಜಲಶುಧ್ಧೀಕರಣ ಘಟಕಕ್ಕೆ ಏರು ಕೊಳವೆ ಮಾರ್ಗ ಅಳವಡಿಸುವುದು ಹಾಗೂ ಸಂಬಂಧಿತ ಕಾಮಗಾರಿಗಳು. ಗುತ್ತಿಗೆದಾರರು: ಮೆ:ಸಾಯಿಸುಧೀರ್ ಇನ್‌ಫ್ರಾಸ್ಟ್ರಚ್ಚರ್ ಲಿ., ಹೈದರಾಬಾದ್ ಗುತ್ತಿಗೆ ಮೊತ್ತ : ರೂ.804.23 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ: 18 ತಿಂಗಳು (ಮಳೆಗಾಲ ಸಹಿತ) ಆರ್ಥಿಕ ಪ್ರಗತಿ: ರೂ 739.20 ಲಕ್ಷಗಳು ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ. **ಪ್ಯಾಕೇಜ್-2:** ಕುಂಡಾಮೇಸ್ತ್ರಿ, ಹೊಳೆ ಹಾಗೂ ಕೂಟುಹೊಳೆಯ ಜಾಕ್‌ವೆಲ್ ಮತ್ತು ಪಂಪ್ ಮನೆಗಳಲ್ಲಿ ಪಂಪ್‌ಗಳನ್ನು ಅಳವಡಿಸುವುದು ಗುತ್ತಿಗೆದಾರರು : ಮೆ:ಫ್ಲೋಮೋರ್ ಲಿಮಿಟೆಡ್, ಬೆಂಗಳೂರು

		ಗುತ್ತಿಗೆ ಮೊತ್ತ : ರೂ.187.17 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 9 ತಿಂಗಳು (ಮಳೆಗಾಲ ಸಹಿತ) ಆರ್ಥಿಕ ಪ್ರಗತಿ : ರೂ 182.00 ಲಕ್ಷಗಳು ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ. **ಪ್ಯಾಕೇಜ್-3:** ಸ್ಟೋನ್‌ಹಿಲ್‌ನಲ್ಲಿ 7.0 ಎಂ.ಎಲ್.ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕ ನಿರ್ಮಾಣ ಗುತ್ತಿಗೆದಾರರು : ಶ್ರೀ ಎಂ.ಎನ್. ರಮೇಶ್, ತುಮಕೂರು ಗುತ್ತಿಗೆ ಮೊತ್ತ : ರೂ.276.84 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 12 ತಿಂಗಳು ಆರ್ಥಿಕ ಪ್ರಗತಿ : ರೂ 249.50 ಲಕ್ಷಗಳು ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ. **ಪ್ಯಾಕೇಜ್-4:** ಕುಂಡಾಮೇಸ್ತ್ರಿ, ಹೊಳೆ ಹಾಗೂ ಕೂಟುಹೊಳೆಯ ಜಾಕ್‌ವೆಲ್‌ಗಳಿಗೆ 11ಕೆ.ವಿ. ವಿದ್ಯುತ್ ಎಕ್ಸ್‌ಪ್ರೆಸ್ ಫೀಡರ್ ಮೇನ್ ಒದಗಿಸುವುದು. ಗುತ್ತಿಗೆದಾರರು : ಮೆ : ಸಪ್ತಗಿರಿ ಎಂಟರ್‌ಪ್ರೈಸೀಸ್, ಬೆಂಗಳೂರು ಗುತ್ತಿಗೆ ಮೊತ್ತ : ರೂ.93.64 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 06 ತಿಂಗಳು ಆರ್ಥಿಕ ಪ್ರಗತಿ : ರೂ 100.32 ಲಕ್ಷಗಳು ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ. **ಪ್ಯಾಕೇಜ್ -5:** ಕೂಟುಹೊಳೆ ಒಗೀ ವಿಯರ್‌ನ ನೀರು ಸೋರುವಿಕೆ ತಡಗಟ್ಟುವ ಕಾಮಗಾರಿ ಗುತ್ತಿಗೆದಾರರು : ಶ್ರೀ ಎಂ.ಎನ್, ರಮೇಶ್ ತುಮಕೂರು. ಗುತ್ತಿಗೆ ಮೊತ್ತ : ರೂ.86.76 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 04 ತಿಂಗಳು ಆರ್ಥಿಕ ಪ್ರಗತಿ : ರೂ 92.2 ಲಕ್ಷಗಳು ಕಾಮಗಾರಿ ಪೂರ್ಣಗೊಂಡಿರುತ್ತದೆ. **ಪ್ಯಾಕೇಜ್ -6:** ಕೂಟುಹೊಳೆ ಜಲಾಶಯದಲ್ಲಿ ಹೂಳೆತ್ತುವ ಮತ್ತು ಆಳ ಹೆಚ್ಚಿಸುವ ಕಾಮಗಾರಿ. ಟೆಂಡರ್ ಮೊತ್ತ: ರೂ.190.00 ಲಕ್ಷಗಳು ಗುತ್ತಿಗೆದಾರರು : ಮೆ|| ಬೂಮರಾ ಕನ್‌ಸ್ಟ್ರಕ್ಷನ್, ಬೆಂಗಳೂರು ಗುತ್ತಿಗೆ ಮೊತ್ತ : ರೂ.142.98 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 06 ತಿಂಗಳು ಆರ್ಥಿಕ ಪ್ರಗತಿ : ರೂ 75.17 ಲಕ್ಷಗಳು. ಕಾಮಗಾರಿಯನ್ನು ಪೂರ್ವಭಾವಿಯಾಗಿ ಮುಕ್ತಾಯಗೊಳಿಸಲಾಗಿದೆ.
		ಪ್ಯಾಕೇಜ್ -7 : Ductile Iron sluice valves, air valves and pressure relief valves ಸರಬರಾಜು ಮಾಡುವ ಕಾಮಗಾರಿ.

ಗುತ್ತಿಗೆದಾರರು : ಮೆ|| ದುರ್ಗಾ ವಾಲ್ವ್ಸ್, ಸಿಕಂದ್ರಾಬಾದ್
ಗುತ್ತಿಗೆ ಮೊತ್ತ : ರೂ.14.25 ಲಕ್ಷಗಳು
ಗುತ್ತಿಗೆ ಕರಾರು ಕಾಲಾವಧಿ : 02 ತಿಂಗಳು
ಆರ್ಥಿಕ ಪ್ರಗತಿ : 14.25 ಲಕ್ಷಗಳು.
ಕಾಮಗಾರಿ ಪೂರ್ಣಗೊಂಡಿರುತ್ತದೆ.

ಪ್ಯಾಕೇಜ್ -8: ಕುಂಡಾಮೇಸ್ತ್ರಿ ಹೊಳೆಯಲ್ಲಿನ ಜಾಕ್‌ವೆಲ್ ಮತ್ತು ಪಂಪ್ ಮನೆಗೆ ಸ್ಟೀಲ್ ಸೇತುವೆಯನ್ನು ನಿರ್ಮಾಣ ಮಾಡುವ ಕಾಮಗಾರಿ
ಗುತ್ತಿಗೆದಾರರು : ಶ್ರೀ ರಾಮಚಂದ್ರರಾವ್, ಬೆಂಗಳೂರು
ಗುತ್ತಿಗೆ ಮೊತ್ತ : ರೂ.63.34 ಲಕ್ಷಗಳು
ಗುತ್ತಿಗೆ ಕರಾರು ಕಾಲಾವಧಿ: 04 ತಿಂಗಳು
ಆರ್ಥಿಕ ಪ್ರಗತಿ : 62.75 ಲಕ್ಷಗಳು
ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ.

ಪ್ಯಾಕೇಜ್ -9 : ಮಧ್ಯಂತರ ಪಂಪ್‌ಮನೆಯ ನಿರ್ಮಾಣ
ಗುತ್ತಿಗೆದಾರರು : ಶ್ರೀ.ಎಂ.ಎನ್. ರಮೇಶ್, ತುಮಕೂರು
ಗುತ್ತಿಗೆ ಮೊತ್ತ : ರೂ.81.78 ಲಕ್ಷಗಳು
ಗುತ್ತಿಗೆ ಕರಾರು ಕಾಲಾವಧಿ : 06 ತಿಂಗಳು
ಆರ್ಥಿಕ ಪ್ರಗತಿ : 52.80 ಲಕ್ಷಗಳು
ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ.

ಪ್ಯಾಕೇಜ್ -10 : ಮಧ್ಯಂತರ ಪಂಪ್‌ಮನೆಯಲ್ಲಿ 03 ಸಂಖ್ಯೆಯ 50 ಹೆಚ್.ಪಿ. ಸೆಂಟ್ರಿಫ್ಯೂಗಲ್ ಪಂಪ್‌ಗಳನ್ನು ನಿರ್ಮಾಣ ಮಾಡುವುದು.
ಗುತ್ತಿಗೆದಾರರು : ಅಕ್ವಾಟೆಕ್ ಎನ್ವಿರೋ ಇಂಜಿನಿಯರ್ಸ್, ಬೆಂಗಳೂರು
ಗುತ್ತಿಗೆ ಮೊತ್ತ : ರೂ.38.39 ಲಕ್ಷಗಳು
ಗುತ್ತಿಗೆ ಕರಾರು ಕಾಲಾವಧಿ : 04 ತಿಂಗಳು
ಆರ್ಥಿಕ ಪ್ರಗತಿ : 38.04 ಲಕ್ಷಗಳು
ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ.
ಪ್ಯಾಕೇಜ್ -11 : ಕೂಟುಹೊಳೆ ಜಲಾಶಯದ ಮೂಲಸ್ಥಾವರದಲ್ಲಿ ಹೌಸಿಂಗ್ ಛೇಂಬರ್ ನಿರ್ಮಾಣ.
ಗುತ್ತಿಗೆದಾರರು : ಶ್ರೀ ಎಂ.ಎನ್. ರಮೇಶ್, ತುಮಕೂರು
ಗುತ್ತಿಗೆ ಮೊತ್ತ : ರೂ.97.38 ಲಕ್ಷಗಳು
ಗುತ್ತಿಗೆ ಕರಾರು ಕಾಲಾವಧಿ: 09 ತಿಂಗಳು
ಆರ್ಥಿಕ ಪ್ರಗತಿ : 181.00 ಲಕ್ಷಗಳು.
ಕಾಮಗಾರಿ ಪೂರ್ಣಗೊಂಡು ಚಾಲನೆಗೊಳಿಸಲಾಗಿದೆ.

ಪ್ಯಾಕೇಜ್ -12: 2016-17 ನೇ ಬೇಸಿಗೆಯಲ್ಲಿ ಕುಂಡ ಮೇಸ್ತ್ರಿಯಲ್ಲಿ Sand bund ಅಳವಡಿಸುವ ಕಾಮಗಾರಿ.
ಗುತ್ತಿಗೆದಾರರು : ಶ್ರೀ ವಿಜಯ್‌ಕುಮಾರ್, ಮಡಿಕೇರಿ
ಗುತ್ತಿಗೆ ಮೊತ್ತ : ರೂ.9.31 ಲಕ್ಷಗಳು

		ಗುತ್ತಿಗೆ ಕರಾರು ಕಾಲಾವಧಿ : 01 ತಿಂಗಳು ಆರ್ಥಿಕ ಪ್ರಗತಿ : 9.01 ಲಕ್ಷಗಳು. ಕಾಮಗಾರಿ ಪೂರ್ಣಗೊಂಡಿರುತ್ತದೆ. **ಪ್ಯಾಕೇಜ್-13:** ಕುಂಡ ಮೇಸ್ತ್ರಿಯಲ್ಲಿ Sluice gate ಗೆ ಅಳವಡಿಸುವ ಕಾಮಗಾರಿ. ಗುತ್ತಿಗೆದಾರರು : ಶ್ರೀ ನವೀನ್.ಎಲ್, ಮೈಸೂರು ಗುತ್ತಿಗೆ ಮೊತ್ತ : ರೂ.5.34 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 02 ತಿಂಗಳು ಆರ್ಥಿಕ ಪ್ರಗತಿ : 5.11 ಲಕ್ಷಗಳು. ಕಾಮಗಾರಿ ಪೂರ್ಣಗೊಂಡಿರುತ್ತದೆ. **ಪ್ಯಾಕೇಜ್-14:** 2017-18 ನೇ ಬೇಸಿಗೆಯಲ್ಲಿ ಕುಂಡಾಮೇಸ್ತ್ರಿಯಲ್ಲಿ Sand bund ಅಳವಡಿಸುವ ಕಾಮಗಾರಿ. ಗುತ್ತಿಗೆದಾರರು : ಶ್ರೀ ವಿಜಯ್‌ಕುಮಾರ್, ಮಡಿಕೇರಿ ಗುತ್ತಿಗೆ ಮೊತ್ತ : ರೂ.5.45 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 15 ದಿನಗಳು ಆರ್ಥಿಕ ಪ್ರಗತಿ : 5.35 ಲಕ್ಷಗಳು. ಕಾಮಗಾರಿ ಪೂರ್ಣಗೊಂಡಿರುತ್ತದೆ. **ಪ್ಯಾಕೇಜ್ -15:** ಕುಂಡಾಮೇಸ್ತ್ರಿ, ಹೊಳೆಗೆ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿ ಕುರಿತು. ಗುತ್ತಿಗೆದಾರರು : ಮೆ. ಎಸ್.ಕೆ.ಪಿ ಪ್ರಾಜೆಕ್ಟ್ಸ್, ಮೈಸೂರು. ಗುತ್ತಿಗೆ ಮೊತ್ತ : ರೂ.547.63 ಲಕ್ಷಗಳು ಗುತ್ತಿಗೆ ಕರಾರು ಕಾಲಾವಧಿ : 12 ತಿಂಗಳು (ಮಳೆಗಾಲ ಸಹಿತ) ಆರ್ಥಿಕ ಪ್ರಗತಿ: 370.58 ಲಕ್ಷಗಳು. ಸದರಿ ಕಾಮಗಾರಿಯು ಶೇಕಡ 65 ರಷ್ಟು ಪೂರ್ಣಗೊಂಡಿದ್ದು, ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಮಳೆಯಿಂದಾಗಿ ಹಾಗೂ ಕೋವಿಡ್-19 ಸಾಂಕ್ರಮಿಕ ರೋಗದ ಹರಡುವಿಕೆಯ ಕಾರಣಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸುವುದು ತಡವಾಗಿದ್ದು, ದಿನಾಂಕ:30.04.2021 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು.

ಸಂಖ್ಯೆ ನಅಇ 184 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ
ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 176 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1116ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1116ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1116
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಾಪು ಪುರಸಭೆ ವ್ಯಾಪ್ತಿಗೆ ಕುಡಿಯುವ ನೀರಿನ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ;	ಕಾಪು ಪಟ್ಟಣಕ್ಕೆ ಉದ್ಯಾವರ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯ ರೂ.57.02 ಕೋಟಿಯ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ ನಅಇ 34 ಯುಡಬ್ಲ್ಯೂ ಎಸ್ 2015, ದಿನಾಂಕ 21-02-2018 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಸದರಿ ಯೋಜನೆಯಡಿಯಲ್ಲಿ ಜ್ಯಾಕ್‌ವೆಲ್ ಮತ್ತು ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲು ಅಗತ್ಯವಿರುವ ಜಮೀನುಗಳನ್ನು ಹಸ್ತಾಂತರಿಸಲು ಸ್ಥಳೀಯ ಸಂಸ್ಥೆಯು ನೀಡಿದ್ದ ಆಶ್ವಾಸನೆ ಮೇರೆಗೆ ದಿನಾಂಕ 07-01-2019 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಈವರೆಗೂ ಜಮೀನುಗಳನ್ನು ಹಸ್ತಾಂತರಿಸದಿರುವುದರಿಂದ ಟೆಂಡರನ್ನು ಯಥಾಸ್ಥಿತಿಯಲ್ಲಿ ರದ್ದುಪಡಿಸಲಾಗಿದೆ.
ಆ)	ಕಾಪು ಪುರಸಭೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬೇಸಿಗೆಯಲ್ಲಿ ತೀವ್ರವಾದ ಕುಡಿಯುವ ನೀರಿನ ಸಮಸ್ಯೆ ಇದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಕಾಪು ಪುರಸಭೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಉದ್ಯಾವರ ನದಿಯಿಂದ ರೂಪಿಸಲಾಗಿರುವ ಮೇಲಿನ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಯೋಜನೆಯ ಟೆಂಡರ್ ಆಹ್ವಾನಿಸಲು ಘಟಕಗಳ ನಿರ್ಮಾಣಕ್ಕೆ ಅಗತ್ಯವಿರುವ ಜಮೀನುಗಳನ್ನು ಪುರಸಭೆಯು ಮಂಡಳಿಗೆ ಹಸ್ತಾಂತರಿಸಬೇಕಾಗಿರುತ್ತದೆ. ನೀರು ಶುದ್ಧೀಕರಣ ಘಟಕಕ್ಕೆ ಗುರುತಿಸಲಾದ ಇನ್ನಂಜೆಯ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ವಿಳಂಬವಾಗುತ್ತಿರುವುದರಿಂದ, ಪ್ರಸ್ತುತ ಜ್ಯಾಕ್‌ವೆಲ್ ಹಾಗೂ ನೀರು ಶುದ್ಧೀಕರಣ ಘಟಕಕ್ಕೆ ಕುರ್ಕಾಲು ಗ್ರಾಮದ ಸರ್ವೆ

		ನಂ.101/1ರಲ್ಲಿ 2.00 ಎಕರೆ ಸರಕಾರಿ ಜಮೀನನ್ನು ಕಾಪು ಪುರಸಭೆಯಿಂದ ಗುರುತಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಗಳನ್ನು ಶೀಘ್ರವಾಗಿ ಅಂತಿಮಗೊಳಿಸಿ, ಜಮೀನನ್ನು ಮಂಡಳಿಗೆ ಹಸ್ತಾಂತರಿಸುವ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಕಾಪು ಪುರಸಭೆಯನ್ನು ಕೋರಲಾಗಿದೆ. ದಿನಾಂಕ 13-07-2020 ರಂದು ನಡೆದ ಸಭೆಯಲ್ಲಿ ಸದರಿ ಯೋಜನೆಯಡಿಯಲ್ಲಿ ಕುರ್ಕಾಲು, ಮೂಡಬೆಟ್ಟು, ಇನ್ನಂಜೆ ಹಾಗೂ ಪಾಂಗಳ ಗ್ರಾಮಗಳನ್ನು ಸೇರಿಸಿಕೊಂಡು ಟೆಂಡರ್ ಆಹ್ವಾನಿಸಲು ಹಾಗೂ ಅಗತ್ಯ ಜಮೀನುಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸಲು ಕಾಪು ಪುರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಜಮೀನು ಹಸ್ತಾಂತರಗೊಂಡ ನಂತರ ಟೆಂಡರ್ ಪ್ರಕ್ರಿಯೆ ನಡೆಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಸಂಖ್ಯೆ ನಅಇ 176 ಯು.ಎಂ.ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 166 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಹರ್ಷವರ್ಧನ್ ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1023ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಹರ್ಷವರ್ಧನ್ ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1023ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಹರ್ಷವರ್ಧನ್ ಬಿ. (ನಂಜನಗೂಡು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1023
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಂಜನಗೂಡು ಪಟ್ಟಣದಲ್ಲಿ ಕಾಮಗಾರಿಯನ್ನು ಅಪೂರ್ಣಗೊಳಿಸಿರುವುದರಿಂದ ಚರಂಡಿಯ ನೀರು ರಸ್ತೆಯಲ್ಲೆಲ್ಲಾ ಹರಿಯುತ್ತಿದ್ದು, ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಂಡಿದೆ;	ನಂಜನಗೂಡು ನಗರಕ್ಕೆ ಕೇಂದ್ರ ಸರ್ಕಾರದ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿಯಲ್ಲಿ ರೂ.9.74 ಕೋಟಿಗಳ ಒಳಚರಂಡಿ ಯೋಜನೆಯು ಅನುಮೋದನೆಗೊಂಡಿದ್ದು, ತದನಂತರ ಪರಿಷ್ಕೃತ ಅಂದಾಜು ಪಟ್ಟಿಯು ರೂ.25.00 ಕೋಟಿಗಳಿಗೆ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯಡಿ ನಗರಕ್ಕೆ ಒಳಚರಂಡಿ ಆಂತರಿಕ ಕೊಳವೆ ಮಾರ್ಗ-90 ಕಿ.ಮೀ, ಔಟ್-ಫಾಲ್ ಕೊಳವೆ ಮಾರ್ಗ-7 ಕಿ.ಮೀ, 2 ಸಂಖ್ಯೆ ತೇವಬಾವಿಗಳು, ಏರು ಕೊಳವೆ ಮಾರ್ಗ ಹಾಗೂ 7 ಎಂ.ಎಲ್.ಡಿ ಸಾಮರ್ಥ್ಯದ ಮಲೀನ ನೀರು ಶುದ್ದೀಕರಣ ಘಟಕವನ್ನು ನಿರ್ಮಿಸಲಾಗಿರುತ್ತದೆ. ಚಾಮಲಾಪುರ ಹುಂಡಿಯ ಬಳಿ ನಿರ್ಮಿಸಬೇಕಾದ ತೇವಬಾವಿ ಸ್ಥಳವನ್ನು ಸ್ಥಳೀಯ ಸಂಸ್ಥೆಯವರು ಈವರೆಗೂ ಹಸ್ತಾಂತರಿಸಿಲ್ಲದ ಕಾರಣ ತೇವಬಾವಿ ಮತ್ತು ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಸದರಿ ಕಾಮಗಾರಿಯನ್ನು ಹೊರತುಪಡಿಸಿ ಉಳಿಕೆ ಕಾಮಗಾರಿಗಳನ್ನು ದಿನಾಂಕ 26-10-2017 ರಂದು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿರುತ್ತದೆ.

		ಸದರಿ ಯೋಜನೆಯಡಿ ಆಂತರಿಕ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿಯನ್ನು 2013ರಲ್ಲಿ ಪೂರ್ಣಗೊಳಿಸಲಾಗಿದ್ದು, ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಿಸುವ ಸ್ಥಳವನ್ನು ಸ್ಥಳೀಯ ಸಂಸ್ಥೆಯಿಂದ 2015ರಲ್ಲಿ ಹಸ್ತಾಂತರಿಸಿದ್ದು, ದಿನಾಂಕ:26-10-2017ರಂದು ಕಾಮಗಾರಿಯನ್ನು ಚಾಲನೆಗೊಳಿಸಲಾಗಿರುತ್ತದೆ. ಕೆಲವು ಕಡೆಗಳಲ್ಲಿ ವಿವಿಧ ಇಲಾಖೆಗಳಿಂದ ರಸ್ತೆ ಮತ್ತು ತೆರೆದ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಸಮಯದಲ್ಲಿ ಕೊಳವೆ ಮಾರ್ಗ ಮತ್ತು ಆಳುಗುಂಡಿಗಳಿಗೆ ಹಾನಿಯಾಗಿರುವುದರಿಂದ ಮಲೀನ ನೀರು ರಸ್ತೆಯಲ್ಲಿ ಹರಿಯುತ್ತಿರುವುದು ಕೆಲವು ಕಡೆ ಕಂಡುಬಂದಿರುತ್ತದೆ. ಸದರಿ ಕೊಳವೆ ಮಾರ್ಗ ಮತ್ತು ಆಳುಗುಂಡಿ ದುರಸ್ಥಿಯನ್ನು ನಗರಸಭೆಯ ವತಿಯಿಂದ ಸರಿಪಡಿಸಲಾಗುತ್ತಿದೆ. ಬಿಟ್ಟು ಹೋಗಿರುವ, ಹಾನಿಯಾಗಿರುವ ಕೊಳವೆ ಮಾರ್ಗವನ್ನು ಸರಿಪಡಿಸಲು, ಒಳಚರಂಡಿ ಗೃಹ ಸಂಪರ್ಕಗಳನ್ನು ಕಲ್ಪಿಸಲು ಮತ್ತು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ನಿರ್ದೇಶನದನ್ವಯ ಮಲೀನ ನೀರು ಶುದ್ಧೀಕರಣ ಘಟಕವನ್ನು ನವೀಕರಿಸುವ ಕಾಮಗಾರಿಯನ್ನು ಕೈಗೊಳ್ಳಲು ರೂ.3686.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ: 22-05-2020 ರಂದು ಸರ್ಕಾರದ ಅನುಮೋದನೆಗಾಗಿ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಇ)	ನಂಜನಗೂಡು ಪಟ್ಟಣದ ಒಳಚರಂಡಿಯ ನೀರು ಕಪಿಲಾ ನದಿಗೆ ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ.
ಈ)	ನದಿಯ ನೀರಿಗೆ ಒಳಚರಂಡಿಯ ನೀರು ಸೇರುವುದರಿಂದ ಪ್ರಾಣಿಗಳು, ಮನುಷ್ಯರು ಮತ್ತು ಶ್ರೀ ಶ್ರೀಕಂಠೇಶ್ವರ ದೇವರ ಪೂಜೆಗೆ ಇದೇ ನೀರನ್ನು ಬಳಸುವ ಹಿನ್ನೆಲೆಯಲ್ಲಿ ಏನಾದರೂ ಅವಗಡ ಸಂಭವಿಸಿದರೆ ಯಾರು ಹೊಣೆ;	ನಂಜನಗೂಡು ಪಟ್ಟಣದ ಒಳಚರಂಡಿಯ ನೀರು ಕಪಿಲಾ ನದಿಗೆ ಎರಡು ಸ್ಥಳಗಳಲ್ಲಿ ಸೇರುತ್ತಿರುವುದು ಕಂಡು ಬಂದಿದೆ. ಈಗಾಗಲೇ ಕಪಿಲಾ ನದಿಯ ದಡದಲ್ಲಿನ ಹದಿನಾರುಕಾಲು ಮಂಟಪದ ಬಳಿ ಕಪಿಲಾ ನದಿಗೆ ಮತ್ತು ಒಕ್ಕಲಗೇರಿಯ ಬಳಿ ಗುಂಡ್ಲು ನದಿಗೆ ಸೇರುತ್ತಿದ್ದ ತ್ಯಾಜ್ಯ ನೀರನ್ನು Interception and Diversion ಕಾಮಗಾರಿ ಕೈಗೊಂಡು, ಒಳಚರಂಡಿ ಯೋಜನೆಯಡಿ ನಿರ್ಮಿಸಿರುವ ತೇವಬಾವಿಗೆ ಸಂಪರ್ಕ ಕಲ್ಪಿಸಲಾಗಿದ್ದು, ತ್ಯಾಜ್ಯ ನೀರನ್ನು ಮಲೀನ ನೀರು ಶುದ್ಧಿಕರಣ ಘಟಕಕ್ಕೆ ಮುಂದಿನ ಸಂಸ್ಕರಣೆಗಾಗಿ ಪಂಪು ಮಾಡಲಾಗುತ್ತಿದೆ.

ಉ)	ಈ ನಗರದ ಒಳಚರಂಡಿ ವ್ಯವಸ್ಥೆ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಮೊಕದ್ದಮೆ ಸಂಖ್ಯೆ :ಸಿಸಿ 631/2014 ರಲ್ಲಿ ಪ್ರಕರಣವನ್ನು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಊ)	ಬಂದಿದ್ದಲ್ಲಿ, ಪ್ರಕರಣದ ಕುರಿತು ಸರ್ಕಾರದ ನಿಲುವೇನು;	ಹದಿನಾರುಕಾಲು ಮಂಟಪದ ಬಳಿ ಕಪಿಲಾ ನದಿಗೆ ತ್ಯಾಜ್ಯ ನೀರು ಸೇರುತ್ತಿರುವುದರ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಗರಸಭೆ, ನಂಜನಗೂಡು ಇವರ ಮೇಲೆ ಮೊಕದ್ದಮೆ ದಾಖಲಿಸಿರುತ್ತಾರೆ. ಈಗಾಗಲೇ ಕಪಿಲಾ ನದಿಯ ದಡದಲ್ಲಿನ ಹದಿನಾರುಕಾಲು ಮಂಟಪದ ಬಳಿ ಕಪಿಲಾ ನದಿಗೆ ಸೇರುತ್ತಿದ್ದ ತ್ಯಾಜ್ಯ ನೀರನ್ನು Interception and Diversion ಕಾಮಗಾರಿ ಕೈಗೊಂಡು ಒಳಚರಂಡಿ ಯೋಜನೆಯಡಿ ನಿರ್ಮಿಸಿರುವ ತೇವಬಾವಿಗೆ ಸಂಪರ್ಕ ಕಲ್ಪಿಸಲಾಗಿದ್ದು, ತ್ಯಾಜ್ಯ ನೀರನ್ನು ಮಲಿನ ನೀರು ಶುದ್ಧಿಕರಣ ಘಟಕಕ್ಕೆ ಮುಂದಿನ ಸಂಸ್ಕರಣೆಗಾಗಿ ಪಂಪು ಮಾಡಲಾಗುತ್ತಿದೆ.
ಋ)	ನಂಜನಗೂಡು ಪಟ್ಟಣದ ಒಳಚರಂಡಿ ನೀರು ಕಪಿಲಾ ನದಿಗೆ ಹೋಗುವುದನ್ನು ತಪ್ಪಿಸಿ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹರಿಯುವಂತೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವ ಹಂತದಲ್ಲಿದೆ; ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಬೇಕಾಗುವ ಕಾಲಾವಕಾಶವೆಷ್ಟು ?	ನಂಜನಗೂಡು ಪಟ್ಟಣದಲ್ಲಿ ಕಪಿಲಾ ನದಿಗೆ ತ್ಯಾಜ್ಯ ನೀರು ಸೇರುವುದನ್ನು ಸಂಪೂರ್ಣವಾಗಿ ತಡೆಯಲು ಬಿಟ್ಟು ಹೋಗಿರುವ, ಹಾನಿಯಾಗಿರುವ ಕೊಳವೆ ಮಾರ್ಗವನ್ನು ಸರಿಪಡಿಸಲು, ಒಳಚರಂಡಿ ಗೃಹ ಸಂಪರ್ಕಗಳನ್ನು ಕಲ್ಪಿಸಲು ಮತ್ತು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ನಿರ್ದೇಶನದನ್ವಯ ಮಲೀನ ನೀರು ಶುದ್ಧೀಕರಣ ಘಟಕವನ್ನು ನವೀಕರಿಸುವ ಕಾಮಗಾರಿಯ ರೂ.3686.00 ಲಕ್ಷಗಳ ಅಂದಾಜು ಪಟ್ಟಿಯು ದಿನಾಂಕ:22-05-2020 ರಂದು ಸರ್ಕಾರದ ಅನುಮೋದನೆಗಾಗಿ ಸ್ವೀಕೃತಗೊಂಡಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. ಸದರಿ ಪ್ರಸ್ತಾವನೆಯು ಅನುಮೋದನೆಗೊಂಡ ನಂತರ ಕಾಮಗಾರಿ ಕೈಗೆತ್ತಿಕೊಂಡು 2 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು.

ಸಂಖ್ಯೆ ನಅಇ 166 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 73 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1117ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1117ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಸಿ.ಎಸ್. ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ & ನಯೋಸೇ)
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1117
ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)
ಉತ್ತರಿಸುವ ದಿನಾಂಕ	:	11-12-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಾಪು ಯೋಜನಾ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವ ಮೊದಲು ಗ್ರಾಮಪಂಚಾಯತ್ ಹಂತದಲ್ಲಿ ವಿಂಗಡಿಸಿ ವಿನ್ಯಾಸ ಅನುಮೋದನೆ ಪಡೆದ ವಸತಿ ನಿವೇಶನಗಳಿಗೆ ಪ್ರಸ್ತುತ ಏಕ ವಿನ್ಯಾಸ ಅನುಮೋದನೆ ನೀಡಲು ಸಾಧ್ಯವಾಗದೇ ಸಾರ್ವಜನಿಕರು ಸಂಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕಾಪು ಸ್ಥಳೀಯ ಯೋಜನಾ ಪ್ರದೇಶದ ಘೋಷಣೆಯ ಪೂರ್ವದಲ್ಲಿ ಭೂ ಪರಿವರ್ತನೆಗೊಂಡ ಜಮೀನುಗಳಿಗೆ ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ವಿನ್ಯಾಸ ಅನುಮೋದನೆ ಪಡೆಯಬೇಕಾಗಿದ್ದು, ಈ ರೀತಿ ಅನುಮೋದನೆ ಪಡೆಯದೆ ಗ್ರಾಮ ಪಂಚಾಯತಿ ಹಂತದಲ್ಲಿ ನಿವೇಶನಗಳಾಗಿ ವಿಂಗಡಿಸಿರುವುದು ಅನಧಿಕೃತ ಅಭಿವೃದ್ಧಿಯಾಗಿದ್ದು, ಇವುಗಳಿಗೆ ಪ್ರಸ್ತುತ ಏಕ ವಿನ್ಯಾಸ ಅನುಮೋದನೆ ನೀಡಲು ಅವಕಾಶವಿರುವುದಿಲ್ಲ.
ಆ)	ಕಾಪು ಯೋಜನಾ ಪ್ರಾಧಿಕಾರ ವ್ಯಾಪ್ತಿಯಲ್ಲಿ ವಸತಿ ನಿವೇಶನಗಳಿಗೆ ಏಕ ವಿನ್ಯಾಸ ಅನುಮೋದನೆಗೆ ಬಾಕಿಯಿರುವ ಎಲ್ಲ ಪ್ರಕರಣಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರ ನೀಡುವುದು)	

ಸಂಖ್ಯೆ: ನಅಇ 73 ಎಲ್ಎಕ್ಯೂ 2020 (ಇ-ಕಡತ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 169 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಉಮೇಶ್ ವಿಶ್ವನಾಥ್ ಕತ್ತಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 982ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಉಮೇಶ್ ವಿಶ್ವನಾಥ್ ಕತ್ತಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 982ಕ್ಕೆ ಸಂಬಂಧಿಸಿದ ಉತ್ತರದ ..25...ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	982
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹುಕ್ಕೇರಿ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆಯೇ;	ಹೌದು
ಆ	ಹಾಗಿದ್ದಲ್ಲಿ, ಈ ಮೊದಲು ಯಾವಾಗ ಅನುಮೋದನೆ ನೀಡಲಾಗಿತ್ತು ಮತ್ತು ಎಷ್ಟು ಅನುದಾನಕ್ಕೆ ಅನುಮೋದನೆ ನೀಡಲಾಗಿತ್ತು; (ವಿವರ ನೀಡುವುದು)	ಹುಕ್ಕೇರಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಯ ರೂ.1370.0 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ ನಅಇ 02 ಯುಡಿಎಸ್ 2012, ದಿನಾಂಕ 05.06.2012 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.
ಇ	ಈ ಒಳಚರಂಡಿ ಕಾಮಗಾರಿಗಳಿಗೆ ಮರು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ;	ಹುಕ್ಕೇರಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಗೆ ಮರು ಅಂದಾಜನ್ನು ಸೇರಿಸಿ ರೂ.6685.00 ಲಕ್ಷಗಳ ಮಾರ್ಪಡಿತ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ 22.09.2020 ರಂದು ಆಡಳಿತಾತ್ಮಕ ಅನುಮೋದನೆಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಈ	ಹಾಗಿದ್ದಲ್ಲಿ, ಮರು ಅಂದಾಜಿನ ಪ್ರಕಾರ ಸದರಿ ಕಾಮಗಾರಿಗಳ ಅಂದಾಜು ಮೊತ್ತವೆಷ್ಟು; (ಪೂರ್ಣ ವಿವರ ನೀಡುವುದು)	
ಉ	ಸದರಿ ಅಂದಾಜಿನ ಪ್ರಕಾರ ಈ ಕಾಮಗಾರಿಗಳಿಗೆ ಅನುಮೋದನೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;	
ಊ	ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾಲಮಿತಿಯೇನು?	ಪ್ರಸ್ತಾವನೆಗೆ ಅನುಮೋದನೆ ನೀಡಿದ ನಂತರ ಟೆಂಡರ್ ಮೂಲಕ 3 ವರ್ಷಗಳ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಸಂಖ್ಯೆ: ನಅಇ 169 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 173 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಲಿಂಗೇಶ್ ಕೆ.ಎಸ್. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1060ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಲಿಂಗೇಶ್ ಕೆ.ಎಸ್. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1060ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್ (ಬೇಲೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1060
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಮಾನದಂಡದಂತೆ ಬೇಲೂರು ಪಟ್ಟಣಕ್ಕೆ 3ನೇ ಹಂತದ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ರೂ.4300 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ;	ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ನಿರ್ದೇಶನದಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೇಲೂರು ನಗರಕ್ಕೆ ರೂ.4300.00 ಲಕ್ಷಗಳ ಒಳಚರಂಡಿ ಯೋಜನೆಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ 30.06.2020ರಂದು ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಆ)	ಯಾವಾಗ ಅನುದಾನ ಮಂಜೂರು ಮಾಡಿ, ಕಾಮಗಾರಿಯನ್ನು ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ ನಅಇ 173 ಯು.ಎಂ.ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 190 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಭೀಮಾನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:405ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಭೀಮಾನಾಯ್ಕ ಎಸ್ (ಹಗರಿಬೊಮ್ಮನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:405ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	405
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹಗರಿಬೊಮ್ಮನಹಳ್ಳಿ, ಕೊಟ್ಟೂರು ಮತ್ತು ಮರಿಯಮ್ಮನಹಳ್ಳಿ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;	ಹಗರಿಬೊಮ್ಮನಹಳ್ಳಿ, ಕೊಟ್ಟೂರು ಮತ್ತು ಮರಿಯಮ್ಮನಹಳ್ಳಿ ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸ್ಥಳೀಯ ಸಂಸ್ಥೆಗಳಿಂದ ಕೋರಿಕೆಯನ್ನು ಪಡೆದು, ಸರ್ವೆ ಕಾರ್ಯ ಕೈಗೊಂಡು ವಿನ್ಯಾಸ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕ್ರಮವಹಿಸುತ್ತಿದ್ದು, ಪ್ರಸ್ತಾವನೆ ಸ್ವೀಕೃತವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಲಾಗುವುದು.
ಇ)	ಹಾಗಿದ್ದಲ್ಲಿ, ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಂಬಂಧದಲ್ಲಿ ಸರ್ಕಾರದ ನಿಲುವೇನು: (ಮಾಹಿತಿ ನೀಡುವುದು)	

ಸಂಖ್ಯೆ ನಅಇ 184 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 183 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15–12–2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಮಹಾದೇವ ಕೆ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:518ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಮಹಾದೇವ ಕೆ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:518ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ–2 & ಮಂಡಳಿ)

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	518
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಪುರಸಭೆ ಸುಮಾರು 25000 ಜನಸಂಖ್ಯೆ ಹೊಂದಿದ್ದು ಹಾಲಿ ಜಾರಿಯಲ್ಲಿರುವ ನೀರು ಸರಬರಾಜು ಯೋಜನೆಯಿಂದ ಸಮರ್ಪಕವಾಗಿ ನೀರು ಪೂರೈಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಈ ಯೋಜನೆಗೆ ಕಾವೇರಿ ನದಿಯಿಂದ, 2ನೇ ಹಂತದ ನೀರು ಸರಬರಾಜು ಯೋಜನೆಯನ್ನು ಸರ್ಕಾರ ಯಾವಾಗ ಕಾರ್ಯಗತಗೊಳಿಸಲಾಗುವುದು? (ವಿವರ ನೀಡುವುದು)	ಪಿರಿಯಾಪಟ್ಟಣಕ್ಕೆ ಕಾವೇರಿ ನದಿ ಮೂಲದಿಂದ 2ನೇ ಹಂತದ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜು ಪಟ್ಟಿಯನ್ನು ರೂ.67.30 ಕೋಟಿಗಳಿಗೆ ತಯಾರಿಸಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿನಾಂಕ 13-02-2015 ರಂದು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾನವೆಯನ್ನು ಸಲ್ಲಿಸಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನದ ಕೊರತೆಯಿದ್ದರಿಂದ ದಿನಾಂಕ 03.11.2015 ರಂದು ತಿರಸ್ಕರಿಸಲಾಗಿದೆ. ಪಿರಿಯಾಪಟ್ಟಣವು ಪಟ್ಟಣ ಪಂಚಾಯಿತಿಯಿಂದ ಪುರಸಭೆಯಾಗಿ ಮೇಲ್ದರ್ಜೆಗೇರಿರುತ್ತದೆ. ಹಾಲಿ ಇರುವ ನೀರು ಸರಬರಾಜು ಯೋಜನೆಯ ಮೂಲಸ್ಥಾವರವು ಕುಶಾಲನಗರ ಹತ್ತಿರವಿರುವ ಕಾವೇರಿ ನದಿ ದಂಡೆಯಲ್ಲಿರುತ್ತದೆ. ಸದರಿ ಮೂಲಸ್ಥಾವರದಲ್ಲಿ ಬೇಸಿಗೆ ಸಮಯದಲ್ಲಿ ನೀರಿನ ಕೊರತೆ ಉಂಟಾಗಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ಈ ಕಾರಣದಿಂದ ಹಾಗೂ ಪುರಸಭೆ ಕೋರಿಕೆಯಂತೆ, ಹೆಚ್ಚು ನೀರು ಲಭ್ಯವಿರುವ ಕಾವೇರಿ ನದಿಯ ಹಾಡ್ಯ ಹತ್ತಿರದಿಂದ ಹೊಸ ಯೋಜನೆಯನ್ನು ರೂಪಿಸಲು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ ನಅಇ 183 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 188 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪೂರ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 533ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪೂರ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 533ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	533
ಉತ್ತರಿಸಬೇಕಾದ ದಿನಾಂಕ	:	11.12.2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ತಾವರಗೇರಾ ಪಟ್ಟಣಕ್ಕೆ ತುಂಗಭದ್ರಾ ನದಿಯ ಮೂಲಕ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು
ಆ	ಇದ್ದಲ್ಲಿ, ಸದರಿ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆಯೇ;	ಹೌದು
ಇ	ಹಾಗಿದ್ದಲ್ಲಿ, ಇದಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು;	ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಪಟ್ಟಣಕ್ಕೆ ತುರುವಿಹಳ್ಳ ಹತ್ತಿರ, ತುಂಗಭದ್ರಾ ಎಡದಂಡೆ ಕಾಲುವೆ ಮೂಲದಿಂದ ನೀರು ಸರಬರಾಜು ಮಾಡಲು ರೂ.88.16 ಕೋಟಿಗಳ ಅಂದಾಜು ಪಟ್ಟಿಗೆ ದಿನಾಂಕ 15.07.2019 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ತದನಂತರ ಆಡಳಿತಾತ್ಮಕ ಕಾರಣಗಳಿಂದ ಸದರಿ ಯೋಜನೆಯನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ.
ಈ	ಸದರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	

ಸಂಖ್ಯೆ: ನಅಇ 188 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 170 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ. ರಾಮಸ್ವಾಮಿ ಎ.ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1071ಕ್ಕೆ ಉತ್ತರ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ರಾಮಸ್ವಾಮಿ ಎ.ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1071ಕ್ಕೆ ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ನಗರಾಭಿವೃದ್ಧಿ ಇಲಾಖೆ.
(ಎಂ.ಎ-2 & ಮಂಡಳಿ)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ರಾಮಸ್ವಾಮಿ ಎ.ಟಿ (ಅರಕಲಗೂಡು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1071
ಉತ್ತರಿಸಬೇಕಾದ ದಿನಾಂಕ	:	11.12.2020
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ಅರಕಲಗೂಡು ಪಟ್ಟಣದ ಒಳಚರಂಡಿ ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗಿದೆ;	ಅರಕಲಗೂಡು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ರೂ.18.00 ಕೋಟಿಗಳ ಯೋಜನೆಗೆ ದಿನಾಂಕ: 03.10.2013 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯಡಿಯಲ್ಲಿ ಪಟ್ಟಣದ ಭೌಗೋಳಿಕಕ್ಕೆ ಅನುಗುಣವಾಗಿ ನಾಲ್ಕು ವಲಯಗಳನ್ನಾಗಿ ವಿಂಗಡಿಸಲಾಗಿರುತ್ತದೆ. ತ್ಯಾಜ್ಯನೀರು ಸಂಸ್ಕರಣ ಘಟಕಗಳಿಗಾಗಿ ಭೂಸ್ವಾಧೀನ ವೆಚ್ಚ ಹಾಗೂ ಹೊಸದರಪಟ್ಟಿಯ ಅನುಸಾರ ದರಗಳ ಹೆಚ್ಚಳದಿಂದ ಯೋಜನೆಯ ವೆಚ್ಚವು ಅನುಮೋದಿತ ಅಂದಾಜು ಮೊತ್ತವನ್ನು ಮೀರಬಹುದಾಗಿದ್ದರಿಂದ, ಅನುಮೋದಿತ ಅಂದಾಜಿಗೆ ವೆಚ್ಚವನ್ನು ಸೀಮಿತಗೊಳಿಸುವ ಸಲುವಾಗಿ ಪಟ್ಟಣದ ಹೆಚ್ಚಿನ ಜನಸಾಂದ್ರತೆಯುಳ್ಳ ವಲಯ-4 ರಲ್ಲಿ ಒಳಚರಂಡಿ ಕೊಳವೆ ಮಾರ್ಗ ಹಾಗೂ ಆಳುಗುಂಡಿಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೊಂಡು ಏಪ್ರಿಲ್-2016 ರಲ್ಲಿ ಪ್ರಾರಂಭಿಸಲಾಗಿರುತ್ತದೆ.
ಆ)	ಈ ಕಾಮಗಾರಿಯು ಸ್ಥಗಿತಗೊಳ್ಳಲು ಕಾರಣವೇನು;	ಅರಕಲಗೂಡು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ 3 ಸಂಖ್ಯೆಯ ವೆಟ್‌ವೆಲ್‌ಗಳು ಹಾಗೂ 2 ಸಂಖ್ಯೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಗಾಗಿ ಸ್ಥಳೀಯ ಸಂಸ್ಥೆಯವರಿಂದ ಜಾಗಗಳನ್ನು ಮಂಡಳಿಗೆ ಹಸ್ತಾಂತರಿಸದ ಕಾರಣ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ.
ಇ)	ಸಂಸ್ಕರಣಾ ಘಟಕ (Treatment plant) ಮತ್ತು ಕೊಳಚೆ ನೀರು ಗುಂಡಿ (wetwell) ಗಳಿಗೆ ಸ್ಥಳವನ್ನೇ ಗುರುತಿಸದೇ ಅವೈಜ್ಞಾನಿಕವಾಗಿ ಪೈಪುಗಳನ್ನು ಅಳವಡಿಸಲು ಕಾರಣಗಳೇನು; ಇದುವರೆವಿಗೂ ಕಾಮಗಾರಿಗೆ ಆಗಿರುವ ವೆಚ್ಚವೆಷ್ಟು;	ಅರಕಲಗೂಡು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ವಿವರವಾದ ಸರ್ವೆ ಕಾರ್ಯ ಕೈಗೊಂಡು ಪಟ್ಟಣದ ಭೌಗೋಳಿಕಕ್ಕೆ ಅನುಗುಣವಾಗಿ ನಾಲ್ಕು ವಲಯಗಳನ್ನಾಗಿ ವಿಂಗಡಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ

ವಲಯದ ವಿವರ	ಕೊಳವೆ ಮಾರ್ಗ (ಕಿ.ಮೀ)	ತೇವ ಬಾವಿ (ಸಂಖ್ಯೆ)	ಎಸ್.ಟಿ.ಪಿ (ಎಂ.ಎಲ್.ಡಿ)	ಷರಾ
ವಲಯ 1	1.38	1	-	ತೇವಬಾವಿ ನಿರ್ಮಾಣಕ್ಕೆ ಜಾಗದ ಲಭ್ಯತೆ ಇಲ್ಲದ ಕಾರಣ ಕೊಳವೆಮಾರ್ಗ ಹಾಗೂ ತೇವಬಾವಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.
ವಲಯ 2	11.59	0	1.1 ಎಂ.ಎಲ್.ಡಿ	ಎಸ್.ಟಿ.ಪಿ ನಿರ್ಮಾಣಕ್ಕೆ ಜಾಗದ ಲಭ್ಯತೆ ಇಲ್ಲದ ಕಾರಣ ಕೊಳವೆಮಾರ್ಗ ಹಾಗೂ ಎಸ್.ಟಿ.ಪಿ

				ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.
ವಲಯ 3	3.07	1	-	ತೇವಬಾವಿ ನಿರ್ಮಾಣಕ್ಕೆ ಜಾಗದ ಲಭ್ಯತೆ ಇಲ್ಲದ ಕಾರಣ ಕೊಳವೆಮಾರ್ಗ ಹಾಗೂ ತೇವಬಾವಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.
ವಲಯ 4	25.94	1	1.3 ಎಂ.ಎಲ್.ಡಿ	ತೇವಬಾವಿ ಹಾಗೂ ಎಸ್.ಟಿ.ಪಿ ನಿರ್ಮಾಣಕ್ಕೆ ಜಾಗದ ಲಭ್ಯತೆ ಇಲ್ಲದಿದ್ದರೂ ಸಹ ಈ ವಲಯದಲ್ಲಿ ಜನಸಾಂದ್ರತೆ ಹೆಚ್ಚಿರುವುದರಿಂದ ತ್ಯಾಜ್ಯ ನೀರನ್ನು ಪಟ್ಟಣದಿಂದ ಹೊರ ಹಾಕುವ ಕಾರಣದಿಂದ ಅವಶ್ಯವಿರುವ ಜಮೀನುಗಳನ್ನು ಸ್ಥಳೀಯ ಸಂಸ್ಥೆಯು ಹಸ್ತಾಂತರಿಸುವುದಾಗಿ ಠರಾವು ನೀಡಿದ್ದರಿಂದ ಒಳಚರಂಡಿ ಕೊಳವೆ ಮಾರ್ಗವನ್ನು ವಿನ್ಯಾಸಕ್ಕನುಗುಣವಾಗಿ ವೈಜ್ಞಾನಿಕವಾಗಿ ಅಳವಡಿಸಲಾಗಿದೆ. 27 ಕಿ.ಮೀ ಕೊಳವೆಮಾರ್ಗ ಪೂರ್ಣಗೊಂಡಿರುತ್ತದೆ.

ವೆಟ್‌ವೆಲ್‌ಗಳು ಹಾಗೂ ಮಲೀನ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಗುರುತಿಸಲಾಗಿದ್ದ ಜಮೀನನ್ನು ನೀಡಲು ಭೂ ಮಾಲೀಕರು ವಿರೋಧ ವ್ಯಕ್ತಪಡಿಸಿದ್ದರಿಂದ ವಿನ್ಯಾಸದ ಅವಶ್ಯಕತೆಗೆ ಅನುಗುಣವಾಗಿ ಬದಲಿ ಜಮೀನನ್ನು ಗುರುತಿಸಿ ಸ್ವಾಧೀನ ಪಡಿಸಿಕೊಳ್ಳುವಲ್ಲಿ ವಿಳಂಬವಾಗಿರುತ್ತದೆ. ಇದುವರೆಗಿನ ಯೋಜನಾ ವೆಚ್ಚ ರೂ.13.69 ಕೋಟಿಗಳಾಗಿರುತ್ತದೆ.

ಈ)	ಯಾವ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು (ವಿವರ ನೀಡುವುದು)?	ವೆಟ್‌ವೆಲ್ ಹಾಗೂ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಿಸಲು ಜಮೀನನ್ನು ಅರಕಲಗೂಡು ಪಟ್ಟಣ ಪಂಚಾಯಿತಿಯು ಮಂಡಳಿಗೆ ಹಸ್ತಾಂತರಿಸಿದ ನಂತರ ನಿಯಮಾನುಸಾರ ಬಾಕಿ ಇರುವ ಕಾಮಗಾರಿಯನ್ನು 18 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ನಅಇ 170 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ರೇಷ್ಮೆ 179 ರೇಕೃವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:15/12/2020

ಇಂದ:-
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1086 ಕ್ಕೆ ಉತ್ತರ.

ಉಲ್ಲೇಖ: ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.1086/2020, ದಿನಾಂಕ:05/12/2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1086 ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಹೆಚ್.ವಿನುತ),
ಸರ್ಕಾರದ ಅಧೀನ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
(ರೇಷ್ಮೆ)

ಪ್ರತಿ:-

1) ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1086
ಸದಸ್ಯರ ಹೆಸರು: ಶ್ರೀ ಶಿವಾನಂದ ಎಸ್. ಪಾಟೀಲ್
ಉತ್ತರಿಸುವ ದಿನಾಂಕ: 11-12-2020
ಉತ್ತರಿಸುವವರು: ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು ತಾವು ಬೆಳೆದ ರೇಷ್ಮೆ ಗೂಡುಗಳನ್ನು ಮಾರಾಟ ಮಾಡುವುದಕ್ಕೆ ಎಲ್ಲೆಲ್ಲಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ:	ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು ಬೆಳೆದ ರೇಷ್ಮೆ ಗೂಡುಗಳನ್ನು ಮಾರಾಟ ಮಾಡುವುದಕ್ಕೆ ರೇಷ್ಮೆ ಇಲಾಖೆಯಿಂದ 55 ರೇಷ್ಮೆ ಗೂಡು ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.
ಆ	ರಾಜ್ಯದ ಉತ್ತರ ಭಾಗದಲ್ಲಿನ ರೇಷ್ಮೆ ಬೆಳೆಗಾರರಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಉತ್ತರ ಕರ್ನಾಟಕದ ಭಾಗದ ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ ಮುಧೋಳ್, ಕೂಡ್ಲಿಗಿ, ರಾಯಾಪುರ, ಲಿಂಗಸಗೂರು, ಜೇವರ್ಗಿ, ಹಾವೇರಿ, ಶಿರಹಟ್ಟಿ, ಗುಲ್ಬರ್ಗ, ಹುಮ್ನಬಾದ್, ಅಥಣಿ, ಗೋಕಾಕ್, ವಿಜಯಪುರ, ಇಳಕಲ್‌ಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ.
ಇ	ಹಾಗಿದ್ದಲ್ಲಿ, ಉತ್ತರ ಭಾಗದ ಅಂದರೆ ವಿಜಯಪುರ, ಬಾಗಲಕೋಟೆ ಮುಂತಾದ ಜಿಲ್ಲೆಗಳ ರೇಷ್ಮೆ ಬೆಳೆಗಾರರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವುದಕ್ಕೆ ವಿಜಯಪುರ ದಲ್ಲಿ ರೇಷ್ಮೆ ಮಾರುಕಟ್ಟೆ ಸ್ಥಾಪಿಸಲಾಗುವುದೇ:	ವಿಜಯಪುರದಲ್ಲಿ ಈಗಾಗಲೇ ರೇಷ್ಮೆ ಗೂಡು ಮಾರುಕಟ್ಟೆಯನ್ನು ಸ್ಥಾಪಿಸಲಾಗಿದ್ದು, ಸದರಿ ಮಾರುಕಟ್ಟೆಯಲ್ಲಿ ಪ್ರತಿ ದಿನ 100-200 ಕೆ.ಜಿ. ರೇಷ್ಮೆ ಗೂಡು ವಹಿವಾಟಾಗುತ್ತಿದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಹೆಚ್ಚು ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕೇಂದ್ರಿಕೃತವಾಗಿರುವುದರಿಂದ ಸ್ಪರ್ಧಾತ್ಮಕ ಬೆಲೆಯನ್ನು ನಿರೀಕ್ಷಿಸಿ ಉತ್ತರ ಕರ್ನಾಟಕದ ಭಾಗದ ರೇಷ್ಮೆ ಬೆಳೆಗಾರರು ದಕ್ಷಿಣ ಕರ್ನಾಟಕ ಭಾಗದಲ್ಲಿರುವ ರೇಷ್ಮೆ ಗೂಡಿನ ಮಾರುಕಟ್ಟೆಗೆ ವಹಿವಾಟಿಗಾಗಿ ರೇಷ್ಮೆ ಗೂಡನ್ನು ತರುತ್ತಾರೆ. ಉತ್ತರ ಕರ್ನಾಟಕದ ಜಿಲ್ಲೆಗಳ ರೇಷ್ಮೆ ಬೆಳೆಗಾರರು, ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕೇಂದ್ರಿಕೃತವಾಗಿರುವ ದಕ್ಷಿಣ ಕರ್ನಾಟಕ ಭಾಗದ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ವಹಿವಾಟು ಮಾಡಿದಲ್ಲಿ ದ್ವಿತಳಿ ರೇಷ್ಮೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕಾ ವೆಚ್ಚ ನೀಡಲಾಗುತ್ತಿದೆ.
ಈ	ಹಾಗಿದ್ದಲ್ಲಿ, ರೇಷ್ಮೆ ಮಾರುಕಟ್ಟೆಯನ್ನು ಯಾವಾಗ ಸ್ಥಾಪಿಸಲಾಗುವುದು?	ಉದ್ಭವಿಸುವುದಿಲ್ಲ.

ರೇಷ್ಮೆ 179 ರೇಕೃವಿ 2020

(ನಾರಾಯಣಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ವಿಧಾನ ಪರಿಷತ್ತಿನ ಪ್ರಶ್ನೆ ಸಂಖ್ಯೆ 1086ಕ್ಕೆ ಅನುಬಂಧ

ರಾಜ್ಯದಲ್ಲಿರುವ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ವಿವರಗಳು

ಕ್ರ.ಸಂ	ಜಿಲ್ಲೆ	ಮಾರುಕಟ್ಟೆಯ ಹೆಸರು
ಮಿಶ್ರತಳಿ/ವಾಣಿಜ್ಯ ರೇಷ್ಮೆ ಗೂಡಿನ ಮಾರುಕಟ್ಟೆಗಳು		
1	ಬೆಂಗಳೂರು(ಗ್ರಾ)	ವಿಜಯಪುರ
2	ಬಾಗಲಕೋಟೆ	ಮುಧೋಳ
3		ಇಳಕಲ್
4	ಬೆಳಗಾಂ	ಅಥಣಿ
5		ಗೋಕಾಕ್
6	ಬಳ್ಳಾರಿ	ಕೂಡ್ಲಿಗಿ
7	ಬೀದರ್	ಹುಮ್ನಾಬಾದ್
8	ಬಿಜಾಪುರ	ಬಿಜಾಪುರ
9	ಚಾಮರಾಜನಗರ	ಚಾಮರಾಜನಗರ
10		ಸಂತೆಮರಹಳ್ಳಿ
11		ಹರವೆ
12		ಕೊಳ್ಳೇಗಾಲ
13		ಹನೂರು
14	ಮೈಸೂರು	ಮೈಸೂರು
15		ತಿ. ನರಸೀಪುರ
16	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
17		ಚಿಂತಾಮಣಿ
18		ಶಿಡ್ಲಘಟ್ಟ
19		ಹೆಚ್. ಕ್ರಾಸ್
20	ದಕ್ಷಿಣ ಕನ್ನಡ	ಬಿ.ಸಿ.ರೋಡ್
21	ದಾವಣಗೆರೆ	ದಾವಣಗೆರೆ
22	ದಾರವಾಡ	ರಾಯಾಪುರ
23	ಗದಗ	ಶಿರಹಟ್ಟಿ
24	ಗುಲ್ಬರ್ಗ	ಗುಲ್ಬರ್ಗ
25		ಜೇವರ್ಗಿ
26	ಕೋಲಾರ	ಕೋಲಾರ
27		ಕ್ಯಾಲನೂರು
28		ಶ್ರೀನಿವಾಸಪುರ
29		ಮುಳಬಾಗಿಲು
30	ಮಂಡ್ಯ	ಮಳವಳ್ಳಿ
31	ರಾಮನಗರ	ರಾಮನಗರ
32		ಚನ್ನಪಟ್ಟಣ
33		ಕನಕಪುರ
34	ರಾಯಚೂರು	ಲಿಂಗಸೂಗೂರು
35	ಹಾವೇರಿ	ಹಾವೇರಿ
ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು		
36	ಬೆಂಗಳೂರು ನಗರ	ಬೆಂಗಳೂರು
37		ಸರ್ಜಾಪುರ
38		ಅತ್ತಿಬೆಲೆ
39	ಬೆಳಗಾಂ	ಬೆಳಗಾಂ
40	ಹಾಸನ	ಹಾಸನ
41	ಕೊಡಗು	ಕುಶಾಲನಗರ
42	ಮಂಡ್ಯ	ಕೆ.ಆರ್.ಪೇಟೆ
43	ಶಿವಮೊಗ್ಗ	ಶಿವಮೊಗ್ಗ
44	ತುಮಕೂರು	ತುಮಕೂರು
45	ಉತ್ತರ ಕನ್ನಡ	ಶಿರಸಿ
ಶುದ್ಧ ಮೈಸೂರು ತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು		
46	ರಾಮನಗರ	ಮಾಗಡಿ
47		ಕುದೂರು
48		ಸೋಲೂರು
49		ವೀರೇಗೌಡನದೊಡ್ಡಿ
50	ತುಮಕೂರು	ಹೆಬ್ಬೂರು
51		ಕುಣಿಗಲ್
52		ಸಂತೆಮಾವತ್ತೂರು
53		ಕೆಂಪನಹಳ್ಳಿ
54		ಹುಲಿಯೂರುದುರ್ಗ
55		ಚೌಡನಕುಪ್ಪೆ

ಕರ್ನಾಟಕ ಸರ್ಕಾರ

ಸಂಖ್ಯೆ:ರೇಷ್ಮೆ 182 ರೇಕೃವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:15/12/2020

ಇಂದ:-
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ನಿರಂಜನ್ ಕುಮಾರ್ ಸಿ.ಎಸ್ (ಗುಂಡ್ಲುಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1001 ಕ್ಕೆ ಉತ್ತರ.

ಉಲ್ಲೇಖ: ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.1001/2020, ದಿನಾಂಕ:05/12/2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಿರಂಜನ್ ಕುಮಾರ್ ಸಿ.ಎಸ್ (ಗುಂಡ್ಲುಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1001 ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಹೆಚ್.ವನಿತ),
ಸರ್ಕಾರದ ಅಧೀನ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
(ರೇಷ್ಮೆ)

ಪ್ರತಿ:-
1) ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1001
2	ಸದಸ್ಯರ ಹೆಸರು	ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)
3	ವಿಷಯ	ರೇಷ್ಮೆ ಇಲಾಖೆಯ ಯೋಜನೆಗಳು
4	ಉತ್ತರಿಸುವ ದಿನಾಂಕ	11-12-2020
5	ಉತ್ತರಿಸುವವರು	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ರೇಷ್ಮೆ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ರೈತರಿಗೆ ನೀಡಲಾಗುತ್ತಿದೆ; (ಯೋಜನೆವಾರು ವಿವರ ನೀಡುವುದು)	ರೇಷ್ಮೆ ಇಲಾಖೆಯಿಂದ ರೇಷ್ಮೆ ಭಾಗಿದಾರರಿಗೆ ಈ ಕೆಳಕಂಡ ಯೋಜನೆಗಳಡಿ ಪ್ರೋತ್ಸಾಹಧನ/ಸಹಾಯಧನ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. 2020-21ಕ್ಕೆ ಯೋಜನಾವಾರು ವಿವರ ಹಾಗೂ ಮೀಸಲಿಟ್ಟಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.
ಆ	ಪ್ರಸಕ್ತ ಸಾಲಿನಲ್ಲಿ ಸದರಿ ಇಲಾಖೆಯಲ್ಲಿ ಎಷ್ಟು ಅನುದಾನವನ್ನು ಕಾಯ್ದಿರಿಸಲಾಗಿದೆ	ರೇಷ್ಮೆ ಇಲಾಖೆಯಲ್ಲಿ 2020-21ರ ಆರ್ಥಿಕ ವರ್ಷಕ್ಕೆ ರೂ.45061.36 ಲಕ್ಷಗಳನ್ನು ಮೀಸಲಿಡಲಾಗಿದೆ.
ಇ	ಕಳೆದ ಮೂರು ವರ್ಷಗಳಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ರೇಷ್ಮೆ ಇಲಾಖೆಯಿಂದ ಮಂಜೂರಾಗಿರುವ ಅನುದಾನ ಎಷ್ಟು? (ಹೋಬಳಿವಾರು ಹಾಗೂ ಯೋಜನೆವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ರೇಷ್ಮೆ ಇಲಾಖೆಯಿಂದ ಮಂಜೂರಾಗಿರುವ ಅನುದಾನದ ವಿವರ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

(ರೂ.ಲಕ್ಷಗಳಲ್ಲಿ)

ಕ್ರ.ಸಂ	ವರ್ಷ	ಕಸಬಾ	ತೆರಕಣಾಂಬಿ	ಹಂಗಳ	ಬೇಗೂರು	ಹರವೆ	ಒಟ್ಟು
01	2017-18	4.868	4.875	3.120	11.491	22.620	46.974
02	2018-19	14.833	4.017	10.355	14.890	15.678	59.773
03	2019-20	3.502	3.552	3.557	10.662	14.377	35.650

ರೇಷ್ಮೆ 182 ರೇಕೃವಿ 2020

(ನಾರಾಯಣಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ವಿಧಾನ ಸಭಾ ಪ್ರಶ್ನೆ ಸಂಖ್ಯೆ 1001ಕ್ಕೆ ಅನುಬಂಧ

2020-21ಕ್ಕೆ ಯೋಜನಾವಾರು ಮೀಸಲಿಟ್ಟಿರುವ ಅನುದಾನದ ವಿವರಗಳು

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾರ್ಯಕ್ರಮದ ವಿವರ	2020-21 ನೇ ಸಾಲಿನ ಆಯವ್ಯಯ
I	**ರಾಜ್ಯ ವಲಯ ಯೋಜನೆಗಳು**	
1	ರಾಜ್ಯ ರೇಷ್ಮೆ ಉದ್ಯಮಗಳು	12895.4375
2	ರೇಷ್ಮೆ ಅಭಿವೃದ್ಧಿ ಯೋಜನೆ	
	ಸಾಮಾನ್ಯ	3474.000
	ವಿಶೇಷ ಘಟಕ ಯೋಜನೆ	1373.000
	ಗಿರಿಜನ ಉಪಯೋಜನೆ	686.000
	ಒಟ್ಟು	5533.000
3	ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು	
	ಸಾಮಾನ್ಯ	1800.000
4	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY)	
	ಸಾಮಾನ್ಯ	2110.000
5	ಬೆಲೆ ಸ್ಥಿರೀಕರಣ ನಿಧಿಯ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು 2851-00-107-1-51	
	ಇತರೆ ವೆಚ್ಚಗಳು	400.000
	ಕಟ್ಟಡ ವೆಚ್ಚಗಳು	780.000
	ಧನ ಸಹಾಯ / ಪರಿಹಾರ	20.000
	ಸಹಾಯಾನುದಾನ	300.000
	ಸಹಾಯಧನ	2000.000
	ಪ್ರಧಾನ ಕಾಮಗಾರಿಗಳು	3000.000
	ಒಟ್ಟು	6500.000
6	ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ	
	ಇತರೆ ವೆಚ್ಚಗಳು	1600.000
	ಪೂರಕ ವೆಚ್ಚಗಳು	200.000
	ಒಟ್ಟು	1800.000
7	ಕಟ್ಟಡ ಕಾಮಗಾರಿಗಳು ಯೋಜನೆ	
	ಬಂಡವಾಳ ವೆಚ್ಚಗಳು	
	ಪ್ರಧಾನ ಕಾಮಗಾರಿಗಳು	190.000
	ವಿಶೇಷ ಘಟಕ ಯೋಜನೆ	7.000
	ಗಿರಿಜನ ಉಪಯೋಜನೆ	3.000
	ಒಟ್ಟು	200.000
8	ರೇಷ್ಮೆ ಗೂಡುಮಾರುಕಟ್ಟೆಯ ನಿರ್ಮಾಣ ಯೋಜನೆ(ನಬಾರ್ಡ್)	612.000
9	ರೇಷ್ಮೆ ಉದ್ಯಮಗಳು ಯೋಜನೆ - (ವಸ್ತ್ರೋದ್ಯಮಗಳು)	
	001-ನಿರ್ದೇಶನ ಮತ್ತು ಆಡಳಿತ 2-ನಿರ್ದೇಶಕರು - ಸರ್ಕಾರಿ ರೇಷ್ಮೆ ಕೈಗಾರಿಕೆಗಳು	17.000
	ಸರ್ಕಾರಿ ರೇಷ್ಮೆ ಫಿಲೇಚರ್, ಸಂತೇಮರಹಳ್ಳಿ	1258.000
	ಒಟ್ಟು	1275.000
	ರಾಜ್ಯ ವಲಯ ಯೋಜನೆಗಳ ಒಟ್ಟು	**32725.438**
II	**ಜಿಲ್ಲಾ ವಲಯ ಯೋಜನೆಗಳು**	
	ಜಿಲ್ಲಾ ಪಂಚಾಯತ್ ಯೋಜನೆಗಳು	
10	ಆಡಳಿತ	8610.130
11	ವಿಶ್ವ ಬ್ಯಾಂಕ್ ಸಹಾಯದ ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ - ಹಂತ 2	485.520
12	ರೇಷ್ಮೆ ಬೆಳೆಗಾರರಿಗೆ ಸಹಾಯ	
	ಧನ ಸಹಾಯ/ಪರಿಹಾರ	780.650
	ವಿಶೇಷ ಘಟಕ ಯೋಜನೆ	154.200
	ಗಿರಿಜನ ಉಪಯೋಜನೆ	65.120
	ಒಟ್ಟು	999.970
	ಜಿಲ್ಲಾ ಪಂಚಾಯತ್ ಯೋಜನೆಗಳ ಒಟ್ಟು	**10095.620**
	ತಾಲ್ಲೂಕು ಪಂಚಾಯತ್ ಯೋಜನೆಗಳು	
13	ಉತ್ಪಾದನೆ/ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ	
	ಧನ ಸಹಾಯ/ಪರಿಹಾರ	132.300
	ಜಿಲ್ಲಾ ವಲಯ ಯೋಜನೆಗಳ ಒಟ್ಟು	10227.920
	ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಒಟ್ಟು (I + II)	**42953.3575**
14	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	2108.00
	ಎಲ್ಲಾ ಒಟ್ಟು	**45061.3575**

ಕರ್ನಾಟಕ ಸರ್ಕಾರ

ಸಂಖ್ಯೆ:ರೇಷ್ಮೆ 181 ರೇಕೃವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:15/12/2020

ಇಂದ:-
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹರ್ಷವರ್ಧನ್ ಬಿ (ನಂಜನಗೂಡು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1024 ಕ್ಕೆ ಉತ್ತರ.

ಉಲ್ಲೇಖ: ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.1024/2020, ದಿನಾಂಕ:04/12/2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹರ್ಷವರ್ಧನ್ ಬಿ (ನಂಜನಗೂಡು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1024 ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಹೆಚ್.ವನಿತ),
ಸರ್ಕಾರದ ಅಧೀನ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
(ರೇಷ್ಮೆ)

ಪ್ರತಿ:-

1) ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1024**
2	ಸದಸ್ಯರ ಹೆಸರು	ಶ್ರೀ ಹರ್ಷವರ್ಧನ್ ಬಿ.(ನಂಜನಗೂಡು)
3	ವಿಷಯ	ರೇಷ್ಮೆ ಉತ್ಪಾದನೆ ಬೆಳೆ ನೌಕರರ ಕೆಲಸ ಹಾಗೂ ಜಮೀನು ಹಸ್ತಾಂತರ:
4	ಉತ್ತರಿಸುವ ದಿನಾಂಕ	11-12-2020
5	ಉತ್ತರಿಸುವವರು	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರಗಳು

ಅ ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತಿದೆ; ಎಷ್ಟು ಗೂಡು ಮಾರುಕಟ್ಟೆಗಳಿವೆ; ರೇಷ್ಮೆ ಉತ್ಪಾದನೆಯು ಗಣನೀಯವಾಗಿ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಳಿಮುವಾಗುವುದನ್ನು ತಪ್ಪಿಸಲು ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೇ;

ರಾಜ್ಯದಲ್ಲಿ ಅಕ್ಟೋಬರ್-2020 ಅಂತ್ಯಕ್ಕೆ 282084.30 ಎಕರೆ ವಿಸ್ತೀರ್ಣದಲ್ಲಿ ಹಿಪ್ಪುನೇರಳೆ ಬೆಳೆಯಲಾಗುತ್ತಿದೆ.

ರಾಜ್ಯದಲ್ಲಿ ರೇಷ್ಮೆ ಗೂಡುಗಳ ಪಾರದರ್ಶಕ ವಹಿವಾಟಿಗಾಗಿ ರೇಷ್ಮೆ ಇಲಾಖೆಯಿಂದ 55 ರೇಷ್ಮೆ ಗೂಡು ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ. ಹಿಪ್ಪುನೇರಳೆ ವಿಸ್ತೀರ್ಣದ ವಿವರ ಮತ್ತು ರೇಷ್ಮೆ ಗೂಡು ಮಾರುಕಟ್ಟೆಗಳ ವಿವರಗಳನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂದಾಜು ರೇಷ್ಮೆ ಉತ್ಪಾದನೆಯ ವಿವರ ಕೆಳಕಂಡಂತಿದೆ. (ಮೆ.ಟನ್‌ಗಳಲ್ಲಿ)

ಕ್ರ.ಸಂ.	ಆರ್ಥಿಕ ವರ್ಷ	ರೇಷ್ಮೆ ಉತ್ಪಾದನೆ
01	2017-18	9321.510
02	2018-19	11592.308
03	2019-20	11142.611
04	2020-21 (ಅಕ್ಟೋಬರ್2020ರ ಅಂತ್ಯಕ್ಕೆ)	6373.951

ಕಳೆದ ಮೂರು ವರ್ಷಗಳ ರೇಷ್ಮೆ ಉತ್ಪಾದನೆಯನ್ನು ಗಮನಿಸಿದಾಗ ರೇಷ್ಮೆ ಉತ್ಪಾದನೆಯು ಕುಂಠಿತಗೊಂಡಿರುವುದಿಲ್ಲ. ಆದಾಗ್ಯೂ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸಲು ರೇಷ್ಮೆ ಭಾಗೀದಾರರಿಗೆ ಪ್ರೋತ್ಸಾಹಧನ/ ಸಹಾಯಧನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತೇಜಿಸಲಾಗುತ್ತಿದೆ. ಪ್ರಸ್ತುತ ಪ್ರೋತ್ಸಾಹಧನ/ಸಹಾಯಧನ ಕಾರ್ಯಕ್ರಮಗಳ ವಿವರ ಅನುಬಂಧ-3ರಲ್ಲಿ ನೀಡಿದೆ.

ಆ ರೇಷ್ಮೆ ಇಲಾಖೆಯಲ್ಲಿರುವ ನೌಕರರ ಸಂಖ್ಯೆ ಎಷ್ಟು; ಈ ಇಲಾಖೆಯಲ್ಲಿ ನೌಕರರಿಗೆ ಕೆಲಸವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರವು ಯಾವ ರೀತಿಯಲ್ಲಿ ಬದಲಿ ವ್ಯವಸ್ಥೆಯನ್ನು ಮಾಡಿದೆ; ಕಳೆದ 3 ವರ್ಷಗಳಿಂದ ರೇಷ್ಮೆ ಇಲಾಖೆಯ ಎಷ್ಟು ನೌಕರರು ಯಾವ ಯಾವ ಇಲಾಖೆಗೆ ಹೋಗಿರುತ್ತಾರೆ; (ವಿವರವನ್ನು ಒದಗಿಸುವುದು)

ಪ್ರಸ್ತುತ ರೇಷ್ಮೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿವರ ಕೆಳಕಂಡಂತಿದೆ.

ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ	ಖಾಲಿ ಇರುವ ಹುದ್ದೆ
4299	1763	2536

ಮೇಲ್ಕಂಡ ಅಂಕಿಗಳನ್ನು ಪರಿಶೀಲಿಸಿದಲ್ಲಿ, ರೇಷ್ಮೆ ಇಲಾಖೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಅಧಿಕಾರಿ/ಸಿಬ್ಬಂದಿಗಳು ವಯೋನಿವೃತ್ತಿ ಹೊಂದಿದ್ದು ಕಡಿಮೆಯಾಗಿರುತ್ತದೆ. ಆದಾಗ್ಯೂ ರೇಷ್ಮೆ ಕೃಷಿಯನ್ನು ರಾಜ್ಯದಲ್ಲಿ ವಿಸ್ತರಿಸುವ ಸಲುವಾಗಿ ಲಭ್ಯವಿರುವ ಕಾರ್ಯನಿರತ ಅಧಿಕಾರಿ/ಸಿಬ್ಬಂದಿಗಳಿಂದ ರೇಷ್ಮೆ ಬೆಳೆಗಾರರಿಗೆ ಯಾವುದೇ ತೊಂದರೆಯಾಗದಂತೆ ಕ್ಷೇತ್ರಮಟ್ಟದಲ್ಲಿ ರೇಷ್ಮೆ ಕೃಷಿ ವಿಸ್ತರಣೆಗಾಗಿ, ಸೂಕ್ತ ತಾಂತ್ರಿಕ ಮಾರ್ಗದರ್ಶನ ಹಾಗೂ ವ್ಯವಸ್ಥಿತವಾಗಿ ಇಲಾಖೆಯ ಕಾರ್ಯಕ್ರಮ/ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಯಾವುದೇ ಅಡಚಣೆ ಇಲ್ಲದೆ ಸರ್ಕಾರಿ ಕಚೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

ಕಳೆದ 3 ವರ್ಷಗಳಲ್ಲಿ ರೇಷ್ಮೆ ಇಲಾಖೆಯಿಂದ ಒಬ್ಬರು ನೌಕರರು ಮಾತ್ರ ಪ್ರವಾಸೋದ್ಯಮ ಇಲಾಖೆಗೆ ಹೋಗಿರುತ್ತಾರೆ.

ಇ ಈ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಮೈಸೂರು ಸಿಲ್ಕ್ ಮಳಿಗೆ/ಕಾರ್ಖಾನೆಗಳಿವೆ; ಕಳೆದ 3 ವರ್ಷಗಳಿಂದ ಎಷ್ಟು ಮೈಸೂರು ಸಿಲ್ಕ್ ಸೀರೆಗಳನ್ನು ತಯಾರಿಸಲಾಗಿದೆ; ಎಷ್ಟು ಸೀರೆಗಳನ್ನು ವ್ಯಾಪಾರ ಮಾಡಲಾಗುತ್ತಿದೆ; ಎಷ್ಟು ಸೀರೆಗಳು ಉಳಿಯುತ್ತಿವೆ; ಉಳಿದಿರುವ ಸೀರೆಗಳನ್ನು ಯಾವ ರೀತಿ ಮಾರಾಟ ಮಾಡಲಾಗುತ್ತಿದೆ: ಸೀರೆಗಳ ಮೇಲೆ ಯಾವ ಸಮಯದಲ್ಲಿ ಸಬ್ಸಿಡಿ ದರವನ್ನು ನೀಡಲಾಗುತ್ತಿದೆ; (ವಿವರವನ್ನು ಒದಗಿಸುವುದು)

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ಕೆಎಸ್ಐಸಿ) ವ್ಯಾಪ್ತಿಯಲ್ಲಿ 15 ಮಾರಾಟ ಮಳಿಗೆಗಳಿವೆ. 3 ಕಾರ್ಖಾನೆಗಳಿವೆ.

ಕಳೆದ 3 ವರ್ಷಗಳಿಂದ ಕೆಎಸ್ಐಸಿಯ ಉತ್ಪಾದನಾ ಘಟಕಗಳಲ್ಲಿ ಈ ಕೆಳಕಂಡಂತೆ ಮೈಸೂರು ಸಿಲ್ಕ್ ಸೀರೆಗಳನ್ನು ತಯಾರಿಸಲಾಗಿರುತ್ತದೆ.

ಕ್ರ. ಸಂ.	ಉತ್ಪಾದನಾ ವಿವರಗಳು	2017-18	2018-19	2019-20
1	ಮೈಸೂರು ಸಿಲ್ಕ್ ಸೀರೆಗಳು	87,382	88,801	92,227

ಕಳೆದ 3 ವರ್ಷಗಳಲ್ಲಿ ಕೆಎಸ್ಐಸಿಯು ಈ ಕೆಳಕಂಡಂತೆ ಮೈಸೂರು ಸಿಲ್ಕ್ ಸೀರೆಗಳನ್ನು ಮಾರಾಟ ಮಾಡಿರುತ್ತದೆ.

ಕ್ರ. ಸಂ.	ಉತ್ಪಾದನಾ ವಿವರಗಳು	2017-18	2018-19	2019-20
1	ಮೈಸೂರು ಸಿಲ್ಕ್ ಸೀರೆಗಳು	76,058	86,806	83,924

ಕಳೆದ 3 ವರ್ಷಗಳಲ್ಲಿ ಆದ ಮಾರಾಟದ ನಂತರ ಉಳಿಕೆ ಸೀರೆಗಳ ವಿವರ ಕೆಳಕಂಡಂತಿರುತ್ತದೆ.

ಕ್ರ. ಸಂ.	ಮಾರಾಟದ ನಂತರ ಉಳಿಕೆ ಸೀರೆಗಳ ವಿವರಗಳು	2017-18	2018-19	2019-20
1	ಒಟ್ಟು ಉಳಿಕೆ ಸೀರೆಗಳು	11,324	2,595	8,303

ಕೆಎಸ್ಐಸಿ ಮೈಸೂರು ಸಿಲ್ಕ್ ಸೀರೆಗಳಿಗೆ ಅತಿ ಹೆಚ್ಚಿನ ಬೇಡಿಕೆ ಇರುವುದರಿಂದ ಸಾಮಾನ್ಯವಾಗಿ ಪ್ರತಿ ವರ್ಷ ಉತ್ಪಾದನೆಯಾದ ಎಲ್ಲಾ ದಾಸ್ತಾನು ಮಾರಾಟವಾಗುತ್ತವೆ. ಉತ್ಪಾದನಾ ಘಟಕಗಳಲ್ಲಿ ಯಾವುದೇ ದೋಷಪೂರಿತ ಸೀರೆಗಳು ಕಂಡುಬಂದಲ್ಲಿ ಅಂತಹ ಸೀರೆಗಳನ್ನು ಮತ್ತು ಮಾರಾಟ ಮಳಿಗೆಗಳಲ್ಲಿ ಬಹಳ ಸಮಯದವರೆಗೆ ಮಾರಾಟವಾಗದೇ ಉಳಿದಂತಹ ಯಾವುದೇ ಸೀರೆಗಳನ್ನು "ಸೆಕೆಂಡ್ಸ್" ಎಂದು ತಜ್ಞ ಅಧಿಕಾರಿಗಳನ್ನೊಳಗೊಂಡ ಸಮಿತಿಯ ಶಿಫಾರಸ್ಸಿನಂತೆ ಪರಿಗಣಿಸ ಲಾಗುವುದು ಹಾಗೂ ಇಂತಹ ಸೀರೆಗಳನ್ನು ಹೆಚ್ಚಿನ ರಿಯಾಯಿತಿ ದರದಲ್ಲಿ ವಿಶೇಷ ಮಾರಾಟ ಮೇಳವನ್ನು ಆಯೋಜಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುವುದು.

ಕೆಎಸ್ಐಸಿ ಮಾರಾಟ ಮಳಿಗೆಗಳಲ್ಲಿ ಯಾವುದೇ ಸಬ್ಸಿಡಿ ಮಾರಾಟವಿರುವುದಿಲ್ಲ. ಆದರೆ, ವಿಶೇಷ ಹಬ್ಬಗಳ ಸಂದರ್ಭಗಳಲ್ಲಿ ಗ್ರಾಹಕರನ್ನು ಆಕರ್ಷಿಸುವ ಉದ್ದೇಶದಿಂದ ರಿಯಾಯಿತಿ ದರದಲ್ಲಿ ಮೈಸೂರು ಸಿಲ್ಕ್ ಸೀರೆಗಳನ್ನು ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ.

ಈ ಎಷ್ಟು ಎಕರೆ ಪ್ರದೇಶವು ಇಲಾಖೆಯ ವಶದಲ್ಲಿರುತ್ತದೆ; ಇಲಾಖೆಯು ಉಪಯೋಗಿ ಸುತ್ತಿರುವ ಪ್ರದೇಶವೆಷ್ಟು; ಕಳೆದ 3 ವರ್ಷಗಳಿಂದ ಬೇರೆ ಇಲಾಖೆಗೆ ಎಷ್ಟು ಎಕರೆ ಪ್ರದೇಶವನ್ನು ನೀಡಲಾಗಿದೆ; ನೀಡಿರುವ ಉದ್ದೇಶವೇನು; (ವಿವರ ಒದಗಿಸುವುದು)

ಪ್ರಸ್ತುತ ರೇಷ್ಮೆ ಇಲಾಖೆಯು 3104 ಎಕರೆ ಪ್ರದೇಶವನ್ನು ಹೊಂದಿರುತ್ತದೆ. ರೇಷ್ಮೆ ಇಲಾಖೆಯು ಹೊಂದಿರುವ ಜಮೀನನ್ನು ತನ್ನ ಕಾರ್ಯಚಟುವಟಿಕೆಗಳಿಗೆ ಸದುಪಯೋಗಪಡಿಸಿಕೊಳ್ಳಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ರೇಷ್ಮೆ ಇಲಾಖೆಯು 117.34 ಎಕರೆ ಪ್ರದೇಶವನ್ನು ಬೇರೆ ಇಲಾಖೆಗಳಿಗೆ ತಮ್ಮ ಕಾರ್ಯಚಟುವಟಿಕೆಗಳ ಉದ್ದೇಶಕ್ಕಾಗಿ ಹಸ್ತಾಂತರಿಸಲಾಗಿದೆ. ಹಸ್ತಾಂತರಿಸಲಾಗಿರುವ ಜಮೀನಿನ ವಿವರಗಳನ್ನು ಅನುಬಂಧ-4ರಲ್ಲಿ ನೀಡಿದೆ.

ಉ ರೇಷ್ಮೆ ಇಲಾಖೆಯಿಂದ ಬೇರೆ ಇಲಾಖೆಗೆ ಜಮೀನು ನೀಡಲು ಏನಾದರೂ ಮಾನದಂಡವಿದೆಯೇ? ಇದ್ದಲ್ಲಿ ವಿವರ ಒದಗಿಸುವುದು;

ಕರ್ನಾಟಕ ಭೂ ಮಂಜೂರಾತಿ ನಿಯಮಗಳು,1969 ತಿದ್ದುಪಡಿ ನಿಯಮಗಳು, 2015 ರಡಿ ನಿಗದಿಪಡಿಸಲಾಗಿರುವ ಮಾನದಂಡಗಳನ್ನು ಅನುಸರಿಸಿ ಅನ್ಯ ಇಲಾಖೆಗಳಿಗೆ ಹಸ್ತಾಂತರಿಸಲು ಕ್ರಮವಹಿಸಲಾಗುತ್ತಿದೆ.

ರೇಷ್ಮೆ 181 ರೇಕೃವಿ 2020

(ನಾರಾಯಣಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಪ್ರಶ್ನೆ ಸಂಖ್ಯೆ:1024ಕ್ಕೆ ಅನುಬಂಧ–1

ಕ್ರ.ಸಂ	ಜಿಲ್ಲೆಗಳು	ಒತ್ತುವರಿ ವಿಸ್ತೀರ್ಣ (ಎಕರೆಗಳಲ್ಲಿ)
1	ಬೆಂಗಳೂರು(ಗ್ರಾ)	17835.04
2	ಬೆಂಗಳೂರು(ನ)	2724.39
3	ಚಿಕ್ಕಬಳ್ಳಾಪುರ	53489.05
4	ಚಿತ್ರದುರ್ಗ	5428.30
5	ದಾವಣಗೆರೆ	805.00
6	ಕೋಲಾರ	50634.33
7	ರಾಮನಗರ	48625.31
8	ಶಿವಮೊಗ್ಗ	604.07
9	ತುಮಕೂರು	10218.09
10	ಚಾಮರಾಜನಗರ	3322.17
11	ಚಿಕ್ಕಮಗಳೂರು	243.16
12	ದಕ್ಷಿಣ ಕನ್ನಡ	50.10
13	ಹಾಸನ	4484.04
14	ಕೊಡಗು	27.20
15	ಮಂಡ್ಯ	41933.19
16	ಮೈಸೂರು	12535.03
17	ಉಡುಪಿ	65.06
18	ಬಳ್ಳಾರಿ	5366.30
19	ಬೀದರ್	1101.30
20	ಕಲಬುರ್ಗಿ	1884.09
21	ಕೊಪ್ಪಳ	1167.24
22	ರಾಯಚೂರು	1823.08
23	ಯಾದಗಿರಿ	601.17
24	ಬಾಗಲಕೋಟೆ	1951.21
25	ಬೆಳಗಾವಿ	2853.32
26	ವಿಜಯಪುರ	1452.08
27	ಧಾರವಾಡ	515.35
28	ಗದಗ	1513.23
29	ಹಾವೇರಿ	5277.00
30	ಉತ್ತರ ಕನ್ನಡ	501.10
31	ಮೈಸೂರು ಚಿತ್ತನೆ ವಲಯ	3054.30
	ಒಟ್ಟು	282084.30

ವಿಧಾನ ಪರಿಷತ್ತಿನ ಪ್ರಶ್ನೆ ಸಂಖ್ಯೆ 1024ಕ್ಕೆ ಅನುಬಂಧ-2		
ರಾಜ್ಯದಲ್ಲಿರುವ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ವಿವರಗಳು		
ಕ್ರ.ಸಂ	ಜಿಲ್ಲೆ	ಮಾರುಕಟ್ಟೆಯ ಹೆಸರು
ಮಿಶ್ರತಳಿ/ವಾಣಿಜ್ಯ ರೇಷ್ಮೆ ಗೂಡಿನ ಮಾರುಕಟ್ಟೆಗಳು		
1	ಬೆಂಗಳೂರು(ಗ್ರಾ,)	ವಿಜಯಪುರ
2	ಬಾಗಲಕೋಟೆ	ಮುಧೋಳ
3		ಇಳಕಲ್
4	ಬೆಳಗಾಂ	ಅಥಣಿ
5		ಗೋಕಾಕ್
6	ಬಳ್ಳಾರಿ	ಕೂಡ್ಲಿಗಿ
7	ಬೀದರ್	ಹುಮ್ನಾಬಾದ್
8	ಬಿಜಾಪುರ	ಬಿಜಾಪುರ
9	ಚಾಮರಾಜನಗರ	ಚಾಮರಾಜನಗರ
10		ಸಂತೆಮರಹಳ್ಳಿ
11		ಹರವೆ
12		ಕೊಳ್ಳೇಗಾಲ
13		ಹನೂರು
14	ಮೈಸೂರು	ಮೈಸೂರು
15		ತಿ. ನರಸೀಪುರ
16	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
17		ಚಿಂತಾಮಣಿ
18		ಶಿಡ್ಲಘಟ್ಟ
19		ಹೆಚ್. ಕ್ರಾಸ್
20	ದಕ್ಷಿಣ ಕನ್ನಡ	ಬಿ.ಸಿ.ರೋಡ್
21	ದಾವಣಗೆರೆ	ದಾವಣಗೆರೆ
22	ದಾರವಾಡ	ರಾಯಾಪುರ
23	ಗದಗ	ಶಿರಹಟ್ಟಿ
24	ಗುಲ್ಬರ್ಗ	ಗುಲ್ಬರ್ಗ
25		ಜೇವರ್ಗಿ
26	ಕೋಲಾರ	ಕೋಲಾರ
27		ಕ್ಯಾಲನೂರು
28		ಶ್ರೀನಿವಾಸಪುರ
29		ಮುಳಬಾಗಿಲು
30	ಮಂಡ್ಯ	ಮಳವಳ್ಳಿ
31	ರಾಮನಗರ	ರಾಮನಗರ
32		ಚನ್ನಪಟ್ಟಣ
33		ಕನಕಪುರ
34	ರಾಯಚೂರು	ಲಿಂಗಸೂಗೂರು
35	ಹಾವೇರಿ	ಹಾವೇರಿ
ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು		
36	ಬೆಂಗಳೂರು ನಗರ	ಬೆಂಗಳೂರು
37		ಸರ್ಜಾಪುರ
38		ಅತ್ತಿಬೆಲೆ
39	ಬೆಳಗಾಂ	ಬೆಳಗಾಂ
40	ಹಾಸನ	ಹಾಸನ
41	ಕೊಡಗು	ಕುಶಾಲನಗರ
42	ಮಂಡ್ಯ	ಕೆ.ಆರ್.ಪೇಟೆ
43	ಶಿವಮೊಗ್ಗ	ಶಿವಮೊಗ್ಗ
44	ತುಮಕೂರು	ತುಮಕೂರು
45	ಉತ್ತರ ಕನ್ನಡ	ಶಿರಸಿ
ಶುದ್ಧ ಮೈಸೂರು ತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು		
46	ರಾಮನಗರ	ಮಾಗಡಿ
47		ಕುದೂರು
48		ಸೋಲೂರು
49		ವೀರೇಗೌಡನದೊಡ್ಡಿ
50	ತುಮಕೂರು	ಹೆಬ್ಬೂರು
51		ಕುಣಿಗಲ್
52		ಸಂತೆಮಾವತ್ತೂರು
53		ಕೆಂಪನಹಳ್ಳಿ
54		ಹುಲಿಯೂರುದುರ್ಗ
55		ಚೌಡನಕುಪ್ಪೆ

ಪ್ರಶ್ನೆ ಸಂಖ್ಯೆ 1024ಕ್ಕೆ ಅನುಬಂಧ-3

ರಾಜ್ಯದಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರೇಷ್ಮೆ ಇಲಾಖೆಯು ರೇಷ್ಮೆ ಭಾಗೀದಾರರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಸಹಾಯಧನ ಹಾಗೂ ಪ್ರೋತ್ಸಾಹಧನ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ.
2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ - ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.
3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.೯೦ರಷ್ಟು ಸಹಾಯಧನ.
4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ.
5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ.
6. ರೇಷ್ಮೆ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ.
7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.
8. ರೋಟರಿ ಚಂದ್ರಿಕೆಗಳ ಖರೀದಿಗೆ ಸಹಾಯಧನ
9. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ.
10. ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆಗೆ / ಸಲಕರಣೆಗಳಿಗೆ ಖರೀದಿಗೆ ಸಹಾಯಧನ.
11. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ.
12. ರೇಷ್ಮೆ ಗೂಡಿನ ಧಾರಣೆ ಕುಸಿತ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರಿಗೆ ರಕ್ಷಣಾತ್ಮಕ ದರ ನೀಡಲಾಗುತ್ತಿದೆ.
13. ದ್ವಿತಳಿ ಬಿತ್ತನೆ ಬೆಳೆಗಾರರು ಹಾಗೂ ಮೈಸೂರು ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ.
14. ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.
15. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ.
16. ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ
17. ರೀಲಿಂಗ್ ಯಂತ್ರೋಪಕರಣಗಳ ಸ್ಥಾಪನೆಗೆ ಸಹಾಯಧನ,
18. ಬಾಯ್ಲರ್, ಸೋಲಾರ್ ವಾಟರ್ ಹೀಟರ್, ಜನರೇಟರ್, ಹೀಟ್ ರಿಕವರಿ ಯುನಿಟ್ ಖರೀದಿಗೆ ಸಹಾಯಧನ.
19. ಸ್ವಯಂಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕಗಳ (ARM) ಸ್ಥಾಪನೆಗೆ ಸಹಾಯಧನ.
20. ಪ್ಯೂಪಾ ಪ್ರೋಸೆಸಿಂಗ್ ಘಟಕ.

ಪ್ರಶ್ನೆ ಸಂಖ್ಯೆ 1024ಕ್ಕೆ ಅನುಬಂಧ-4
ರೇಷ್ಮೆ ಇಲಾಖೆಯಿಂದ ಬೇರೆ ಇಲಾಖೆಗೆ ನೀಡಿರುವ ಇಲಾಖಾ ಜಮೀನಿನ ವಿವರ

ಕ್ರ.ಸಂ.	ಜಿಲ್ಲೆ	ತಾಲ್ಲೂಕು/ ಗ್ರಾಮ	ಜಮೀನಿನ ವಿವರ	ವಿಸ್ತೀರ್ಣ (ಎಕರೆ)	ಹಸ್ತಾಂತರ ಮಾಡಿದ ಇಲಾಖೆ	ಸರ್ಕಾರಿ ಆದೇಶ
1	ಚಾಮರಾಜನಗರ	ಚಾಮರಾಜ ನಗರ	ಹನೂರು ಗ್ರಾಮದ ಸ.ನಂ.208/ಬಿ1 ರಲ್ಲಿ 0-36 ಎಕರೆ ವಿಸ್ತೀರ್ಣದ ಖರಾಬು ಜಮೀನಿನ ಪೈಕಿ 0-10 ಎಕರೆ	0-10	ರೈತ ಸಂಪರ್ಕ ಕೇಂದ್ರ ಕೇಂದ್ರ ನಿರ್ಮಾಣಕ್ಕೆ ಕೃಷಿ ಇಲಾಖೆ	ಸರ್ಕಾರದ ಪತ್ರ ಸಂಖ್ಯೆತೋಇ/06/ ರೇಯೋವಿ /2017, ಬೆಂಗಳೂರು ದಿನಾಂಕ: 11/04/2017.
2	ಮೈಸೂರು	ಟಿ.ನರಸೀಪುರ	ರೇಷ್ಮೆ ಕೃಷಿ ಕ್ಷೇತ್ರ, ಹೊರಳಹಳ್ಳಿಯ 10 ಎಕರೆ	10-00	ಸಮಾಜ ಕಲ್ಯಾಣ ಇಲಾಖೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಶೈಕ್ಷಣಿಕ ಉದ್ದೇಶಕ್ಕೆ	ಸರ್ಕಾರದ ಪತ್ರ ಸಂಖ್ಯೆತೋಇ/04/ ರೇಯೋವಿ /2012, ಬೆಂಗಳೂರು ದಿನಾಂಕ: 10/05/2017.
3	ಹಾವೇರಿ	ಹಾವೇರಿ	ಕರ್ಜಗಿಗ್ರಾಮದರೇಷ್ಮೆ ಇಲಾಖೆಗೆ ಸೇರಿದ ಸರ್ವೆ ನಂಬರ್. 290 ರಲ್ಲಿಯ 03-00 ಎಕರೆಜಮೀನನ್ನು	3-00	33/11ಕೆ.ವಿ.ವಿದ್ಯುತ್ ವಿತರಣಾಕೇಂದ್ರ ವನ್ನು ಸ್ಥಾಪಿಸಲು ಇಂಧನ (ವಿದ್ಯುತ್)ಇಲಾಖೆ	ಸರ್ಕಾರದಆದೇಶದ ಸಂಖ್ಯೆ/ತೋಇ/12 /ರೇಯೋವಿ/2015, ಬೆಂಗಳೂರು ದಿನಾಂಕ: 01/06/2017
4	ಮಂಡ್ಯ	ಮಂಡ್ಯ	ದುದ್ದ ಹೋಬಳಿ,ಹೆಚ್.ಮಲ್ಲಿಗೆರೆಗ್ರಾಮದ ಸರ್ವೆ ನಂಬರ್49/ಎಹೆಚ್‌ಟಿರ 89-10 ಎಕರೆ ಪೈಕಿ 20-00 ಎಕರೆಜಮೀನು	20-00	ಮಹಾತ್ಮಾಗಾಂಧಿ ಸ್ಮಾರಕಟ್ರಸ್ಟ್ (ರಿ) ಮಂಡ್ಯ	ಸರ್ಕಾರದ ಕಾರ್ಯದರ್ಶಿಗಳು,ತೋಟಗಾರಿಕೆ ಮತ್ತುರೇಷ್ಮೆಇವರ ಪತ್ರ ಸಂಖ್ಯೆ/ತೋಇ/06/ ರೇಯೋವಿ/2016 ದಿನಾಂಕ: 14/06/2017
5	ತುಮಕೂರು	ತುಮಕೂರು	ತುಮಕೂರುಜಿಲ್ಲೆಯ ಸರ್ಕಾರಿರೇಷ್ಮೆ ಕೃಷಿ ಕ್ಷೇತ್ರ,ಹೆಬ್ಬೂರು ಗ್ರಾಮದ ಸರ್ವೆನಂ.117ರಲ್ಲಿ 0-36ಗುಂಟೆಜಮೀನಿನಪೈಕಿ 2925 ಚ.ಅಡಿ	0-03	ಮುಜರಾಯಿ ಇಲಾಖೆಗೆ	ಸರ್ಕಾರದ ಪತ್ರದಸಂಖ್ಯೆ:ತೋಇ/40/ ರೇಯೋವಿ/2017, ದಿನಾಂಕ:22/08/2017
6	ಚಿಕ್ಕಬಳ್ಳಾಪುರ	ಗೌರಿಬಿದನೂರು	ರೇಷ್ಮೆ ಕೃಷಿ ಕ್ಷೇತ್ರ, ಕರೆಕಲ್ಲಹಳ್ಳಿ ಇಲ್ಲಿನ 4ಎಕರೆ ಜಮೀನು	4-00	ಪ್ರಾಂಶು ಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕಟ್ಟಡ ನಿರ್ಮಾಣಕ್ಕೆ ಗೌರಿಬಿದನೂರು	ಸರ್ಕಾರದ ಆದೇಶ ಸಂಖ್ಯೆ/ತೋಇ/81/ ರೇಯೋವಿ/2017,ಬೆಂಗಳೂರು,ದಿ: 18/12/2017
7	ಹಾಸನ	ಹಾಸನ	ದುದ್ದಾ ಹೋಬಳಿ,ಚಿಕ್ಕಡಲೂರುಗ್ರಾಮದಲ್ಲಿ ಸರ್ವೆ ನಂಬರ್ 470, 473 ಮತ್ತು 474 ರಲ್ಲಿರೇಷ್ಮೆಇಲಾಖೆಯ 54-32 ಎಕರೆಜಮೀನು	54-32	ಪಶುಪಾಲನೆಮತ್ತುಪಶು ವೈದ್ಯ ಇಲಾಖೆಗೆ ಕುರಿ ಸಂವರ್ಧನಾ ಮತ್ತುತರಬೇತಿಕೇಂದ್ರ ಸ್ಥಾಪಿಸಲು	ಸರ್ಕಾರಿಆದೇಶ ಸಂಖ್ಯೆ/ತೋಇ/21/ ರೇಯೋವಿ/2016 ಬೆಂಗಳೂರು, ದಿನಾಂಕ: 22/12/2017
8	ಚಿಕ್ಕಮಗಳೂರು	ನರಸಿಂಹರಾಜ ಪುರ	ಹಿಳುವಳ್ಳಿ ಗ್ರಾಮದ ಸರ್ವೆ ನಂಬರ್76: 2-00 ಎಕರೆ	2-00	ಅಗ್ನಿಶಾಮಕಠಾಣೆ ನಿರ್ಮಿಸಲುಅಗ್ನಿಶಾಮಕ ಇಲಾಖೆಗೆ	ಸರ್ಕಾರಿಆದೇಶ ಸಂಖ್ಯೆ/ತೋಇ/35/ ರೇಯೋವಿ/2014, ದಿನಾಂಕ: 26/12/2017
9	ತುಮಕೂರು	ತುಮಕೂರು	ಹೆಬ್ಬೂರುರೇಷ್ಮೆ ಕೃಷಿ ಕ್ಷೇತ್ರಕ್ಕೆ ಸೇರಿದ ಸರ್ವೇ ನಂ.103 ರಲ್ಲಿನ 100 x 100 ಅಡಿ	0-09	ರೈತ ಸಂಪರ್ಕಕೇಂದ್ರ ನಿರ್ಮಿಸಲು ಕೃಷಿ ಇಲಾಖೆಗೆ	ಸರ್ಕಾರದಆದೇಶ ಸಂಖ್ಯೆ:ತೋಇ:43:ರೇಯೋವಿ : 2017, ಬೆಂಗಳೂರು, ದಿನಾಂಕ: 01/01/2018
10	ಬಳ್ಳಾರಿ	ಕೂಡ್ಲಿಗಿ	ಜಾಗಟಗೇರಿಗ್ರಾಮದಲ್ಲಿ ರೇಷ್ಮೆಇಲಾಖೆಯ ಸರ್ವೆ.ನಂ.218ರಲ್ಲಿನ0.75ಸೆಂಟ್ಸ್ ಜಮೀನಿನ ಪೈಕಿ 0.23ಸೆಂಟ್ಸ್(100 x 100 ಅಡಿಗಳು)	0-09	ಡಾ.ಅಂಬೇಡ್ಕರ್ ಭವನ ನಿರ್ಮಾಣ ಕ್ಕಾಗಿ ತಾಲ್ಲೂಕು ಸಮಾಜಕಲ್ಯಾಣ ಅಧಿಕಾರಿಗಳು, ಕೂಡ್ಲಿಗಿರವರಿಗೆ	ಸರ್ಕಾರದಆದೇಶ ಸಂಖ್ಯೆ:ತೋಇ:19:ರೇಯೋವಿ: 2015, ಬೆಂಗಳೂರು, ದಿನಾಂಕ: 02/01/2018
11	ಚಾಮರಾಜ ನಗರ	ಚಾಮರಾಜ ನಗರ	ಚಾಮರಾಜನಗರಗ್ರಾಮದ ಸರ್ವೆ ನಂಬರ್ 12 ರಲ್ಲಿ 0-20 ಎಕರೆ ಮತ್ತು ಸರ್ವೆ ನಂಬರ್ 13 ರಲ್ಲಿ 0-20 ಎಕರೆ, ಒಟ್ಟು 1-00 ಎಕರೆ	1-00	ಟ್ರಾಫಿಕ್ ಪೋಲೀಸ್‌ಠಾಣೆ ನಿರ್ಮಾಣ ಮಾಡಲು ಪೋಲೀಸ್ ಇಲಾಖೆಗೆ	ಸರ್ಕಾರದ ಪತ್ರ ಸಂಖ್ಯೆ/ತೋಇ/14/ ರೇಯೋವಿ/2017 ದಿನಾಂಕ:02/01/2018

12	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಸೂಲಿಬೆಲೆ ಗ್ರಾಮದ ಸರ್ವೆ ನಂ.421 ರಲ್ಲಿರೇಷ್ಮೆ ಇಲಾಖೆಗೆ ಸೇರಿದ 15ಎಕರೆ ಜಮೀನಿನ ಪೈಕಿ 25X20ಮೀಟರ್ ಅಳತೆಯ 500 ಚ.ಮೀ. ವಿಸ್ತೀರ್ಣ	0–05	ರೈತ ಸಂಪರ್ಕಕೇಂದ್ರ, ಸೂಲಿಬೆಲೆ ಸ್ಥಾಪನೆಗೆ ಕೃಷಿ ಇಲಾಖೆಗೆ	ಸರ್ಕಾರದ ಆದೇಶ ಸಂಖ್ಯೆ:ತೋಇ:23: ರೇಯೋವಿ:2015,ಬೆಂಗಳೂರು, ದಿನಾಂಕ:06/01/2018
13	ತುಮಕೂರು	ಮಧುಗಿರಿ	ದೊಡ್ಡೇರಿಗ್ರಾಮದಗ್ರಾಮ ಪಂಚಾಯಿತಿಕಟ್ಟಡ ನಿರ್ಮಿಸುವಉದ್ದೇಶಕ್ಕಾಗಿ ನಿವೇಶನ ಸಂಖ್ಯೆ31ರಲ್ಲಿನ 30x40 ಅಡಿ ನಿವೇಶನ	0–01	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಪ್ರಸ್ತಾಪಿತ ನಿಯಮಗಳನ್ವಯ ಹಿಂದಕ್ಕೆ ಪಡೆಯಲು ಸರ್ಕಾರವು ಮಂಜೂರಾತಿ ನೀಡಿದೆ	ಸರ್ಕಾರದಆದೇಶ ಸಂಖ್ಯೆ:ತೋಇ:26: ರೇಯೋವಿ: 2016, ಬೆಂಗಳೂರು, ದಿನಾಂಕ: 06/01/2018
14	ಚಿಕ್ಕಬಳ್ಳಾಪುರ ಜಿಲ್ಲೆ	ಚಿಕ್ಕಬಳ್ಳಾಪುರ ತಾಲ್ಲೂಕು	ನಂದಿ ಹೋಬಳಿ ಚದಲಪುರ ಗ್ರಾಮದ ಸರ್ವೆ ನಂಬರ್ 80 ರಲ್ಲಿ 1–16 ಎಕರೆ ಜಮೀನಿನ ಪೈಕಿ 1–00 ಎಕರೆ ಜಮೀನನ್ನು ಪಂಚಾಯತ್‌ರಾಜ್ ಇಲಾಖೆಗೆ 0–16 ಗುಂಟೆ ಜಮೀನನ್ನು ಕಂದಾಯ ಇಲಾಖೆಗೆ	1–16	ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಗೆ ಜಿಲ್ಲಾ ಪಂಚಾಯತ್ ಅಧಿಕಾರಿಗಳ ವಸತಿಗೃಹ ನಿರ್ಮಾಣ ಹಾಗೂ ಕಂದಾಯ ಇಲಾಖೆಗೆ ಅಧಿಕಾರಿಗಳ ವಸತಿಗೃಹಗಳ ನಿರ್ಮಾಣಕ್ಕಾಗಿ	ಸರ್ಕಾರದಆದೇಶ ಸಂಖ್ಯೆ/ತೋಇ/38/ ರೇಯೋವಿ / 2015, ಬೆಂಗಳೂರು ದಿನಾಂಕ: 19/01/2018
15	ಬೀದರ್	ಬೀದರ್	ಕೋಳಾರ್–ಕೆ ಗ್ರಾಮದ 9–23 ಎಕರೆ	09–23	ತೋಟಗಾರಿಕೆ ವಿಶ್ವ ವಿದ್ಯಾಲಯಕ್ಕೆ	ಸರ್ಕಾರದ ಆದೇಶ ಸಂಖ್ಯೆ:ತೋಇ:01: ರೇಯೋವಿ:2016, ದಿನಾಂಕ: 08/02/2018
16	ಕೊಡಗು	ಮಡಿಕೇರಿ	ಮಡಿಕೇರಿಯ ಸ.ನಂ.399/ಜಿ ಹಾಗೂ 339/ಸಿ ನಲ್ಲಿನ 5 ಎಕರೆ	5–00	ಪ್ರಕೃತಿ ವಿಕೋಪ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ರೇಷ್ಮೆ ಇಲಾಖೆಗೆ ವರ್ಗಾಯಿಸಿದ್ದ ಜಮೀನ ನ್ನುಹಿಂಪಡೆದು ಆದೇಶಿಸಿರುತ್ತಾರೆ	ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರ ಆದೇಶ ಸಂ:ಜಾಗ(1)76:2018–19, ದಿ:25/01/2019
17	ರಾಮನಗರ	ರಾಮನಗರ	ಬಿಡದಿಯ ಸ.ನಂ.50/2 ಮತ್ತು 50/2ಬಿ ರಲ್ಲಿ 1–25 ಎಕರೆ	1–25	ಬಿಡದಿ ಪುರಸಭೆಗೆ ಕಛೇರಿಗಳ ನಿರ್ಮಾಣಕ್ಕೆ	ಸರ್ಕಾರದಆದೇಶ ಸಂಖ್ಯೆ:ತೋಇ/24/ ರೇಯೋವಿ/2018,ಬೆಂಗಳೂರು,ದಿ: 18/02/2019
18	ಮೈಸೂರು	ಟಿ.ನರಸೀಪುರ	ಮೂಗೂರು ಗ್ರಾಮದ ಸ.ನಂ.1220 ರಲ್ಲಿ 1–00 ಎಕರೆ	1–00	ವಿವಿಧ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿಕಂದಾಯ ಇಲಾಖೆಗೆ	ಸರ್ಕಾರದ ಪತ್ರ ಸಂಖ್ಯೆ/ತೋಇ/34/ ರೇಯೋವಿ/2018 ದಿನಾಂಕ: 10/04/2019
19	ಗದಗ	ರೋಣ	ರೋಣ ಗ್ರಾಮದ ಸರ್ವೆ ನಂ.687 ರಲ್ಲಿ ಒಟ್ಟು 5ಎಕರೆ ಜಾಗದಲ್ಲಿ 1.5ಎಕರೆ (1–20)	1–20	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ	ಸರ್ಕಾರದ ಆದೇಶ ಸಂಖ್ಯೆ:ತೋಇ:74: ರೇಯೋವಿ:2017,ದಿನಾಂಕ: 12/10/2020
20	ತುಮಕೂರು	ಚಿಕ್ಕನಾಯಕನ ಹಳ್ಳಿ	ಬೈರಗಾನಹಳ್ಳಿಯ ರೇಷ್ಮೆ ಕೃಷಿ ಕ್ಷೇತ್ರದ ಸರ್ವೆ ನಂ.34 ರಲ್ಲಿನ 1 ಎಕರೆ 28 ಗುಂಟೆ ಮತ್ತು ಸರ್ವೆ ನಂ.26/1 ರಲ್ಲಿನ 13.50 ಗುಂಟೆ	1–28 0–13	ಎತ್ತಿನಹೊಳೆ ಯೋಜನೆಯ ನಾಲಾ ನಿರ್ಮಾಣಕ್ಕಾಗಿ ನೀರಾವರಿ ಇಲಾಖೆಗೆ	ಸರ್ಕಾರದ ಆದೇಶ ಸಂಖ್ಯೆ:ತೋಇ:15: ರೇಯೋವಿ:2020. ಬೆಂಗಳೂರು ದಿನಾಂಕ: 16/10/2020.
			ಒಟ್ಟು:–	117–34		

ಕರ್ನಾಟಕ ಸರ್ಕಾರ

ಸಂಖ್ಯೆ:ರೇಷ್ಮೆ 183 ರೇಕೃವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:15/12/2020

ಇಂದ:-
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ್ ಎ (ಮಾಗಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:564 ಕ್ಕೆ ಉತ್ತರ.

ಉಲ್ಲೇಖ: ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/8ಅ/ಪ್ರ.ಸಂ.564/2020, ದಿನಾಂಕ:04/12/2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ್ ಎ (ಮಾಗಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:564 ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಹೆಚ್.ವನಿತ),
ಸರ್ಕಾರದ ಅಧೀನ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
(ರೇಷ್ಮೆ)

ಪ್ರತಿ:-
1) ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	564
2	ಸದಸ್ಯರ ಹೆಸರು	ಶ್ರೀ ಮಂಜುನಾಥ್ ಎ (ಮಾಗಡಿ)
3	ವಿಷಯ	ರೇಷ್ಮೆ ಗೂಡಿನ ಮಾರುಕಟ್ಟೆ ನಿರ್ಮಾಣ
4	ಉತ್ತರಿಸುವ ದಿನಾಂಕ	11-12-2020
5	ಉತ್ತರಿಸುವವರು	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ರಾಮನಗರದಲ್ಲಿರುವ ರೇಷ್ಮೆ ಗೂಡಿನ ಮಾರುಕಟ್ಟೆಯು ಏಷ್ಯಾದಲ್ಲಿಯೇ ಪ್ರಸಿದ್ಧಿಯನ್ನು ಹೊಂದಿದ್ದು, ಪ್ರತಿ ನಿತ್ಯ ಕೋಟ್ಯಾಂತರ ರೂಪಾಯಿಗಳ ವಹಿ-ವಾಟನ್ನು ನಡೆಸುತ್ತಿದ್ದು, ಇದಕ್ಕೆ ತಕ್ಕಂತೆ ಮೂಲ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;	ಹೌದು.
ಆ	ಹಾಗಿದ್ದಲ್ಲಿ, ರಾಮನಗರದಲ್ಲಿ ನೂತನವಾಗಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸಲು ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ;	ರಾಮನಗರ ಹೈಟೆಕ್ ಮಾರುಕಟ್ಟೆ ನಿರ್ಮಾಣ ಮಾಡಲು ನಬಾರ್ಡ್ ವತಿಯಿಂದ ರೂ.35.00 ಕೋಟಿಗಳ ಅನುದಾನವನ್ನು (ರೂಪಾಯಿ ಮೂವತ್ತೈದು ಕೋಟಿ ರೂಪಾಯಿಗಳು ಮಾತ್ರ) ನಿಗಧಿಪಡಿಸಲಾಗಿದೆ.
ಈ	ಯಾವ ಕಾಲಮಿತಿಯೊಳಗೆ ರಾಮನಗರದಲ್ಲಿ ನೂತನವಾಗಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸಿ ಗ್ರಾಹಕರಿಗೆ ಹಾಗೂ ರೈತರಿಗೆ ಅನುಕೂಲ ಕಲ್ಪಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ಕಾಮಗಾರಿಗೆ ವಿನ್ಯಾಸ ಮತ್ತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ವಾಸ್ತುಶಿಲ್ಪಿಗಳ ನೇಮಕಕ್ಕೆ ಕನ್ಸಲ್ಟೆನ್ಸಿ ಸರ್ಮಿಸಸ್‌ಗಾಗಿ ಟೆಂಡರ್ ಆಹ್ವಾನಿಸಿ ತಾಂತ್ರಿಕ ಬಿಡ್ ಅಂತಿಮಗೊಂಡಿರುತ್ತದೆ. ಆರ್ಥಿಕ ಬಿಡ್ ತೆರೆದು ವಾಸ್ತುಶಿಲ್ಪಿಗಳ ನೇಮಕ ಮಾಡಲು ಕ್ರಮವಹಿಸಲಾಗುವುದು. ನಿಯೋಜಿತ ವಾಸ್ತುಶಿಲ್ಪಿಗಳಿಂದ ವಿನ್ಯಾಸ ಮತ್ತು ವಿಸ್ತೃತ ಯೋಜನಾ ವರದಿಯನ್ನು ಪಡೆದು ನಬಾರ್ಡ್ ಸಂಸ್ಥೆಯಿಂದ ಅನುಮೋದನೆ ದೊರೆತ ನಂತರ ಕಾಮಗಾರಿ ನಿರ್ವಹಿಸಲು ಕಾಲಮಿತಿಯನ್ನು ನಿಗಧಿಪಡಿಸಲಾಗುವುದು.

ರೇಷ್ಮೆ 183 ರೇಕೃವಿ 2020

(ನಾರಾಯಣಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 115 ಸಮಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇಂದ:

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಮಹೇಶ್ .ಎನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:852ಗೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಮಹೇಶ್ .ಎನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:852ಗೆ ಉತ್ತರದ 20 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಮಹೇಶ್ .ಎನ್ (ಕೊಳ್ಳೆಗಾಲ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	852
ಉತ್ತರಿಸಬೇಕಾದ ದಿನಾಂಕ	:	11-12-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೊಳ್ಳೇಗಾಲ ನಗರದಲ್ಲಿ ನಗರೋತ್ಥಾನ ಯೋಜನೆಯ 3ನೇ ಹಂತದ ಕಾಮಗಾರಿಗಳು ನಿಧಾನ ಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು;	ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯಡಿ ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಅಂದಾಜು ಮೊತ್ತ ಒಟ್ಟು ರೂ. 18.45 ಕೋಟಿಗಳಿಗೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 20 ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿ ಅನುಷ್ಠಾನಗೊಳಿಸಲು ಗುತ್ತಿಗೆದಾರರಾದ ಶ್ರೀ ಕೆ.ಸಿ.ದೊಡ್ಡ ರಂಗಯ್ಯ ರವರಿಗೆ ದಿನಾಂಕ: 15.06.2018 ರಂದು ರೂ.19.15 ಕೋಟಿಗಳಿಗೆ ಟೆಂಡರ್ ವಹಿಸಲಾಗಿರುತ್ತದೆ. ಗುತ್ತಿಗೆದಾರರಿಗೆ 18 ತಿಂಗಳು ಕಾಲಾವಧಿ ನೀಡಲಾಗಿರುತ್ತದೆ. ಆದರೆ ನವೆಂಬರ್-2020 ರ ಅಂತ್ಯದವರೆಗೆ ಅನುಮೋದಿತ 18 ಕಾಮಗಾರಿಗಳ ಪೈಕಿ 02 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈವರೆಗೂ ಒಟ್ಟಾರೆ ರೂ. 558.75 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಸದರಿ ಕಾಮಗಾರಿಗಳು ಈ ಕೆಳಕಂಡ ಕಾರಣಗಳಿಂದ ವಿಳಂಬವಾಗಿರುತ್ತದೆ. • ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ 24*7 ನಿರಂತರ ಸರಬರಾಜು ಯೋಜನೆಯ ಕಾಮಗಾರಿಯನ್ನು ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ನಿರ್ವಹಿಸಲಾಗಿರುತ್ತದೆ. ಈ ಸಂಬಂಧವಾಗಿ ಕಾಮಗಾರಿಗಳನ್ನು ನಿರ್ವಹಿಸಲು ವಿಳಂಭವಾಗಿರುತ್ತದೆ. • ರೂ. 6.00 ಕೋಟಿಗಳ (ಶೇಕಡ 30 ರಷ್ಟು) ಕಾಮಗಾರಿಗಳನ್ನು ನಿರ್ವಹಿಸಲು ಸ್ಥಳದ ತಕಾರರು ಮತ್ತು ಬೇರೆ ಇಲಾಖೆಯಿಂದ ನಿರ್ವಹಿಸಿರುವುದರಿಂದ ಸದರಿ ಮೊತ್ತದ

		ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಿರುವುದಿಲ್ಲ. • ಗುತ್ತಿಗೆದಾರರು ಕಾಮಗಾರಿಯನ್ನು ಮಂದಗತಿಯಲ್ಲಿ ನಿರ್ವಹಿಸುತ್ತಿರುವುದರಿಂದ ಗುತ್ತಿಗೆದಾರರಿಗೆ ಹಲವು ಬಾರಿ ನೋಟೀಸ್‌ಗಳನ್ನು ನೀಡಲಾಗಿರುತ್ತದೆ ಹಾಗೂ ಗುತ್ತಿಗೆದಾರರ ವಿಳಂಬಕ್ಕೆ ಟೆಂಡರ್ ದಸ್ತಾವೇಜಿನಂತೆ ದಂಡ ವಿಧಿಸಲು ಕ್ರಮವಹಿಸಲಾಗುವುದು. ಮುಂದುವರೆದು,ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದೇ ಇದ್ದಲ್ಲಿ, Risk & Cost ಆಧಾರದ ಮೇಲೆ ಟೆಂಡರನ್ನು ರದ್ದುಗೊಳಿಸಲು ಕ್ರಮವಹಿಸಲಾಗುವುದು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಸಂಬಂಧ ಹಲವು ಸಭೆಗಳನ್ನು ನಡೆಸಲಾಗಿದ್ದು, ಡಿಸೆಂಬರ್-2020 ರ ವೇಳೆಗೆ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರರು ತಿಳಿಸಿರುತ್ತಾರೆ. ರೂ. 6.00 ಕೋಟಿಗಳ ಮೊತ್ತದ ಕಾಮಗಾರಿಗಳನ್ನು ಕೈಬಿಟ್ಟು, ಬದಲಿಕಾ ಮಗಾರಿಗಳನ್ನು ಕೈ ಗೊಳ್ಳಲಾಗುವುದು.
ಆ)	ಟೆಂಡರ್ ಪ್ರಕ್ರಿಯೆಯಲ್ಲಿ ಸಮಸ್ಯೆಯಾಗಿ ಶೀಘ್ರ ಅನುಷ್ಠಾನಕ್ಕೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆಯಾಗಿರುವುದಿಲ್ಲ.
ಇ)	ಕೊಳ್ಳೇಗಾಲ ನಗರಸಭೆಯ ಕೆಲವು ಬಡಾವಣೆಗಳಲ್ಲಿ ರಸ್ತೆ ಮತ್ತು ಚರಂಡಿಗಳು ವಿಸ್ತರಣೆಯಾಗಬೇಕಾಗಿದ್ದು, ಹೆಚ್ಚಿನ ಅನುದಾನಕ್ಕೆ ಮನವಿ ಬಂದಿದೆಯೇ; ಬಂದಿದ್ದಲ್ಲಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರದ ವಿವಿಧ ಯೋಜನೆಗಳಿಂದ ಕೊಳ್ಳೇಗಾಲ ನಗರಸಭೆಗೆ ಮಂಜೂರಾಗುವ ಅನುದಾನದಲ್ಲಿ ಹಂತ-ಹಂತವಾಗಿ ಕೈಗೊಳ್ಳಲಾಗುತ್ತಿದೆ. ಸದರಿ ಬಡಾವಣೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ.

ಈ)	ಪರಿಶಿಷ್ಟ ವರ್ಗದ ಜನರು ಹೆಚ್ಚಾಗಿರುವ ಹಾಗೂ ಪರಿಶಿಷ್ಟ ಜಾತಿ ಮೀಸಲು ವಿಧಾನಸಭಾ ಕ್ಷೇತ್ರದ ಕೊಳ್ಳೇಗಾಲ ನಗರಸಭೆಯಲ್ಲಿ ನಗರ ವಿಸ್ತರಣೆಯಿಂದಾಗಿ ಅಸ್ತಿತ್ವಕ್ಕೆ ಬಂದ ಹೊಸ ಬಡಾವಣೆಗಳಿಗೆ ರಸ್ತೆ, ಚರಂಡಿ, (ಯುಜಿಡಿ) ಬೀದಿ ದೀಪ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಅಗತ್ಯವಿರುವ ಅನುದಾವನ್ನು ಈ ಸಾಲಿನಲ್ಲಿಯೇ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?	ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ಬರುವ ಹೊಸ ಬಡಾವಣೆಗಳಲ್ಲಿ ರಸ್ತೆ, ಚರಂಡಿ ಮತ್ತು ಇತರೆ ನಗರ ಮೂಲ ಸೌಕರ್ಯಗಳನ್ನು ಬಡಾವಣೆಯ ಮಾಲೀಕರು ಅಭಿವೃದ್ಧಿ ಪಡಿಸಬೇಕಾಗಿರುತ್ತದೆ. ಮುಂದುವರೆದು, ಪ್ರಸ್ತುತ ನಗರಸಭಾ ವ್ಯಾಪ್ತಿಯಲ್ಲಿ ರೂ. 54.00 ಕೋಟಿ ವೆಚ್ಚದಲ್ಲಿ ಕೆ.ಎಂ.ಆರ್.ಪಿ ಯೋಜನೆಯಡಿಯ ಕುಡಿಯುವ ನೀರಿನ ನಿರಂತರ ನೀರು ಸರಬರಾಜು ಯೋಜನಾ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಮತ್ತು ರೂ. 97.11 ಕೋಟಿ ವೆಚ್ಚದಲ್ಲಿ ಒಳಚರಂಡಿ ಯೋಜನಾ ಕಾಮಗಾರಿಗಳನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಿರ್ವಹಿಸಲಾಗುತ್ತಿದೆ. ಸರ್ಕಾರದಿಂದ ಬಿಡುಗಡೆಯಾಗುವ ಎಸ್.ಎಫ್.ಸಿ, 14 & 15ನೇ ಹಣಕಾಸು ಆಯೋಗದ ಅನುದಾನ ಹಾಗೂ ನಗರೋತ್ಥಾನ ಯೋಜನೆಯ ಅನುದಾನದಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿಗಳಂತೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು (ಎಸ್.ಸಿ.ಪಿ-ಟಿ.ಎಸ್.ಪಿ ಕಾಮಗಾರಿಗಳನ್ನು ನಿಯಮಾನುಸಾರ) ಹಂತ ಹಂತವಾಗಿ ನಗರ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ:ನಅಇ 115 ಸಮಸ 2020

ಡಾ||ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂ: ನಅಇ 260 ಪಿಆರ್‌ಜೆ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:-15-12-2020

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆಯ ಸದಸ್ಯರಾದ **ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)** ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1014 ಕ್ಕೆ ಉತ್ತರಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ **ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)** ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1014 ರ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪಿ.ಎಂ.ಸಿ),
ನಗರಾಭಿವೃದ್ಧಿ ಇಲಾಖೆ.
15-12-2020

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1014
2	ಸದಸ್ಯರ ಹೆಸರು	ಹ್ಯಾರಿಸ್.ಎನ್.ಎ (ಶಾಂತಿನಗರ)
3	ಉತ್ತರಿಸಬೇಕಾದ ದಿನಾಂಕ	11-12-2020
4	ಉತ್ತರಿಸುವ ಸಚಿವರು	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಕರ್ನಾಟಕ ರಾಜ್ಯ ನಗರ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳು ಯಾವುವು; (ಜಿಲ್ಲಾವಾರು ವಿವರಗಳನ್ನು ನೀಡುವುದು)	**ಸ್ಮಾರ್ಟ್ ಸಿಟಿ ಅಭಿಯಾನ** ಕೇಂದ್ರ ಸರ್ಕಾರದ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನಕ್ಕೆ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ಸಂಸ್ಥೆಯು ರಾಜ್ಯ ಮಟ್ಟದ ನೋಡಲ್ ಸಂಸ್ಥೆಯಾಗಿರುತ್ತದೆ. ಸದರಿ ಯೋಜನೆಯನ್ನು ರಾಜ್ಯದ ಈ ಕೆಳಕಂಡ 7 ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.; 1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು. **ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ)** ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ) ಜಲಸಿರಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಕೈಗೊಳ್ಳಲಾದ ಜಿಲ್ಲಾವಾರು ಅಭಿವೃದ್ಧಿ ಕಾರ್ಯಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. **9 ಪಟ್ಟಣಗಳ ಯೋಜನೆ** ಕರ್ನಾಟಕ ಸರ್ಕಾರವು ಪರಿಷ್ಕೃತ ಸರ್ಕಾರಿ ಆದೇಶ ಸಂಖ್ಯೆ :ನ.ಅ.ಇ 14 ಪಿಆರ್‌ಜೆ 2012, ಬೆಂಗಳೂರು, ದಿನಾಂಕ 15.12.2017 ರಲ್ಲಿ 9 ಪಟ್ಟಣಗಳಿಗೆ ರೂ.205.87 ಕೋಟಿ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ನೀಡಿದೆ. ಜಿಲ್ಲಾವಾರು ಮಾಹಿತಿ **ಅನುಬಂಧ-2** ರಲ್ಲಿ ನೀಡಲಾಗಿದೆ. 9 ಪಟ್ಟಣಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.

ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ ಯೋಜನೆ (ಕೆ.ಎಂ.ಆರ್.ಪಿ)

ಕಳೆದ ಮೂರು ವರ್ಷಗಳಲ್ಲಿ ವಿಶ್ವಬ್ಯಾಂಕ್ ನೆರವಿನ ಕೆಎಂಆರ್‌ಪಿ ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳು **ಅನುಬಂಧ – 4** ರಲ್ಲಿ ನೀಡಲಾಗಿದೆ.

ರಾಜ್ಯ ಸರ್ಕಾರದ ಅನುದಾನದಲ್ಲಿ ಮುಂದುವರೆದ ಕರ್ನಾಟಕ ಪೌರ ಸುಧಾರಣ ಯೋಜನೆ (ಕೆ.ಎಂ.ಆರ್.ಪಿ.) ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆ UDD 211 PRJ 2015, ಬೆಂಗಳೂರು ದಿನಾಂಕ:4-6-2016 ರಂದು, ಎರಡು ನಗರಗಳಿಗೆ ಕಾಮಗಾರಿ ಅನುಷ್ಠಾನಗೊಳಿಸಲು ರೂ.79 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅದರಂತೆ ಕಾಮಗಾರಿಗಳ ಪ್ರಗತಿ ವಿವರಗಳನ್ನು **ಅನುಬಂಧ –5**ರಲ್ಲಿ ನೀಡಲಾಗಿದೆ.

(ಆ) ನಿಗಮಕ್ಕೆ ಮೂರು ವರ್ಷಗಳಲ್ಲಿ ಯೋಜನಾನುಷ್ಠಾನಗಳಿಗಾಗಿ ಒದಗಿಸಿಕೊಟ್ಟಿರುವ ಅನುದಾನವೆಷ್ಟು; (ವಿವರ ಒದಗಿಸುವುದು)

ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ)

ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ) ಜಲಸಿರಿ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿವೆ.

ಕ್ರ.ಸಂ	ವರ್ಷ	ಅನುದಾನ (ರೂ. ಕೋಟಿಗಳಲ್ಲಿ)
1	2017-18	120.00
2	2018-19	275.00
3	2019-20	306.41

9 ಪಟ್ಟಣಗಳ ಯೋಜನೆ

9 ಪಟ್ಟಣಗಳ ಯೋಜನೆಯಡಿ ನಿಗಮಕ್ಕೆ 3 ವರ್ಷಗಳಲ್ಲಿ ಯೋಜನಾನುಷ್ಠಾನಗಳಿಗಾಗಿ ಒದಗಿಸಿಕೊಟ್ಟಿರುವ ಅನುದಾನ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಸಾಲಿನ	ಕರ್ನಾಟಕ ಸರ್ಕಾರವು ಒದಗಿಸಿರುವ ಅನುದಾನ
2017–18	10.00
2018–19	18.75
2019–20	60.22
ಒಟ್ಟು:	**88.97**

೩) ನಿಗಮಕ್ಕೆ ಕೇಂದ್ರ ಸರ್ಕಾರದ ಅನುದಾನಗಳ ಕುರಿತಾದ ವಿವರಗಳೇನು ಮತ್ತು ರಾಜ್ಯದಲ್ಲಿರುವ ಎಲ್ಲಾ ನಗರಗಳಿಗೆ ಹಂತ ಹಂತವಾಗಿ ಅಭಿವೃದ್ಧಿಯ ಕಾರ್ಯಕ್ರಮಗಳು ಹಾಗೂ ಆದ್ಯತೆಯ ಮೇರೆಗೆ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ಕುರಿತು ನಿಗಮವು ರೂಪಿಸಿರುವ ಕ್ರಿಯಾ ಯೋಜನೆಗಳು ಯಾವುವು;

ಸ್ಮಾರ್ಟ್ ಸಿಟಿ ಅಭಿಯಾನ

ಸ್ಮಾರ್ಟ್ ಸಿಟಿ ಅಭಿಯಾನದಡಿ ಕೆ.ಯು.ಐ.ಡಿ.ಎಫ್.ಸಿ ನಿಗಮಕ್ಕಾಗಿ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ. ಆದರೆ ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯಲ್ಲಿ ಆಯ್ಕೆಯಾದ ರಾಜ್ಯದ 7 ನಗರಗಳಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಅನುದಾನದ ಸಮಪಾಲಿನೊಂದಿಗೆ, ಕೆ.ಯು.ಐ.ಡಿ.ಎಫ್.ಸಿಗೆ ಅನುದಾನ ಬಿಡುಗಡೆ ಮಾಡುತ್ತಿದ್ದು, ಸದರಿ ಅನುದಾನವನ್ನು ಆಯಾ ನಗರಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ನಗರಗಳಿಗೆ ಸ್ಮಾರ್ಟ್ ಸಿಟಿ ಅಭಿಯಾನದಡಿ ಈವರೆಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿವೆ:

(ರೂ. ಕೋಟಿಗಳಲ್ಲಿ)

ಕ್ರ. ಸಂ	ನಗರಗಳು	ಬಿಡುಗಡೆಯಾದ ಮೊತ್ತ		
		ಕೇಂದ್ರ	ರಾಜ್ಯ	ಒಟ್ಟು
1.	ಬೆಳಗಾವಿ	294	200	494
2.	ದಾವಣಗೆರೆ	196	200	396
3.	ಹುಬ್ಬಳ್ಳಿ-ಧಾರವಾಡ	196	190	386
4.	ಮಂಗಳೂರು	190	148	338
5.	ಶಿವಮೊಗ್ಗ	196	111	307
6.	ತುಮಕೂರು	294	111	405
7.	ಬೆಂಗಳೂರು.	155	55	210
	ಒಟ್ಟು	**1521**	**1015**	**2356**

ನಗರದ ನಾಗರೀಕರಿಗೆ ಉತ್ತಮ ಗುಣಮಟ್ಟದ ಮೂಲಸೌಕರ್ಯಗಳನ್ನು ಒದಗಿಸುವುದು, ಮಾಹಿತಿ ತಂತ್ರಜ್ಞಾನ ಆಧರಿಸಿ ಸಾರ್ವಜನಿಕ ಸೇವೆಗಳನ್ನು ಒದಗಿಸುವುದು ಸ್ಮಾರ್ಟ್ ಸಿಟಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ ಅಭಿಯಾನದ ಮಾರ್ಗಸೂಚಿ ಅನುಸಾರ ನಗರಗಳು ಕಾಮಗಾರಿಗಳ ಕ್ರಿಯಾಪಟ್ಟಿಯನ್ನು ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಪಾರದರ್ಶಕ ನೀತಿಯನ್ವಯ ಇ-ಟೆಂಡರ್ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ ಹಾಗೂ ನವೆಂಬರ್-2020ರ ಅಂತ್ಯಕ್ಕೆ ರೂ.1480 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ

ಎಡಿಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ)

ಎನ್‌ಕೆಯುಎಸ್‌ಐಪಿ ಯೋಜನೆಯಲ್ಲಿ 24 ನಗರಗಳ ಪೈಕಿ ಕುಡಿಯುವ ನೀರು ಸರಬರಾಜು, ಒಳಚರಂಡಿ ಕಾಮಗಾರಿ, ಮಳೆನೀರಿನ ಚರಂಡಿಗಳು, ರಸ್ತೆ ಅಭಿವೃದ್ಧಿ, ಕೊಳಚೆ ಪ್ರದೇಶ ಅಭಿವೃದ್ಧಿ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ಅಗ್ನಿಶಾಮಕಸೇವೆ, ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಕೆರೆ ಅಭಿವೃದ್ಧಿ ಕಾರ್ಯಕ್ರಮಗಳು ಆದ್ಯತೆ ಮೇರೆಗೆ ಹಮ್ಮಿಕೊಳ್ಳಲಾಗಿದೆ.

ಇದರಲ್ಲಿ ಈಗಾಗಲೇ 15 ನಗರಗಳಾದ ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ, ದಾವಣಗೆರೆ, ಬಿಜಾಪುರ, ಬೀದರ್, ಚಾಮರಾಜನಗರ, ಗಂಗಾವತಿ, ಗೋಕಾಕ್, ಜಮಖಂಡಿ, ರಾಣಿಬೆನ್ನೂರು, ಬಸವಕಲ್ಯಾಣ, ಶಹಬಾದ್, ನಿಪ್ಪಾಣಿ, ಇಳ್‌ಕಲ್ ಮತ್ತು ಬಾದಾಮಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾಧಿಸಲಾಗಿದೆ.

ಉಳಿದ 8 ನಗರಗಳಾದ ಬಳ್ಳಾರಿ, ಗದಗ್-ಬೆಟಗೇರಿ, ಹಾವೇರಿ, ಹೊಸಪೇಟೆ, ರಾಯಚೂರು, ಯಾದಗಿರ್, ಸಿಂಧನೂರು, ರಬಕವಿ-ಬನಹಟ್ಟಿ ಯಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿದ್ದು 2021-2022ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಕೊಪ್ಪಳ ನಗರದ ಒಳಚರಂಡಿ ಕಾಮಗಾರಿಯ ಗುತ್ತಿಗೆದಾರರು ನಿಯಮಾವಳಿ ಪ್ರಕಾರ ಕೆಲಸ ನಿರ್ವಹಿಸದ ಕಾರಣ, ಗುತ್ತಿಗೆ ಕರಾರನ್ನು ರದ್ದುಪಡಿಸಿದ್ದು ಹಣಕಾಸಿನ ಅಭಾವದಿಂದ ಕಾಮಗಾರಿಯನ್ನು ಕೈಬಿಡಲಾಗಿದೆ.

ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ ಯೋಜನೆ (ಕೆ.ಎಂ.ಆರ್.ಪಿ)

ರಾಜ್ಯ ಸರ್ಕಾರದ ಅನುದಾನದಡಿ ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆಎಂಆರ್‌ಪಿ) ಯಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಗುರಿ ಮತ್ತು ಸಾಧನೆಗಳ ವಿವರಗಳನ್ನು **ಅನುಬಂಧ-9ರಲ್ಲಿ** ನೀಡಲಾಗಿದೆ.

ಕಡತ ಸಂಖ್ಯೆ: ನಅಇ 260 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.

ಅನುಬಂಧ-1

ಕ್ರ.ಸಂ	ವರ್ಷ	ಜಿಲ್ಲೆ	ನಗರ/ಪಟ್ಟಣ	ಕಾಮಗಾರಿಗಳು	ಷರಾ
1	2017-18	ದಾವಣಗೆರೆ	ದಾವಣಗೆರೆ	ಸಗಟು ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಹರಿಹರ	1) ಸಗಟು ನೀರು ಸರಬರಾಜು	ಕಾಮಗಾರಿಯು ಪೂರ್ಣಗೊಂಡಿದ್ದು ಬಿಡಿಬಿಟಿ ಖಚಟಿ ಹಂತದಲ್ಲಿರುತ್ತದೆ.
				2) 24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪೂರ್ಣಗೊಂಡಿದ್ದು ಬಿಡಿಬಿಟಿ ಖಚಟಿ ಹಂತದಲ್ಲಿರುತ್ತದೆ.
		ಹಾವೇರಿ	ಬ್ಯಾಡಗಿ	1) ಸಗಟು ನೀರು ಸರಬರಾಜು	ಕಾಮಗಾರಿಯು ದಿನಾಂಕ: 17.11.2018 ರಂದು ಪೂರ್ಣಗೊಂಡಿರುತ್ತದೆ.
				2) 24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ರಾಣೆಬೆನ್ನೂರು	24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
		ಉಡುಪಿ	ಕುಂದಾಪುರ	24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
2	2018-19	ದಾವಣಗೆರೆ	ದಾವಣಗೆರೆ	24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
		ಹಾವೇರಿ	ರಾಣೆಬೆನ್ನೂರು	ಗಂಗಾಜಲ ದೊಡ್ಡಕೆರೆ ಪುನರುಜ್ಜೀವನ ಕಾಮಗಾರಿ	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
		ದಕ್ಷಿಣಕನ್ನಡ	ಮಂಗಳೂರು	ಹಳೆಯ ಒಳಚರಂಡಿ ಪಂಪಿಂಗ್ ಮೇನ್ ಪೈಪಲೈನ್ ಬದಲಾವಣೆ ಕಾಮಗಾರಿ	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಮಂಗಳೂರು	ಮಂಗಳೂರು ನಗರದ ವಲಯ 1,4,7 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಮಂಗಳೂರು	ಮಂಗಳೂರು ವಲಯ 7 ಮತ್ತು ಹಳೆಯ ಮಂಗಳೂರು ನಗರದಲ್ಲಿ ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಮಗಾರಿ	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಮಂಗಳೂರು	ಸಗಟು ನೀರು ಕಾಮಗಾರಿ	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಪುತ್ತೂರು	24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
		ಉಡುಪಿ	ಉಡುಪಿ	24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
3	2019-20	ಉಡುಪಿ	ಉಡುಪಿ	ಸಗಟು ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
		ದಕ್ಷಿಣಕನ್ನಡ	ಮಂಗಳೂರು	1) 24/7 ಕುಡಿಯುವ ನೀರು ಸರಬರಾಜು	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಮಂಗಳೂರು	2) ಮಂಗಳೂರು ನಗರದ ವಲಯ 3 & 5 ರಲ್ಲಿ ಪ್ರಸ್ತುತ ವಿರುವ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿ.	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಮಂಗಳೂರು	3) ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
			ಮಂಗಳೂರು	ಸುರತ್ಕಲ್ ಮತ್ತು ಮಂಗಳೂರು ನಗರದಲ್ಲಿ ಮಿಸ್ಸಿಂಗ್ ಲಿಂಕಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ

ಅನುಬಂಧ – 2

ಕರ್ನಾಟಕದ 9 ಪಟ್ಟಣಗಳಲ್ಲಿ ನೀರು ಸರಬರಾಜು ಯೋಜನೆಯ ಮಾಹಿತಿ

ಕ್ರ. ಸಂ.	ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಪುರಸಭೆ / ನಗರ ಸಭೆ	ಮೀಸಲಿರಿಸಿದ ಅನುದಾನ (ರೂ.ಕೋಟಿ)
1	ಗದಗ	ಮುಂಡರಗಿ	ಪುರಸಭೆ	19.56
2	ಬಳ್ಳಾರಿ	ತೆಕ್ಕಲಕೋಟೆ	ಪಟ್ಟಣ ಪಂಚಾಯತಿ	27.52
3	ಬಳ್ಳಾರಿ	ಕೊಟ್ಟೂರು	ಪಟ್ಟಣ ಪಂಚಾಯತಿ	31.16
4	ಬಾಗಲಕೋಟೆ	ಮಹಾಲಿಂಗಪುರ	ಪುರಸಭೆ	11.07
5	ಬಾಗಲಕೋಟೆ	ತೆರೆದಾಳ	ಪುರಸಭೆ	17.72
6	ರಾಯಚೂರು	ಮುದಗಲ್	ಪುರಸಭೆ	34.96
7	ದಕ್ಷಿಣ ಕನ್ನಡ	ಮುಲ್ಕಿ	ಪಟ್ಟಣ ಪಂಚಾಯತಿ	15.35
8	ಬಳ್ಳಾರಿ	ಕಂಪ್ಲಿ	ಪುರಸಭೆ	20.78
9	ಮಂಡ್ಯ	ಕೆ.ಆರ್.ಪೇಟೆ	ಪುರಸಭೆ	27.75
		ಒಟ್ಟು		205.87

ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ "ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ" ದಡಿ ಕಳೆದ ಮೂರು ವರ್ಷದಿಂದ ಮುಂದುವರಿಸಿ ಕೈಗೊಂಡಿರುವ ಕಾಮಗಾರಿಗಳ ವಿವರ.

ಕ್ರ. ಸಂ.	ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಕಾಮಗಾರಿ ಹೆಸರು	ಷರ
1	ಗದಗ	ಗದಗ-ಬೆಟಗೇರಿ	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಜಿಡಿಜಿ01)	ಕಾಮಗಾರಿ ಪ್ರಗತಿಯಲ್ಲಿದೆ.
2	ಹಾವೇರಿ	ಹಾವೇರಿ	ಒಳಚರಂಡಿ ವ್ಯವಸ್ಥೆಯ ಸರಬರಾಜು ಹಾಗೂ ಅಳವಡಿಸುವಿಕೆ ಎಫ್‌ಎಎಲ್ ಮಾದರಿಯ ಎಸ್‌ಟಿಪಿ ನಿರ್ಮಾಣ ಮತ್ತು ಮಾಧ್ಯಮಿಕ ಒಳಚರಂಡಿ ಜೋಡನೆ ನಿರ್ಮಾಣ (ಪ್ಯಾಕೇಜು-04ಹೆಚ್‌ವಿಆರ್02).	ಕಾಮಗಾರಿ ಪೂರ್ಣಗೊಂಡಿದೆ.
3		ಹಾವೇರಿ	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಹೆಚ್‌ವಿಆರ್01).	ಕಾಮಗಾರಿ ಪ್ರಗತಿಯಲ್ಲಿದೆ.
4		ರಾಣೆಬೆನ್ನೂರು	ಬಾಕಿ ಉಳಿದ ಒಳಚರಂಡಿ ಜಾಲ ಹಾಗೂ ಅಳವಡಿಸುವಿಕೆ ಮತ್ತು ಎಫ್.ಎ.ಎಲ್. ಮಾದರಿಯ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಆರ್‌ಎನ್‌ಆರ್02ಬಿ)	ಕಾಮಗಾರಿ ಪೂರ್ಣಗೊಂಡಿದೆ.
5	ವಿಜಯಪುರ	ವಿಜಯಪುರ	ಉಳಿಕೆ ಕಾಮಗಾರಿ ಅಸ್ತಿತ್ವದಲ್ಲಿರುವ ಒಳಚರಂಢಿ ವ್ಯವಸ್ಥೆಯ ಪುರ್ನಸ್ಥಾಪನೆ ಹಾಗೂ ಇಂಟರ್‌ಸೆಪ್ಷನ್ , ಹೊಸ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಜಿಲ್ಲೆ ಎ) ಹಾಗೂ ಮಳೆನೀರು ಚರಂಡಿ ಪುರ್ನಸ್ಥಾಪನೆ (ಪ್ಯಾಕೇಜು-02ಬಿಜೆಆರ್02ಡಿ).	ಕಾಮಗಾರಿ ಪೂರ್ಣಗೊಂಡಿದೆ.
6		ವಿಜಯಪುರ	ಉಳಿಕೆ ಕಾಮಗಾರಿ 2ಬಿ ಜಿಲ್ಲೆಯಲ್ಲಿ ಒಳಚರಂಡಿ ವ್ಯವಸ್ಥೆ ಸುಧಾರಣೆ ಮತ್ತು ಎಫ್‌ಎಎಲ್ ಮಾದರಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್02ಇ).	ಕಾಮಗಾರಿ ಪೂರ್ಣಗೊಂಡಿದೆ.
7	ಬೆಳಗಾವಿ	ನಿಪ್ಪಾಣಿ	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಎನ್‌ಪಿಎನ್01)	ಕಾಮಗಾರಿ ಪೂರ್ಣಗೊಂಡಿದ್ದು, ನಿರ್ವಹಣೆ ಹಂತದಲ್ಲಿದೆ.
8		ಗೋಕಾಕ್	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಜಿಕೆಕೆ01)	ಕಾಮಗಾರಿ ಪೂರ್ಣಗೊಂಡಿದ್ದು, ನಿರ್ವಹಣೆ ಹಂತದಲ್ಲಿದೆ.
9	ಬಾಗಲಕೋಟೆ	ರಬಕವಿ-ಬನಹಟ್ಟಿ	ಒಳಚರಂಡಿ ಜಾಲ ಮತ್ತು ಎಫ್.ಎ.ಎಲ್ ಮಾದರಿಯ 9.2 ಎಂ.ಎಲ್.ಡಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಆರ್‌ಬಿಕೆ02).	ಕಾಮಗಾರಿ ಪೂರ್ಣಗೊಂಡಿದೆ. ನಗರಸಭ ವತಿಯಿಂದ ಮನೆ ಸಂಪರ್ಕ ಕಾಮಗಾರಿ ಪ್ರಗತಿಯಲ್ಲಿದೆ.
10		ಇಳಕಲ್	ಎಫ್.ಎ.ಎಲ್ ಮಾದರಿ 8 ಎಂ.ಎಲ್.ಡಿ ಎಸ್.ಟಿ.ಪಿ ನಿರ್ಮಾಣ ಹಾಗೂ ಒಳಚರಂಡಿ ಜಾಲದ ಉಳಿಕೆ ಕಾಮಗಾರಿಗಳು (ಪ್ಯಾಕೇಜು-02ಐಎಲ್‌ಕೆ02).	ಕಾಮಗಾರಿ ಪೂರ್ಣಗೊಂಡಿದೆ.
11	ಕಲ್ಬುರ್ಗಿ	ಕಲ್ಬುರ್ಗಿ	ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಪ್ಯಾಕೇಜು-03ಜಿಯುಬಿ02).	ಕಾಮಗಾರಿ ಪೂರ್ಣಗೊಂಡಿದೆ.
12		ಶಹಬಾದ್	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಎಸ್‌ಬಿಡಿ01).	ಕಾಮಗಾರಿ ಪೂರ್ಣಗೊಂಡಿದ್ದು, ನಿರ್ವಹಣೆ ಹಂತದಲ್ಲಿದೆ.

ಕ್ರ. ಸಂ.	ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಕಾಮಗಾರಿ ಹೆಸರು	ಷರ
13	ಯಾದಗೀರ್	ಯಾದಗೀರ್	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ವೈಜಿಆರ್01).	ಕಾಮಗಾರಿ ಪೂರ್ಣಗೊಂಡು, ಪ್ರಾಯೋಗಿಕ ಹಂತದಲ್ಲಿದೆ.
14	ಬೀದರ್	ಬೀದರ್	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಡಿಆರ್01).	ಕಾಮಗಾರಿ ಪೂರ್ಣಗೊಂಡಿದ್ದು, ನಿರ್ವಹಣೆ ಹಂತದಲ್ಲಿದೆ.
15		ಬಸವಕಲ್ಯಾಣ	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಎಸ್‌ಕೆ01)	ಕಾಮಗಾರಿ ಪೂರ್ಣಗೊಂಡಿದ್ದು, ನಿರ್ವಹಣೆ ಹಂತದಲ್ಲಿದೆ.
16	ಬಳ್ಳಾರಿ	ಬಳ್ಳಾರಿ	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಎಲ್‌ವೈ01).	ಕಾಮಗಾರಿ ಪ್ರಗತಿಯಲ್ಲಿದೆ
17		ಹೊಸಪೇಟೆ	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಹೆಚ್‌ಪಿಟಿ01)	ಕಾಮಗಾರಿ ಪ್ರಗತಿಯಲ್ಲಿದೆ
18		ಹೊಸಪೇಟೆ	ಒಳಚರಂಡಿ ವ್ಯವಸ್ಥೆ (ಪ್ಯಾಕೇಜು–01ಹೆಚ್‌ಪಿಟಿ02ಸಿ).	ಕಾಮಗಾರಿ ಪ್ರಗತಿಯಲ್ಲಿದೆ
19	ರಾಯಚೂರು	ರಾಯಚೂರು	ಹೊಸೂರು ವಲಯದಲ್ಲಿ ಒಳಚರಂಡಿ ಜಾಲ 68 ಕಿ.ಮಿ ಮತ್ತು 8 ಎಂಎಲ್‌ಡಿ ಎಸ್.ಟಿ.ಪಿ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜು–02ಆರ್‌ಸಿಆರ್02).	ಕಾಮಗಾರಿ ಪೂರ್ಣಗೊಂಡಿದೆ.
20		ರಾಯಚೂರು	ಏಕ್ಲಾಸ್‌ಪುರ ವಲಯದಲ್ಲಿ ಒಳಚರಂಡಿ ಜಾಲ 64 ಕಿ.ಮಿ ಮತ್ತು 20 ಎಂಎಲ್‌ಡಿ ಎಫ್.ಎ.ಎಲ್ ಮಾದರಿ ಎಸ್.ಟಿ.ಪಿ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜು–04ಆರ್‌ಸಿಆರ್02).	ಕಾಮಗಾರಿ ಪೂರ್ಣಗೊಂಡಿದೆ.
21		ರಾಯಚೂರು	24X7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಆರ್‌ಸಿಆರ್01)	ಕಾಮಗಾರಿ ಪ್ರಗತಿಯಲ್ಲಿದೆ
22	ಸಿಂಧನೂರು	ಸಿಂಧನೂರು	24X7 ನಿರಂತರ ನೀರು ಸರಬರಾಜು ಕಾಮಗಾರಿ (04ಎಸ್‌ಎನ್‌ಡಿ01)	ಕಾಮಗಾರಿ ಪ್ರಗತಿಯಲ್ಲಿದೆ
23		ಸಿಂಧನೂರು	ಒಳಚರಂಡಿ ಒದಗಿಸುವ ಹಾಗೂ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು–03ಎಸ್‌ಎನ್‌ಡಿ02) .	ಕಾಮಗಾರಿ ಪ್ರಗತಿಯಲ್ಲಿದೆ.
24	ಚಾಮರಾಜನಗರ	ಚಾಮರಾಜನಗರ	ಒಳಚರಂಡಿ ವ್ಯವಸ್ಥೆ ನಿರ್ಮಾಣ, 9.0 ಎಂ.ಎಲ್.ಡಿ ಎಫ್‌ಎಎಲ್ ಮಾದರಿಯ ಎಸ್‌ಟಿಪಿ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳು ಹಾಗೂ ಮಳೆ ನೀರು ಚರಂಡಿ ನಿರ್ಮಾಣ (ಪ್ಯಾಕೇಜು–02ಸಿಆರ್‌ಎನ್02)	ಕಾಮಗಾರಿ ಪೂರ್ಣಗೊಂಡಿದೆ.

ಅನುಬಂಧ - 4

ಕ್ರ. ಸ.	ಜಿಲ್ಲಾ ಹೆಸರು	ಯೋಜನಾ ಪಟ್ಟಣ	ಕೈಗೊಂಡ ಕಾಮಗಾರಿ	ಪೂರ್ಣ ಗೊಂಡ ದಿನಾಂಕ	ಪ್ರಸ್ತುತ/ಷರಾ
1.	ತುಮಕೂರು	ತಿಪಟೂರು	ರೊಚ್ಚು ಸಂಸ್ಕರಣ ಘಟಕ	31.5.2017	ಪೂರ್ಣಗೊಂಡಿರುತ್ತದೆ
2.	ಉತ್ತರ ಕನ್ನಡ	ಹಳಿಯಾಳ	ನಿರಂತರ ನೀರು ಸರಬರಾಜು	31.5.2017	ಪೂರ್ಣಗೊಂಡಿರುತ್ತದೆ
3.	ದಾವಣಗೇರೆ	ಹರಿಹರ	ಒಳಚರಂಡಿ ಯೋಜನೆ	30.6.2018	ಪೂರ್ಣಗೊಂಡಿರುತ್ತದೆ
4.	ಮೈಸೂರು	ನಂಜನಗೂಡು	ನಿರಂತರ ನೀರು ಸರಬರಾಜು	31.3.2019	ಪೂರ್ಣಗೊಂಡಿರುತ್ತದೆ
5.	ಬೀದರ್	ಹುಮ್ನಾಬಾದ್	ಒಳಚರಂಡಿ ಯೋಜನೆ	15.10.2019	ಪೂರ್ಣಗೊಂಡಿರುತ್ತದೆ
6.	ರಾಮನಗರ	ಮಾಗಡಿ	ನಿರಂತರ ನೀರು ಸರಬರಾಜು	ಪಟ್ಟಣದಲ್ಲಿ ವಿನ್ಯಾಸ ಸರಿಪಡಿಸುವಿಕೆ/ ಹೆಚ್ಚುವರಿ ಕಾಮಗಾರಿಗಳನ್ನು ಹಾಗೂ ವಲಯವಾರು ಕಾರ್ಯಾರಂಭಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಡಿಸೆಂಬರ್-2020 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.	
7.	ಶಿವಮೊಗ್ಗ	ಭದ್ರಾವತಿ - ನಗರದಲ್ಲಿ ಬಾಕಿ ಒಳಚರಂಡಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಯೋಜಿಸಲಾಗಿದ್ದು, ದಿನಾಂಕ: 14.2.2020 ರಂದು ಸರ್ಕಾರಕ್ಕೆ ರೂ.21.06 ಕೋಟಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಕೆಯುಐಡಿಎಫ್‌ಸಿ ಯಿಂದ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಅನುದಾನ ಲಭ್ಯವಿಲ್ಲದಿರುವುದರಿಂದ ಹಣಕಾಸು ಸಂಸ್ಥೆಗಳಿಂದ ಸಾಲ ರೂಪದಲ್ಲಿ ಹಣ ಹೊಂದಿಸಲು ಸೂಚನೆ ನೀಡಿರುವ ಪ್ರಯುಕ್ತ; ನಗರ ಸ್ಥಳೀಯ ಸಂಸ್ಥೆ ಠರಾವಿನೊಂದಿಗೆ ಬ್ಯಾಂಕ್ ಸಾಲ ಪಡೆಯಲು ಅನುಮೋದನೆ ಕೋರಿ ಪತ್ರ ಸಂ.364456/ಡಿಎಂಎ/ಡಿಇವಿ/ಎಂಐಎಸ್ಸಿಯು/ 25/2020 ದಿನಾಂಕ:19.10.2020 ರಲ್ಲಿ ಸರ್ಕಾರ ಕ್ಕೆ ಪ್ರಸ್ತಾವನೆ ಸಲ್ಲಿಸಿದೆ.			

ಅನುಬಂಧ - 5

ಕ್ರ.ಸ.	ಯೋಜನಾ ಪಟ್ಟಣ	ಕೈಗೊಂಡ ಕಾಮಗಾರಿ	ಪ್ರಸ್ತುತ/ಷರಾ
1.	ತಿಪಟೂರು	ಹಂತ-2 ರ ಒಳಚರಂಡಿ ಯೋಜನೆ	ಸದರಿ ಕಾಮಗಾರಿಯನ್ನು ರೂ.2415 ಲಕ್ಷ ಮೊತ್ತಕ್ಕೆ ದಿನಾಂಕ: 13.10.2017 ರಂದು ಗುತ್ತಿಗೆ ನೀಡಲಾಗಿದ್ದು, ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ
2.	ಕೊಳ್ಳೇಗಾಲ	ನಿರಂತರ ನೀರು ಸರಬರಾಜು	ಯೋಜನೆಗೆ 54.00 (ಸ್ಥಳೀಯ ಸಂಸ್ಥೆಯ ಮೂಲಕ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ರೂ.11.96 ಕೋಟಿ ಹೊರತುಪಡಿಸಿ) (ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿ) ಮೊತ್ತಕ್ಕೆ ದಿನಾಂಕ: 25.4.2019 ರಂದು ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಗುತ್ತಿಗೆ ಕರಾರಿನನ್ವಯ ದಿನಾಂಕ: 31.10.2021 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಅನುಬಂಧ-6

ಕ್ರ.ಸಂ	ನಗರ/ಪಟ್ಟಣ	ಕಾಮಗಾರಿ	ಅನುಮೋದನೆಯಾದ ಅನುದಾನ (ರೂ. ಕೋಟಿಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)
1	ದಾವಣಗೆರೆ	ಕುಡಿಯುವ ನೀರು ಸರಬರಾಜು ಕಾಮಗಾರಿ	174.96	209.65
2	ರಾಣೆಬೆನ್ನೂರು	ಕುಡಿಯುವ ನೀರು ಸರಬರಾಜು ಕಾಮಗಾರಿ	96.36	
3		ಗಂಗಾಜಲ ದೊಡ್ಡಕೆರೆ ಪುನರುಜ್ಜೀವನಕಾಮಗಾರಿ	19.87	
4	ಮಂಗಳೂರು	ಸಗಟು ನೀರು ಕಾಮಗಾರಿ	32.51	
5		ಸುರತ್ಕಲ್ ಮತ್ತು ಮಂಗಳೂರು ನಗರದಲ್ಲಿ ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು	55.50	
6		ಮಂಗಳೂರು ನಗರದ ವಲಯ 1,4,7 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	55.30	
7		ಮಂಗಳೂರು ವಲಯ 7 ಮತ್ತು ಹಳೆಯ ಮಂಗಳೂರು ನಗರದಲ್ಲಿ ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಮಗಾರಿ.	36.21	
8	ಉಡುಪಿ	ಸಗಟು ನೀರು ಕಾಮಗಾರಿ	122.50	
9	ಉಡುಪಿ	ಕುಡಿಯುವ ನೀರು ಸರಬರಾಜು ಕಾಮಗಾರಿ	9.03	

ಟ್ರಾಂಚ್-1

ಕ್ರ. ಸಂ	ನಗರ ಸ್ಥಳೀಯ ಸಂಸ್ಥೆ ಹೆಸರು	ಕಾಮಗಾರಿ ಹೆಸರು	ಆರ್ಥಿಕ ಗುರಿ (ರೂ. ಕೋಟಿಗಳಲ್ಲಿ)	ಆರ್ಥಿಕ ಪ್ರಗತಿ (ರೂ. ಕೋಟಿಗಳಲ್ಲಿ)	ಪ್ರಸ್ತುತ ಸ್ಥಿತಿ
1	ದಾವಣಗೆರೆ ಮಹಾನಗರ ಪಾಲಿಕೆ	ಒಳಚರಂಡಿ ಕಾಮಗಾರಿ	99.61	93.07	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
2		ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ)	39.90	39.50	ಕಾಮಗಾರಿಯು ಪೂರ್ಣಗೊಂಡಿದ್ದು ಕಾರ್ಯಾಚರಣೆ ಮತ್ತು ನಿರ್ವಹಣೆ ಹಂತದಲ್ಲಿರುತ್ತದೆ.
3		ಸಗಟು ನೀರು ಕಾಮಗಾರಿ	77.83	76.89	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
4		24/7 ನೀರು ಸರಬರಾಜು ಕಾಮಗಾರಿ	319.25	240.93	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
5	ಹರಿಹರ ನಗರ ಸಭೆ	ಒಳಚರಂಡಿ ಕಾಮಗಾರಿ	65.47	64.74	ಕಾಮಗಾರಿಯು ಪೂರ್ಣಗೊಂಡಿದ್ದು Trial Run ಹಂತದಲ್ಲಿರುತ್ತದೆ.
6		ಸಗಟು ನೀರು ಕಾಮಗಾರಿ	24.68	29.48	ಕಾಮಗಾರಿಯು ಪೂರ್ಣಗೊಂಡಿದ್ದು Trial Run ಹಂತದಲ್ಲಿರುತ್ತದೆ.
7		24/7 ನೀರು ಸರಬರಾಜು ಕಾಮಗಾರಿ	45.52	47.52	ಕಾಮಗಾರಿಯು ಪೂರ್ಣಗೊಂಡಿದ್ದು Trial Run ಹಂತದಲ್ಲಿರುತ್ತದೆ.
8	ಬ್ಯಾಡಗಿ ಪುರಸಭೆ	ಒಳಚರಂಡಿ ಕಾಮಗಾರಿ	61.53	55.38	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
9		ಸಗಟು ನೀರು ಕಾಮಗಾರಿ	6.35	6.35	ಕಾಮಗಾರಿಯು ಪೂರ್ಣಗೊಂಡಿರುತ್ತದೆ.
10		24/7 ನೀರು ಸರಬರಾಜು ಕಾಮಗಾರಿ	21.19	16.75	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
11	ರಾಣೆಬೆನ್ನೂರು ನಗರ ಸಭೆ	24/7 ನೀರು ಸರಬರಾಜು ಕಾಮಗಾರಿ	106.86	109.15	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
12		ಗಂಗಾಜಲ ದೊಡ್ಡಕೆರೆ ಪುನರುಜ್ಜೀವನ ಕಾಮಗಾರಿ	20.88	16.91	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಟ್ರಾಂಚ್-2

ಕ್ರ ಸಂ	ನಗರ ಸ್ಥಳೀಯ ಸಂಸ್ಥೆ ಹೆಸರು	ಕಾಮಗಾರಿ ಹೆಸರು	ಆರ್ಥಿಕ ಗುರಿ (ರೂ. ಕೋಟಿಗಳಲ್ಲಿ)	ಆರ್ಥಿಕ ಪ್ರಗತಿ (ರೂ. ಕೋಟಿಗಳಲ್ಲಿ)	ಪ್ರಸ್ತುತ ಸ್ಥಿತಿ
1	ಮಂಗಳೂರು ಮಹಾನಗರ ಪಾಲಿಕೆ	24/7 ಕುಡಿಯುವ ನೀರು ಸರಬರಾಜು ಕಾಮಗಾರಿ	ವಿನ್ಯಾಸದ ಮೌಲ್ಯಮಾಪನವು ಅನುಮೋದನೆಯ ಹಂತದಲ್ಲಿರುತ್ತದೆ. ರೂ 66.93 ಕೋಟಿಗಳನ್ನು ಗುತ್ತಿಗೆದಾರರಿಗೆ mobilization advance ರೂಪದಲ್ಲಿ ನೀಡಲಾಗಿರುತ್ತದೆ.		
2		ಸಗಟು ನೀರು ಕಾಮಗಾರಿ	30.59	9.09	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
3		ಹಳೆಯ ಒಳಚರಂಡಿ ಪಂಪಿಂಗ್ ಮೇನ್ ಪೈಪಲೈನ್ ಬದಲಾವಣೆ ಕಾಮಗಾರಿ.	72.83	65.99	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
4		ಮಂಗಳೂರು ವಲಯ 7 ಮತ್ತು ಹಳೆಯ ಮಂಗಳೂರು ನಗರದಲ್ಲಿ ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಮಗಾರಿ.	12.97	5.68	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
5		ಮಂಗಳೂರು ನಗರದ ವಲಯ 1,4,7ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	19.10	8.82	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
6		ಮಂಗಳೂರು ನಗರದ ವಲಯ 9,12&13ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	2.86	1.38	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
7		ಸುರತ್ಕಲ್ ಮತ್ತು ಮಂಗಳೂರು ನಗರದಲ್ಲಿ ಮಿಸ್ಸಿಂಗ್ ಲಿಂಕಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	47.11	25.88	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
8		ಮಂಗಳೂರು ನಗರದ ವಲಯ 3 & 5 ರಲ್ಲಿ ಪ್ರಸ್ತುತ ವಿರುವ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಮಗಾರಿ.	2.86	-	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
9	ಉಡುಪಿ ನಗರ ಸಭೆ	24/7 ನೀರು ಸರಬರಾಜು ಕಾಮಗಾರಿ	34.92	33.19	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
10		ಸಗಟು ನೀರು ಕಾಮಗಾರಿ	63.06	57.12	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
11		45 ಎಂಎಲ್‌ಡಿ ನೀರು ಶುದ್ಧೀಕರಣ ಘಟಕ ನಿರ್ಮಾಣ	-	-	ಕಾಮಗಾರಿಗೆ ದಿನಾಂಕ: 02.09.2020 ಟೆಂಡರ್ ಆಹ್ವಾನಿಸಲಾಗಿರುತ್ತದೆ
12	ಕುಂದಾಪುರ ಪುರಸಭೆ	24/7 ನೀರು ಸರಬರಾಜು ಕಾಮಗಾರಿ	26.94	18.84	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ
13	ಪುತ್ತೂರು ನಗರ ಸಭೆ	24/7 ನೀರು ಸರಬರಾಜು ಕಾಮಗಾರಿ	20.82	23.61	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ

ಅನುಬಂಧ-9

9 ಪಟ್ಟಣಗಳ ಯೋಜನೆಯಡಿ ದಿನಾಂಕ: 30.11.2020 ರವರೆಗಿನ ಮಾಸಿಕ ಸ್ಥಿತಿ ವರದಿ

ಕ್ರ.ಸಂ	ಪಟ್ಟಣಗಳು	ಗುತ್ತಿಗೆದಾರರ ಹೆಸರು ಮೆ||	ಭೌತಿಕ ಗುರಿ	ಕಾಮಗಾರಿಯು ಪ್ರಾರಂಭವಾದ ದಿನಾಂಕ / ಕಾಮಗಾರಿಯು ಮುಕ್ತಾಯವಾಗುವ ದಿನಾಂಕ / ಇ.ಓ.ಟಿ	ಗುತ್ತಿಗೆ ಮೊತ್ತ (ರೂ. ಕೋಟಿಗಳಲ್ಲಿ)	ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
1	ಮುಲ್ಕಿ	ಮೆ|| ಪ್ರಗತಿ ಕನ್ಸ್ಟ್ರಕ್ಷನ್ಸ್	95 ಕಿ.ಮೀ, ಓ.ಹೆಚ್.ಟಿ 7.50 ಲಕ್ಷ ಲೀಟರ್ ಸಾಮರ್ಥ್ಯ, 2970 ಸಂಖ್ಯೆ ಮನೆ ನಳ ಸಂಪರ್ಕ	17.01.2018	15.87	88%	95%
				21.07.19/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.10.2020 ರವರೆಗೆ ವಿಸ್ತರಿಸಲಾಗಿದೆ.		13.97 ಅಧಿ	(95 ಕಿ.ಮೀ ಪೈಪ್‌ಲೈನ್, ಮನೆ ನಳ ಸಂಪರ್ಕ-2970 ಸಂಖ್ಯೆ) ಮತ್ತು ಓ.ಹೆಚ್.ಟಿ ಕಾಮಗಾರಿಯು ಪೂರ್ಣಗೊಂಡಿದೆ.
2	ತೆಕ್ಕಲಕೋಟೆ	ಮೆ|| ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್.	64.07 ಕಿ.ಮೀ, 2 ಸಂಖ್ಯೆ ಓ.ಹೆಚ್.ಟಿ - 2.55 ಲಕ್ಷ ಲೀಟರ್ ಸಾಮರ್ಥ್ಯ, ಇಂಪೌಂಡಿಂಗ್ ರಿಸರ್ವೈಯರ್, 4689 ಮನೆ ನಳ ಸಂಪರ್ಕ, ಡಬ್ಲ್ಯೂಟಿಪಿ-5 ಎಂ.ಎಲ್.ಡಿ, ವಿ.ಟಿ ಪಂಪ್ಸ್ ಮತ್ತು ಟ್ರಾನ್ಸ್‌ಫಾರ್ಮರ್ ಬದಲಾಯಿಸುವುದು.	8.3.2018	21.73	27%	40%
				8.9.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.03.2021 ರವರೆಗೆ ವಿಸ್ತರಿಸಲಾಗಿದೆ.		5.92 ಅಧಿ	(442.55 ಕಿ.ಮೀ ಪೈಪ್‌ಲೈನ್, 8.89 ಹೈಡ್ರೋ ಟೆಸ್ಟ್), ಇಂಪೌಂಡಿಂಗ್ ರಿಸರ್ವೈಯರ್. ಮನೆ ನಳ ಸಂಪರ್ಕ-309 ಸಂಖ್ಯೆ, ದೇವಿನಗರದಲ್ಲಿ ಓ.ಹೆಚ್.ಟಿ ಕಟ್ಟಡ ನಿರ್ಮಾಣ, ಬಾಟಮ್ ಸ್ಲಾಬ್ ಮತ್ತು ಗೋಡೆ ಕಾಂಕ್ರೀಟ್ ನಿರ್ಮಾಣ ಮತ್ತು ಬಿಳ್ಳಾರಿ ರಸ್ತೆಯಲ್ಲಿರುವ ಓ.ಹೆಚ್.ಟಿ ನಿರ್ಮಾಣ ನೆಲ ಮಟ್ಟದ ಕಾಲಮ್ ಕಾಂಕ್ರೀಟ್ ಪೂರ್ಣಗೊಂಡಿದೆ. ಡಬ್ಲ್ಯೂಟಿಪಿ 15% ಪೂರ್ಣಗೊಂಡಿದೆ.
3	ಕೊಟ್ಟೂರು	ಮೆ|| ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್.	105.76 ಕಿ.ಮೀ, ಓ.ಹೆಚ್.ಟಿ -5 ಲಕ್ಷ ಲೀಟರ್ ಸಾಮರ್ಥ್ಯ, 4689 ಮನೆ ನಳ ಸಂಪರ್ಕ	03-09-2018	13.35	23%	35%
				09.09.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.03.2021 ರವರೆಗೆ ವಿಸ್ತರಿಸಲಾಗಿದೆ.		3.08 ಅಧಿ	87.94 ಕಿ.ಮೀ ಪೈಪ್‌ಲೈನ್, 66 ಕಿ.ಮೀ ಹೈಡ್ರೋ ಟೆಸ್ಟಿಂಗ್, ಮನೆ ನಳ ಸಂಪರ್ಕ - 1111 ಸಂಖ್ಯೆ, ಮೊದಲನೇ ಫ್ಲೋರ್ ಲೆವಲ್‌ನಿಂದ 2.2 ಮೀಟರ್ ಎತ್ತರದವರೆಗೆ ಕಾಲಮ್ ಪೂರ್ಣಗೊಂಡಿದೆ.
4	ಕಂಪ್ಲಿ	ಮೆ|| ಶ್ರೀ. ಸುಭಾ ಸೇಲ್ಸ್	123.75 ಕಿ.ಮೀ ಪೈಪ್ ನೆಟ್‌ವರ್ಕ್, 5 ಎಂ.ಎಲ್.ಡಿ ಡಬ್ಲ್ಯೂಟಿಪಿ, ಓ.ಹೆಚ್.ಟಿ -10 ಲಕ್ಷ ಲೀಟರ್ ಸಾಮರ್ಥ್ಯ, 8810 ಮನೆ ನಳ ಸಂಪರ್ಕ, ವಿ.ಟಿ ಪಂಪ್ಸ್ ಮತ್ತು ಟ್ರಾನ್ಸ್‌ಫಾರ್ಮರ್ ಬದಲಾಯಿಸುವುದು.	13-03-18	22.24	83%	96%
				13.09.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.12.2020 ರವರೆಗೆ ವಿಸ್ತರಿಸಲಾಗಿದೆ.		18.39 ಅಧಿ	121.75 ಕಿ.ಮೀ ಪೈಪ್‌ಲೈನ್, 117.50 ಕಿ.ಮೀ ಹೈಡ್ರೋ ಟೆಸ್ಟ್, ಮನೆ ನಳ ಸಂಪರ್ಕ 8185 ಸಂಖ್ಯೆ, ಡಬ್ಲ್ಯೂಟಿಪಿ ಮತ್ತು ಓ.ಹೆಚ್.ಟಿ ಕಾಮಗಾರಿಗಳು ಪೂರ್ಣಗೊಂಡಿದೆ, ಪಂಪ್‌ಸೆಟ್ಸ್ ಮತ್ತು ಮೋಟರ್ ಬದಲಾವಣೆಯನ್ನು ಜ್ಯಾಕ್‌ವೆಲ್ ಮತ್ತು ಡಬ್ಲ್ಯೂಟಿಪಿಯಲ್ಲಿ ಬದಲಾಯಿಸಲಾಗಿದೆ. 27.75 ಕಿ.ಮೀ ರಸ್ತೆ ಪುನಃ ನಿರ್ಮಾಣ ಪೂರ್ಣಗೊಂಡಿದೆ.
5	ಮಹಾಲಿಂಗಪುರ	ಮೆ|| ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್.	46.410 ಕಿ.ಮೀ, 4600 ಮನೆ ನಳ ಸಂಪರ್ಕ	03-05-2018	10.84	35%	60%
				04.03.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.12.2020 ರವರೆಗೆ ವಿಸ್ತರಿಸಲಾಗಿದೆ.		3.78 ಅಧಿ	44.08 ಕಿ.ಮೀ ಪೈಪ್‌ಲೈನ್, 43.8 ಕಿ.ಮೀ ಹೈಡ್ರೋ ಟೆಸ್ಟ್, ಮನೆ ನಳ ಸಂಪರ್ಕ 2943 ಸಂಖ್ಯೆ, ಕಾಮಗಾರಿಯು ಪೂರ್ಣಗೊಂಡಿದೆ.
6	ತೇರದಾಳ	ಮೆ|| ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್.	70.38 ಕಿ.ಮೀ, 6600 ಮನೆ ನಳ ಸಂಪರ್ಕ	03-05-2018	16.18	24%	68%
				04.03.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.03.2021 ರವರೆಗೆ ವಿಸ್ತರಿಸಲಾಗಿದೆ.		3.96 ಅಧಿ	51.73 ಕಿ.ಮೀ ಪೈಪ್‌ಲೈನ್, 28 ಕಿ.ಮೀ ಹೈಡ್ರೋ ಟೆಸ್ಟ್, ಮನೆ ನಳ ಸಂಪರ್ಕ 312 ಸಂಖ್ಯೆ, ಕಾಮಗಾರಿಯು ಪೂರ್ಣಗೊಂಡಿದೆ.

7	ಮುಂಡರಗಿ	ಮೆ॥ ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್.	133.07 ಕಿ.ಮೀ, ಓ.ಹೆಚ್.ಟಿ 7.50 ಲಕ್ಷ ಲೀಟರ್ ಸಾಮರ್ಥ್ಯ, 5509 ಸಂಖ್ಯೆ ಮನೆ ನಳ ಸಂಪರ್ಕ	03-02-2018	17.43	12%	46%
				02.09.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.03.2021 ರವರಗೆ ವಿಸ್ತರಿಸಲಾಗಿದೆ.		2.08 ಅಡಿ	88.45 ಕಿ.ಮೀ ಪೈಪ್‌ಲೈನ್, 57.4 ಕಿ.ಮೀ ಹೈಡ್ರೋ ಟೆಸ್ಟ್, ಓ.ಹೆಚ್.ಟಿ (ಜಿ.ಎಲ್ + 4.05 ಎಂ) 40% ಪೂರ್ಣಗೊಂಡಿದೆ. ಮನೆ ನಳ ಸಂಪರ್ಕ 48 ಸಂಖ್ಯೆ ಕಾಮಗಾರಿಯು ಪೂರ್ಣಗೊಂಡಿದೆ.
8	ಮುದಗಲ್	ಮೆ॥ ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್.	101.72 ಕಿ.ಮೀ, 4 ಎಂ.ಎಲ್.ಡಿ ಡಬ್ಲ್ಯೂಟಿಪಿ, ಜ್ಯಾಕ್‌ವೆಲ್, ಓ.ಹೆಚ್.ಟಿ -10 ಲಕ್ಷ ಲೀಟರ್ ಸಾಮರ್ಥ್ಯ ಮತ್ತು ಜಿ.ಎಲ್.ಎಸ್.ಆರ್- 10 ಲಕ್ಷ ಲೀಟರ್ ಸಾಮರ್ಥ್ಯ, 5100 ಸಂಖ್ಯೆ ಮನೆ ನಳ ಸಂಪರ್ಕ	03-07-2018	31.29	17%	25%
				15.08.2019/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 30.06.2021 ರವರಗೆ ವಿಸ್ತರಿಸಲಾಗಿದೆ.		5.18ಅಡಿ	49 ಕಿ.ಮೀ ಪೈಪ್‌ಲೈನ್, 4.61 ಕಿ.ಮೀ ಹೈಡ್ರೋ ಟೆಸ್ಟ್, 30% ಡಬ್ಲ್ಯೂಟಿಪಿ ಕಾಮಗಾರಿ, ಓ.ಹೆಚ್.ಟಿ 2ನೇ ಬ್ರೇಸ್ ಲೆವೆಲ್ ಕೆಳಭಾಗದವರೆಗೆ ಕಾಲಮ್ ಪೂರ್ಣಗೊಂಡಿದೆ, ಜಿ.ಎಲ್.ಎಸ್.ಆರ್ 4ನೇ ಲಿಫ್ಟ್ , ಜ್ಯಾಕ್‌ವೆಲ್ 5ನೇ ಲಿಫ್ಟ್ ರವರಗೆ ಕಾಂಕ್ರೀಟ್ ನಿರ್ಮಾಣ ಪೂರ್ಣಗೊಂಡಿರುತ್ತದೆ.
9	ಕೆ.ಆರ್ ಪೇಟೆ	ಮೆ॥ ಶ್ರೀ. ಸುಭಾ ಸೇಲ್ಸ್	5.06 ಕಿ.ಮೀ ಎಂ.ಎಸ್ ಪೈಪ್, 11 ಎಂ.ಎಲ್.ಡಿ ಡಬ್ಲ್ಯೂಟಿಪಿ, ಜ್ಯಾಕ್‌ವೆಲ್.	14-08-19	17	6%	16%
				13.02.2021/ ಕಾಮಗಾರಿಯ ಕಾಲವಧಿ ವಿಸ್ತರಣೆಯನ್ನು ದಿನಾಂಕ: 31.08.2021 ರವರಗೆ ವಿಸ್ತರಿಸಲಾಗಿದೆ.		1.06 ಅಡಿ	3.5 ಕಿ.ಮೀ ಪೈಪ್‌ಲೈನ್, 2.35 ಕಿ.ಮೀ ಹೈಡ್ರೋ ಟೆಸ್ಟ್, ಡಬ್ಲ್ಯೂಟಿಪಿನಲ್ಲಿ ಫಿಲ್ಟರ್ ಹೌಸ್ ಬೆಡ್ ಮತ್ತು ರ್ಯಾಫ್ಟ್ ಕಾಂಕ್ರೀಟ್, ಗೋಡೆಗಳು 1.5 ಮೀಟರ್ ಎತ್ತರಕ್ಕೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಅನುಬಂಧ - ೩

(ಅ) ತಿಪಟೂರು ಹಂತ-2ರ ಒಳಚರಂಡಿ ಕಾಮಗಾರಿ ವಿವರ:

ಭೌತಿಕ		ಆರ್ಥಿಕ (ರೂ.ಕೋಟಿಗಳಲ್ಲಿ)		ಪ್ರಸ್ತುತ
ಗುರಿ	ಪ್ರಗತಿ	ಗುರಿ	ಪ್ರಗತಿ	
ನೆಟ್‌ವರ್ಕ್ ಜಾಲ-90.5ಕಿ.ಮಿ	89.00 ಕಿ.ಮಿ	24.15	20.82	ಸದರಿ ಕಾಮಗಾರಿಯನ್ನು ರೂ.2415 ಲಕ್ಷ ಮೊತ್ತಕ್ಕೆ ದಿನಾಂಕ: 13.10.2017 ರಂದು ಗುತ್ತಿಗೆ ನೀಡಲಾಗಿದ್ದು, ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ
ಮ್ಯಾನ್‌ಹೋಲ್-3076	3073ನಂ.			
ಗೃಹ ಸಂಪರ್ಕಗಳು-16000 ನಂ.	9620 ನಂ.			
ವೆಟ್‌ವೆಲ್-1 ನಂ.	1 ನಂ.			

(ಆ) ಕೊಳ್ಳೇಗಾಲ 24/7 ನೀರು ಸರಬರಾಜು ಕಾಮಗಾರಿ ವಿವರ:

ಭೌತಿಕ		ಆರ್ಥಿಕ (ರೂ.ಕೋಟಿಗಳಲ್ಲಿ)		ಪ್ರಸ್ತುತ
ಗುರಿ	ಪ್ರಗತಿ	ಗುರಿ	ಪ್ರಗತಿ	
ನೆಟ್‌ವರ್ಕ್ ಜಾಲ-187ಕಿ.ಮಿ	135 ಕಿ.ಮಿ	54.00 (ಸ್ಥಳೀಯ ಸಂಸ್ಥೆಯ ಮೂಲಕ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ರೂ.11.96 ಕೋಟಿ ಹೊರತುಪಡಿಸಿ)	14.16	ಸದರಿ ಕಾಮಗಾರಿಯನ್ನು ದಿನಾಂಕ: 25.4.2019 ರಂದು ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ದಿನಾಂಕ: 31.10.2021ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.
ಗೃಹ ಸಂಪರ್ಕಗಳು-16000	5500 ನಂ.			
ಒಹೆಚ್‌ಟಿ-6ನಂ.-7.50ಕಿ.ಲಿ	ಪ್ರಗತಿಯಲ್ಲಿರುತ್ತವೆ			
ಪಂಪ್‌ಹೌಸ್- 1 ನಂ.	ಪ್ರಗತಿಯಲ್ಲಿರುತ್ತದೆ			
ಪಂಪುಗಳ ಬದಲಿ ಜೋಡಣೆ/ರಿಪೇರ್- 4ನಂ.	ಪ್ರಗತಿಯಲ್ಲಿರುತ್ತದೆ			

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 328 ಸಿಎಸ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ರಾಮದಾಸ್ ಎಸ್. ಎ (ಕೃಷ್ಣರಾಜ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1044 ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ರಾಮದಾಸ್ ಎಸ್. ಎ (ಕೃಷ್ಣರಾಜ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1044 ಕ್ಕೆ ಉತ್ತರದ 20 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1044
ಸದಸ್ಯರ ಹೆಸರು : ಶ್ರೀ ರಾಮದಾಸ್ ಎಸ್.ಎ (ಕೃಷ್ಣರಾಜ)
ಉತ್ತರಿಸಬೇಕಾದ ದಿನಾಂಕ : 11-12-2020
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿನ ಮಹಾನಗರ ಪಾಲಿಕೆಗಳ ಪೈಕಿ ಯಾವ ಯಾವ ಮಹಾನಗರ ಪಾಲಿಕೆಗಳಲ್ಲಿ ಬೀದಿ ದೀಪಗಳನ್ನು ಎಲ್.ಇ.ಡಿ ದೀಪಗಳನ್ನಾಗಿ ಪರಿವರ್ತಿಸಿ ಅಳವಡಿಸಲು ಸರ್ಕಾರವು ಉದ್ದೇಶಿಸಿದೆ; (ವಿವರ ನೀಡುವುದು);	ರಾಜ್ಯದ ಹತ್ತು ಮಹಾನಗರ ಪಾಲಿಕೆಗಳಲ್ಲಿ (ಬಿಬಿಎಂಪಿ ಹೊರತುಪಡಿಸಿ) (06 ಸ್ಮಾರ್ಟ್ ಸಿಟಿಗಳನ್ನು ಒಳಗೊಂಡಂತೆ) ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 550 ಪಿ.ಆರ್.ಜೆ 2017, ದಿನಾಂಕ:15/03/2018 ರನ್ವಯ ಹಾಲಿ ಇರುವ ಸಾಂಪ್ರದಾಯಿಕ ಬೀದಿ ದೀಪಗಳನ್ನು ಬದಲಿಸಿ ಇಂದನ ಕ್ಷಮತೆಯುಳ್ಳ ಕೇಂದ್ರೀಕೃತ ಚಾಲನೆ ಮತ್ತು ನಿರ್ವಹಣೆಯುಳ್ಳ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.
ಆ	ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳೇನು; ಈ ಕುರಿತಾದ ಯೋಜನೆಯು ಯಾವ ಹಂತದಲ್ಲಿದೆ (ಸಂಪೂರ್ಣ ಮಾಹಿತಿ ನೀಡುವುದು);	ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 550 ಪಿ.ಆರ್.ಜೆ 2017, ದಿನಾಂಕ:15/03/2018 ರನ್ವಯ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೊದಲ ಹಂತದಲ್ಲಿ ವ್ಯವಹಾರಿಕ ಸಲಹೆಗಾರರಿಂದ ಬೀದಿ ದೀಪ ಸಮೀಕ್ಷೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ. ತುಮಕೂರು ಮಹಾನಗರ ಪಾಲಿಕೆಯಲ್ಲಿ (ಸ್ಮಾರ್ಟ್ ಸಿಟಿ) ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಉಳಿದ 05 ಸ್ಮಾರ್ಟ್ ಸಿಟಿಗಳಲ್ಲಿ ಪಿ.ಪಿ.ಪಿ ರಿಯಾಯಿತಿದಾರರ ನೇಮಕಾತಿ ಪ್ರಗತಿಯಲ್ಲಿರುತ್ತದೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಉಳಿದಂತೆ ಜಿಲ್ಲಾವಾರು ಪ್ರಗತಿಯನ್ನು **ಅನುಬಂಧ(1)** ರಲ್ಲಿ ನೀಡಲಾಗಿದೆ.
ಇ	ಈ ಯೋಜನೆಯಿಂದ ಸರ್ಕಾರಕ್ಕೆ ಆಗುವ ಪ್ರಯೋಜನಗಳೇನು;	ಈ ಯೋಜನೆಯಿಂದ ಸರ್ಕಾರಕ್ಕೆ ಆಗುವ ಪ್ರಯೋಜನಗಳು ಈ ಕೆಳಕಂಡಂತಿವೆ: I. ಸಾಂಪ್ರದಾಯಿಕ ಬೀದಿ ದೀಪಗಳನ್ನು ಇಂಧನ ಕ್ಷಮತೆಯುಳ್ಳ ಎಲ್.ಇ.ಡಿ ಬೀದಿ ದೀಪಗಳಿಂದ ಬದಲಿಸುವುದರಿಂದ ಶೇ.45% ರಿಂದ 55% ರಷ್ಟು ವಿದ್ಯುತ್ ಉಳಿತಾಯ ಉಂಟಾಗುತ್ತದೆ.

		II. ಕೇಂದ್ರಿಕೃತ ಚಾಲನೆ ಮತ್ತು ನಿರ್ವಹಣೆಯಿಂದ ಈಗಿನ ನಿರ್ವಹಣಾ ವೆಚ್ಚದಲ್ಲಿ ಉಳಿತಾಯ ಉಂಟಾಗುತ್ತದೆ. III. ಆನ್‌ಲೈನ್ ದೂರು ನಿರ್ವಹಣೆ, Real Time Monitoring ಇವುಗಳಿಂದ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗುತ್ತದೆ. IV. ಯೋಜನೆಯ ಸಂಪೂರ್ಣ ಬಂಡಾವಾಳವನ್ನು ಖಾಸಗಿ ರಿಯಾಯಿತಿದಾರರು ಹೂಡುವುದರಿಂದ ಮತ್ತು ವಿದ್ಯುತ್ ಬಳಕೆಯಲ್ಲಾದ ಉಳಿತಾಯದಿಂದ ಪಿ.ಪಿ.ಪಿ. ರಿಯಾಯಿತಿದಾರರಿಗೆ ಇ.ಎಂ.ಐ ಮುಖಾಂತರ ಪಾವತಿ ಮಾಡುವುದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ.
ಈ	ಈ ಯೋಜನೆಯನ್ನು ತ್ವರಿತವಾಗಿ ಜಾರಿಗೆ ತರಲು ಸರ್ಕಾರಕ್ಕೆ ಇರುವ ಅಡೆತಡೆಗಳೇನು ಹಾಗೂ ಯಾವಾಗ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು (ವಿವರ ನೀಡುವುದು)?	ಕೋವಿಡ್ -19 ಕಾರಣದಿಂದ ಬೀದಿ ದೀಪ ಸಮೀಕ್ಷೆಯಲ್ಲಿ ಹಾಗೂ ಯೋಜನೆಯ ಅನುಷ್ಠಾನದಲ್ಲಿ ವಿಳಂಬ ಉಂಟಾಗಿರುತ್ತದೆ. ಪ್ರಸ್ತುತ, ಎಲ್ಲಾ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಮುಗಿದಿದ್ದು, 17 ಜಿಲ್ಲೆಗಳ ಬೇಸ್‌ಲೈನ್ ವರದಿ ಹಾಗೂ 10 ಜಿಲ್ಲೆಗಳ ಕಾರ್ಯ ಸಾಧ್ಯತಾ ವರದಿಗಳಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಅನುಮೋದನೆ ನೀಡಲಾಗಿರುತ್ತದೆ. ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಅಧಿಕಾರಯುಕ್ತ ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗಿದೆ

ಸಂಖ್ಯೆ:ನಅಇ 328 ಸಿಎಸ್‌ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ–1

ಜಿಲ್ಲೆಗಳು	ಪ್ರಗತಿ
ಮೈಸೂರು, ಹಾಸನ, ಮಂಡ್ಯ, ಗದಗ, ಯಾದಗಿರಿ, ವಿಜಯಪುರ, ಚಾಮರಾಜನಗರ, ಉಡುಪಿ, ತುಮಕೂರು ಮತ್ತು ಚಿಕ್ಕಮಗಳೂರು.	ಕಾರ್ಯ ಸಾಧ್ಯತಾ ವರದಿಗಳಿಗೆ ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಅನುಮೋದನೆ ನೀಡಲಾಗಿದೆ.
ಬೆಂಗಳೂರು (ಗ್ರಾ), ದಾವಣಗೆರೆ, ರಾಯಚೂರು, ಬಳ್ಳಾರಿ, ಬೆಳಗಾವಿ, ಬಾಗಲಕೋಟೆ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಉತ್ತರ ಕನ್ನಡ, ಕಲಬುರ್ಗಿ, ಕೋಲಾರ, ಕೊಡಗು ಮತ್ತು ದಕ್ಷಿಣ ಕನ್ನಡ	ಬೀದಿದೀಪ ಸಮೀಕ್ಷಾ ವರದಿಗಳಿಗೆ ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಅನುಮೋದನೆ ನೀಡಲಾಗಿದೆ.
ಕೊಪ್ಪಳ.	ಬೀದಿ ದೀಪ ಸಮೀಕ್ಷಾ ವರದಿಗೆ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ನೀಡಲಾಗಿದೆ
ಧಾರವಾಡ, ಬೀದರ್, ಶಿವಮೊಗ್ಗ	ಬೀದಿ ದೀಪ ಸಮೀಕ್ಷಾ ವರದಿಗಳನ್ನು ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆಗೆ ಸಲ್ಲಿಸಲಾಗಿದೆ.

Joint Director (Development)
Directorate of Municipal
Administration
Bengaluru

ಕರ್ನಾಟಕ ಸರ್ಕಾರ

ಸಂ: ನಅಇ 261 ಪಿಆರ್‌ಜೆ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:-15-12-2020

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ವೆಂಕಟ್‌ರಾವ್ ನಾಡಗೌಡ (ಸಿಂಧನೂರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1074 ಕ್ಕೆ ಉತ್ತರಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ವೆಂಕಟ್‌ರಾವ್ ನಾಡಗೌಡ (ಸಿಂಧನೂರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1074 ರ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ
(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪಿ.ಎಂ.ಸಿ),
ನಗರಾಭಿವೃದ್ಧಿ ಇಲಾಖೆ.
15.12.2020

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1074
2. ಸದಸ್ಯರ ಹೆಸರು : ಶ್ರೀ ವೆಂಕಟ್‌ರಾವ್ ನಾಡಗೌಡ (ಸಿಂಧನೂರು)
3. ಉತ್ತರಿಸಬೇಕಾದ ದಿನಾಂಕ : 11-12-2020
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಸಿಂಧನೂರು ನಗರದಲ್ಲಿ 24X7 ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಒಳಚರಂಡಿ ಯೋಜನೆಗಳ ನಿರ್ಮಾಣ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಸಿಂಧನೂರು ನಗರದಲ್ಲಿ 24X7 ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ. ಮಾರ್ಚ್-2020 ರಿಂದ ಕೋವಿಡ್-19 ಕಾರಣದಿಂದ ಲಾಕ್ ಡೌನ್ ಘೋಷಣೆಯಾದ ನಿಮಿತ್ತ ಕೂಲಿ ಕಾರ್ಮಿಕರ ಅಭಾವದಿಂದ ಕಾಮಗಾರಿಗಳು ಕುಂಠಿತವಾಗಿರುತ್ತದೆ. ಆದ ಕಾರಣ ಮಂದಗತಿಯಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಈ ಯೋಜನೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು ?	ಮಾರ್ಚ್ 2020 ರಿಂದ ಕೋವಿಡ್-19ರ ಕಾರಣ ಲಾಕ್ ಡೌನ್ ಘೋಷಣೆಯಾದ ನಿಮಿತ್ತ ಕೂಲಿ ಕಾರ್ಮಿಕರ ಅಭಾವದಿಂದ ಕಾಮಗಾರಿಗಳು ಕುಂಠಿತವಾಗಿತ್ತು. ಕಾಮಗಾರಿ ಪ್ರಾರಂಭಿಸಲು ಯಾವುದೇ ತೊಂದರೆಗಳು ಇಲ್ಲ.
ಇ)	ಈ ಯೋಜನೆಗಳ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?	ಕಾಮಗಾರಿಯನ್ನು ತೀವ್ರಗತಿಯಲ್ಲಿ ಈಗಾಗಲೇ ಪ್ರಾರಂಭಿಸಿದ್ದು, ಒಳಚರಂಡಿ ಕಾಮಗಾರಿಯನ್ನು ಫೆಬ್ರವರಿ 2021 ಕ್ಕೆ ಹಾಗೂ 24X7 ಕುಡಿಯುವ ನೀರಿನ ಯೋಜನೆಯನ್ನು ಏಪ್ರಿಲ್ 2021ಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.
ಈ)	ಸಿಂಧನೂರು ನಗರದ ಶಿವಜ್ಯೋತಿ ನಗರದ ಖಾಸಗಿ ಬಡಾವಣೆಯಲ್ಲಿ ಮನೆ ಇಲ್ಲದಿದ್ದರೂ ಸಹ ಕಾನೂನು ಬಾಹಿರವಾಗಿ ಖಾಸಗಿ ವ್ಯಕ್ತಿಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸಿಂಧನೂರು ನಗರದ ಒಳಚರಂಡಿ ಯೋಜನೆಯ ವಿಸ್ತೃತ ವರದಿಯನ್ನು ನಗರಸಭೆಯವರ ಮತ್ತು ಅಂದಿನ ಚುನಾಯಿತ ಪ್ರತಿನಿಧಿಗಳ ಸಲಹೆಯಂತೆ ತಯಾರಿಸಲಾಗಿದೆ. ಒಳಚರಂಡಿ ಕಾಮಗಾರಿಯು ಮಾರ್ಚ್ 2015ರಲ್ಲಿ ಪ್ರಾರಂಭಿಸಲಾಗಿದೆ. ಕಾನೂನುಬಾಹಿರವಾಗಿ ಕಾಮಗಾರಿಗಳನ್ನು ನಿರ್ವಹಿಸಿದ್ದಕ್ಕೆ ಯಾವುದೇ ದೂರುಗಳು ಇಲ್ಲಿಯವರೆಗೆ ಬಂದಿರುವುದಿಲ್ಲ.

ಉ)	ಹಾಗಿದ್ದಲ್ಲಿ, ಈ ರೀತಿ ಕಾನೂನು ಬಾಹಿರವಾಗಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮಕೈಗೊಂಡಿದೆಯೇ ?	ಅನ್ವಯಿಸುವುದಿಲ್ಲ.
ಊ)	ಹಾಗಿಲ್ಲದಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಗಳ ಮೇಲೆ ಕ್ರಮ ಜರುಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು? (ವಿವರಗಳನ್ನು ನೀಡುವುದು)	ಅನ್ವಯಿಸುವುದಿಲ್ಲ.

ಕಡತ ಸಂಖ್ಯೆ: ನಅಇ 261 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 114 ಸಮಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-12-2020

ಇಂದ:

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ರಾಜಾ ವೆಂಕಟಪ್ಪ ನಾಯಕ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1077ಗೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ರಾಜಾ ವೆಂಕಟಪ್ಪ ನಾಯಕ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1077ಗೆ ಉತ್ತರದ 20 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ರಾಜಾ ವೆಂಕಟಪ್ಪ ನಾಯಕ್ (ಮಾನ್ವಿ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1077
ಉತ್ತರಿಸಬೇಕಾದ ದಿನಾಂಕ	:	11-12-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ ಹಂತ-3ರ ಯೋಜನೆಯಡಿಯಲ್ಲಿ ಕಳೆದ ವರ್ಷ ಕೈಗೊಂಡ ಕಾಮಗಾರಿಗಳು ಯಾವುವು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ ಹಂತ-3ರ ಯೋಜನೆಯಡಿಯಲ್ಲಿ ಕಳೆದ ವರ್ಷ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಜಿಲ್ಲಾವಾರು **ಅನುಬಂಧ-1**ರಲ್ಲಿ ನೀಡಿದೆ.
ಆ)	ರಾಯಚೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ ಹಂತ-3ರ ಯೋಜನೆಯಡಿಯಲ್ಲಿ ಪರಿಷ್ಕೃತ ಕಾಮಗಾರಿಗಳಿಗೆ ಮಂಜೂರಾತಿಗಾಗಿ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಯಚೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ ಹಂತ-3ರ ಯೋಜನೆಯ ಪರಿಷ್ಕೃತ ಕಾಮಗಾರಿಗಳ ಮಂಜೂರಾತಿ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಇ)	ಹಾಗಿದ್ದಲ್ಲಿ, ಪರಿಷ್ಕೃತ ಕಾಮಗಾರಿಗಳಿಗೆ ಕೂಡಲೇ ಅನುಮೋದನೆ ನೀಡಿ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)	ರಾಯಚೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ ಹಂತ-3ರ ಯೋಜನೆಯಡಿಯ ಪರಿಷ್ಕೃತ ಕಾಮಗಾರಿಗಳ ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ದಿನಾಂಕ:29-09-2020 ರಂದು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು ರವರು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿರುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಬದಲಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ಕೋರಿ ದಿ:20-11-2020 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಏಕ ಕಡತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸರ್ಕಾರದಲ್ಲಿ ಅನುಮೋದನೆಯ ಹಂತದಲ್ಲಿರುತ್ತದೆ.

ಕಡತ ಸಂಖ್ಯೆ:ನಲಇ 114 ಸಮಸ 2020

ಡಾ||(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು.

ಅನುಬಂಧ -1

ನಗರೋತ್ಥಾನ(ಮುನಿಸಿಪಾಲಿಟಿ)- 3 ನೇ ಹಂತ ಯೋಜನೆಯ ಕಾಮಗಾರಿಗಳ ವಿವರ (ನವಂಬರ್ 2020 ಅಂತ್ಯಕ್ಕೆ)

ಕ್ರ.ಸ.	ಜಿಲ್ಲೆಯ ಹೆಸರು	ಯೋಜನೆಯ ಹಂಚಿಕೆ	ಒಟ್ಟು ಮಂಜೂರಾದ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸಬೇಕಾದ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡಿರುವ ಕಾಮಗಾರಿಗಳ ಶೇಕಡವಾರು ಪ್ರಗತಿ
1	ಉತ್ತರಕನ್ನಡ	12800.00	190	170	20	0	89.47
2	ಧಾರವಾಡ	2100.00	36	32	1	3	88.89
3	ಬೆಂಗಳೂರು (ನಗರ)	7250.00	94	80	0	14	85.11
4	ಗದಗ	7850.00	125	106	19	0	84.80
5	ಚಿಕ್ಕಮಗಳೂರು	6550.00	88	72	16	0	81.82
6	ಉಡುಪಿ	6200.00	70	57	1	12	81.43
7	ವಿಜಯಪುರ	7250.00	157	126	31	0	80.25
8	ಮೈಸೂರು	8950.00	104	82	17	5	78.85
9	ಚಿಕ್ಕಬಳ್ಳಾಪುರ	11950.00	122	94	18	10	77.05
10	ಬೆಳಗಾವಿ	24150.00	366	280	75	11	76.50
11	ಚಿತ್ರದುರ್ಗ	10150.00	98	73	20	5	74.49
12	ಕೋಲಾರ	11750.00	136	101	35	0	74.26
13	ದಾವಣಗೆರೆ	5400.00	68	50	18	0	73.53
14	ದಕ್ಷಿಣ ಕನ್ನಡ	8100.00	106	74	15	17	69.81
15	ಮಂಡ್ಯ	8500.00	89	62	7	20	69.66
16	ತುಮಕೂರು	8600.00	88	61	23	4	69.32
17	ಶಿವಮೊಗ್ಗ	7750.00	116	80	31	5	68.97
18	ಹಾವೇರಿ	11450.00	157	107	47	3	68.15
19	ಚಾಮರಾಜನಗರ	7150.00	72	49	14	9	68.06
20	ಕೊಪ್ಪಳ	10950.00	124	78	45	1	62.90
21	ರಾಯಚೂರು	12500.00	165	100	37	28	60.61
22	ಯಾದಗಿರಿ	11250.00	144	81	63	0	56.25
23	ಬಳ್ಳಾರಿ	13050.00	147	79	52	16	53.74
24	ಬೆಂಗಳೂರು (ಗ್ರಾಮಾಂತರ)	7250.00	89	45	34	10	50.56
25	ಬಾಗಲಕೋಟೆ	19150.00	149	71	48	30	47.65
26	ಕೊಡಗು	4100.00	49	22	22	5	44.90
27	ಹಾಸನ	9400.00	92	36	53	3	39.13
28	ರಾಮನಗರ	10250.00	106	38	67	1	35.85
29	ಬೀದರ್	9450.00	110	36	70	4	32.73
30	ಕಲಬುರಗಿ	7750.00	65	19	46	0	29.23
	ಒಟ್ಟು	**289000**	**3522**	**2361**	**945**	**216**	**67.04**

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 420 ಎಸ್.ಎಫ್.ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15-12-2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ) ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1045ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ) ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1045ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1045
ಸದಸ್ಯರ ಹೆಸರು	:	ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ)
ಉತ್ತರಿಸಬೇಕಾದ ದಿನಾಂಕ	:	11-12-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಸಭೆಗೆ ರಾಜ್ಯ ಆರ್ಥಿಕ ಆಯೋಗ (ಎಸ್.ಎಫ್.ಸಿ) ವಿಶೇಷ ಅನುದಾನದಡಿಯಲ್ಲಿ ರೂ.400.00 ಲಕ್ಷಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸರ್ಕಾರದ ಆದೇಶ ಸಂಖ್ಯೆ ನಅಇ 03 ಎಸ್‌ಎಫ್‌ಸಿ 2019, ದಿ 09-01-2019 ರಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ನಗರಸಭೆಗೆ ರೂ.400.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.
ಆ.	ಬಂದಿದ್ದಲ್ಲಿ, ರೂ.400.00 ಲಕ್ಷಗಳಲ್ಲಿ ನಗರದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;	ತದನಂತರ ಆರ್ಥಿಕ ಇಲಾಖೆಯ ನಿರ್ದೇಶನದನ್ವಯ ಸರ್ಕಾರದ ಪತ್ರ ಸಂಖ್ಯೆ: ನಅಇ 222 ಎಸ್‌ಎಫ್‌ಸಿ 2019, ದಿನಾಂಕ: 13-09-2019ರಲ್ಲಿ ಮಂಜೂರು ಮಾಡಲಾದ ಅನುದಾನ ರೂ.400.00 ಲಕ್ಷಗಳನ್ನು ತಡೆ ಹಿಡಿಯಲಾಗಿರುತ್ತದೆ.
ಇ.	ಸಲ್ಲಿಸಲಾಗಿದ್ದಲ್ಲಿ, ಯಾವಾಗ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಲಾಗುವುದು (ಮಾಹಿತಿ ನೀಡುವುದು)	ಆರ್ಥಿಕ ಇಲಾಖೆಯು ಸದರಿ ಅನುದಾನವನ್ನು ಮರು ಮಂಜೂರು ಮಾಡಿದಲ್ಲಿ ಮುಂದಿನ ಕ್ರಮವಹಿಸಲಾಗುವುದು.

ಕಡತ ಸಂಖ್ಯೆ:ನಅಇ 420 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 418 ಎಸ್.ಎಫ್.ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15-12-2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಾಮಪ್ಪ ಎಸ್. (ಹರಿಹರ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:535ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಾಮಪ್ಪ ಎಸ್. (ಹರಿಹರ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:535ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	535
ಸದಸ್ಯರ ಹೆಸರು	:	ಶ್ರೀ ರಾಮಪ್ಪ ಎಸ್. (ಹರಿಹರ)
ಉತ್ತರಿಸಬೇಕಾದ ದಿನಾಂಕ	:	11-12-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ದಾವಣಗೆರೆ ಜಿಲ್ಲೆ ಹರಿಹರ ನಗರದ ಮಾಚೇನಹಳ್ಳಿ, ಊರಮ್ಮ ದೇವಿ ದೇವಸ್ಥಾನದ ಹಿಂಬದಿಯ ಹಳ್ಳಕ್ಕೆ ಸೇತುವೆ ನಿರ್ಮಾಣ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ದಾವಣಗೆರೆ ಜಿಲ್ಲೆ ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳ ವಿವೇಚನ ನಿಧಿಯಡಿ ಎಸ್.ಎಫ್.ಸಿ. ವಿಶೇಷ ಅನುದಾನದಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಆಇ/03/ ಎಸ್.ಎಫ್.ಸಿ/2019, ದಿನಾಂಕ: 09-01-2019ರಲ್ಲಿ ರೂ. 800.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಅನುದಾನದಡಿ ಮಾಚೇನಹಳ್ಳಿ, ಊರಮ್ಮ ದೇವಿ ದೇವಸ್ಥಾನದ ಹಿಂಬದಿಯ ಹಳ್ಳಕ್ಕೆ ಸೇತುವೆ ಹಾಗೂಬಾಕ್ಸ್ ಚರಂಡಿ ನಿರ್ಮಾಣ ಮಾಡುವ ಕಾಮಗಾರಿಯ ಕ್ರಿಯಾ ಯೋಜನೆಯನ್ನು ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ ರವರ ಅಧಿಕೃತ ಜ್ಞಾಪನ ದಿನಾಂಕ:10-06-2019ರಲ್ಲಿ ಅನುಮೋದನೆಯಾಗಿರುತ್ತದೆ.
